(SMT. B. L. SUBBAMMA)

(*b*) if so, whether they have contemplated any scheme to bring this land under cultivation;

(*c*) whether they intend to allot these lands to the landless people from other parts;

(*d*) whether they would call for a report in this behalf from the Deputy Commissioner of the district?

A.—Sri M. V. KRISHNAPPA (Minister for Revenue).—

(*a*) Yes.

(*b*) No.

(*c*) The land is forest land and is not yet released.

(*d*) Not necessary in *view* of the answer to item (*c*).

Opening of a Medical College at Shimoga.

**Q.*—152. Sri D. PARAMESWARAPPA (Honnali).—

Will the Government be pleased to state:—

(*a*) Whether there have been representations from the public to open a Medical College at Shimoga;

(*b*) if so, the steps they have taken?

A.—Sri K. NAGAPPA ALVA (Minister for Health).—

(*a*) Yes.

(*b*) Due to National emergency, no new college can be opened at present.

INTRODUCTION OF BILLS.

Sri S. R. KANTHI (Minister for Education).—I beg to introduce the Mysore Public Libraries Bill, 1964.

Mr. SPEAKER.—The Bill is introduced.

BANGALORE UNIVERSITY BILL, 1964.

(*Motion to Consider—Debate Continued*).

†ಶ್ರೀ ಎಸ್. ಎಂ. ಕೃಷ್ಣ (ಮದ್ದೂರು).—ಸ್ವಾಮಿ, ಬೆಂಗಳೂರು ವಿಶ್ವವಿದ್ಯಾನಿಲಯದ ಈ ವಿಧೇಯಕವನ್ನು ನಾನು ಸ್ವಾಗತಮಾಡುವುದಕ್ಕೆ ಇಚ್ಛಿಸುತ್ತೇನೆ. ನಮ್ಮ ರಾಜ್ಯದ ವಿದ್ಯಾಭ್ಯಾಸದ ಕ್ಷೇತ್ರದ ಪರಿಮಿತಿಯಲ್ಲಿ ಈ ವಿಧೇಯಕ ಒಂದು ಮೈಲಿಗಲ್ಲಾಗಿದೆ ಎಂದು ಕೂಡ ನಾನು ಭಾವನೆ ಮಾಡುತ್ತೇನೆ. ಏಕೆಂದರೆ, ನಮ್ಮ ದೇಶದಲ್ಲಿ ಇತ್ತೀಚೆಗೆ ಹೆಚ್ಚಿನ ಮಟ್ಟದಲ್ಲಿ ವಿದ್ಯಾಭ್ಯಾಸದ ವಿಚಾರದ ಬಗ್ಗೆ ಸಾಕಾದಷ್ಟು ಗೊಂದಲವುಂಟಾಗಿದೆ, ಜಿಜ್ಞಾಸೆಕೂಡ ಉಂಟಾಗಿದೆ. ಅದರಿಂದಾಗಿ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಆಪತ್ತು ಕೂಡ ಬಂದಿದೆ ಎಂದು ಧಾರಾಳವಾಗಿ ಹೇಳಬಹುದು. ಯಾವ ವಿಶ್ವವಿದ್ಯಾನಿಲಯವೇ ಆಗಲಿ ಅದು ತನ್ನ ಜನತೆಯ ಕಲ್ಯಾಣವನ್ನು ಬಯಸುತ್ತದೆ. ವಿಶ್ವದ ಇತರ ರಾಷ್ಟ್ರಗಳೊಡನೆ ನಾವು ಎಲ್ಲಾ ಕ್ಷೇತ್ರಗಳಲ್ಲೂ ಪೈಪೋಟಿ ಮಾಡುವ ಸ್ಥಿತಿಗೆ ಬರಬೇಕಾದರೆ ವಿದ್ಯಾಭ್ಯಾಸದ ವಿಚಾರದಲ್ಲಿ ನಾವುಗಳೆಲ್ಲರೂ ಇನ್ನೂ ಹೆಚ್ಚಿನ ಆಸಕ್ತಿಯನ್ನು ವಹಿಸಬೇಕಾಗಿರುವುದು ಅಗತ್ಯವಾಗಿಯೇ ಇದೆ. ಹಿಂದೆ ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ನಮ್ಮ ರಾಜ್ಯದಲ್ಲಿ ಈಗ ಕೆಲಸ ಮಾಡುತ್ತಿರುವ ಎರಡು ವಿಶ್ವವಿದ್ಯಾನಿಲಯಗಳ ಬಗ್ಗೆ ಈ ಸಭೆಯೊಳಗೂ ಹಾಗೂ ಹೊರಗೂ ಬೇಕಾದಷ್ಟು

ಭಿನ್ನಾಭಿಪ್ರಾಯಗಳನ್ನು ನಾವು ಕೇಳಿದ್ದೇವೆ. ಆದುದರಿಂದ ಇನ್ನೊಂದು ಹೊಸ ವಿಶ್ವವಿದ್ಯಾನಿಲಯವನ್ನು ನಾವು ಈ ದಿವಸ ಕಟ್ಟುವುದಕ್ಕೆ ಹೊರಟಿರುವಾಗ ವಿಶ್ವವಿದ್ಯಾಲಯದ ಎಲ್ಲ ಕ್ಷೇತ್ರಗಳಲ್ಲೂ ಆಗಬೇಕಾಗಿರುವ ಅಭಿವೃದ್ಧಿಗೆ ಅವಕಾಶ ಮಾಡಬೇಕು, ವಿಶ್ವವಿದ್ಯಾಲಯದಬಗ್ಗೆ ನಾವೇನು ಇದುವರೆಗೆ ಕಳಂಕವಿದೆಯೆಂದು ತೋರಿಸಿದ್ದೇವೆ ಆ ಕಳಂಕದಿಂದ ವಿಮುಕ್ತರಾಗಬೇಕು ಎಂಬುದು ನಮ್ಮೆಲ್ಲರ ಹಿರಿಯ ಆಶೆಯಾಗಿದೆ. ವಿಶ್ವವಿದ್ಯಾನಿಲಯಗಳು ಬಹಳ ಪೂಜನೀಯವಾದಂಥ ಸ್ಥಳಗಳಾಗಿರುವಾಗ ಆ ಸಂಸ್ಥೆಗಳಿಗೆ ಯಾವ ವಿಧವಾದ ಕಳಂಕವೂ ಕೂಡ ತಟ್ಟಬಾರದು. ನಮ್ಮ ಸುತ್ತಮುತ್ತಲಿರುವ ಕಾಲೇಜುಗಳನ್ನು ನಾವು ನೋಡಿದರೆ ದುಃಖವಾಗುತ್ತದೆ, ಸಂಕಟವಾಗುತ್ತದೆ. ಒಂದು ಕಡೆ ರಾಜಕೀಯ ತಾಂಡವವಾಡಿದರೆ ಮತ್ತೊಂದು ಕಡೆ ಜಾತೀಯತೆ ತುಂಬ ತಾಂಡವಾಡುತ್ತಿದೆ. ಒಂದು ಕಡೆ ಜಾತೀಯತೆ ತಾಂಡವವಾಡುತ್ತಿದ್ದರೆ ಮತ್ತೊಂದೆಡೆ ಸ್ವಜನಪಕ್ಷಪಾತ ತಾಂಡವವಾಡುತ್ತಿದೆ. ಇದೇ ನಾವು ಕನಸು ಕಾಣುತ್ತಿರುವ ಈ ಬೆಂಗಳೂರು ವಿಶ್ವವಿದ್ಯಾನಿಲಯ ಇವೆಲ್ಲದರಿಂದಲೂ ದೂರವಾಗಿರಬೇಕು. ಬೇರೆ ದೇಶಗಳಲ್ಲಿ ಈ ವಿಶ್ವವಿದ್ಯಾನಿಲಯದ ವಿದ್ಯಾಭ್ಯಾಸ ಇಂತಹ ಗೊಂದಲದಿಂದ ಬಹಳ ದೂರವಾಗಿರುತ್ತದೆ, ಭಿನ್ನಾಭಿಪ್ರಾಯಗಳು ಬಹಳ ಎತ್ತರದಲ್ಲಿರುತ್ತವೆ. ಆದರೆ ನಮ್ಮ ವಿಶ್ವವಿದ್ಯಾಲಯಗಳು ಅದೇಕೋ ಗೊಂದಲಕ್ಕೀಡಾಗಿವೆ, ಭಿನ್ನಾಭಿಪ್ರಾಯಗಳ ತೌರುಮನೆಯಾಗಿವೆ. ಶ್ರೀಮಾನ್ ಕಂಠಿಯವರನ್ನು ನಾವು ಆಗಾಗ್ಗೆ ಬಹಳ ಕಟುವಾಗಿ ಟೀಕೆ ಮಾಡಿದ್ದೇವೆ. ಅವರನ್ನು ಟೀಕೆ ಮಾಡಬೇಕಾದ ಹಲವಾರು ಸಂದರ್ಭಗಳು ಮುಂದೆ ಕೂಡ ಬರಬಹುದು. ಆದರೆ ಒಳ್ಳೆಯ ಕೆಲಸ ಮಾಡಬೇಕೆಂದು ಒಳ್ಳೆಯ ಉದ್ದೇಶದಿಂದ ಅವರು ನಮ್ಮ ಮುಂದೆ ಇಟ್ಟಿರುವ ಬಿಲ್ಲಿನ ಬಗ್ಗೆ ನಮಗೆ ಯಾವಾಗಲೂ ಸಹಾನುಭೂತಿಯಿದೆ. ಇದಕ್ಕೆ ದೊರೆಯುತ್ತಿರುವ ಸ್ವಾಗತ ಮತ್ತು ಬೆಂಬಲವೇ ನಿದರ್ಶನವಾಗಿದೆ.

ಈ ವಿಧೇಯಕದಲ್ಲಿ ಹಲವಾರು ಬದಲಾವಣೆಗಳಾಗಬೇಕೆಂದು ನಾನು ಆಶಿಸುತ್ತೇನೆ. ನಮ್ಮ ನಾಯಕರಾದ ಶ್ರೀ ಶಿವಪ್ಪನವರು ಈಗಾಗಲೆ ಅಭಿಪ್ರಾಯಪಟ್ಟಹಾಗೆ ಹಿಂದೆ ಸುಮಾರು ಒಂದೂವರೆ ವರ್ಷದ ಕೆಳಗೆ ವಿಶ್ವವಿದ್ಯಾನಿಲಯದ ರೂಪರೇಖೆ ಹೇಗಿರಬೇಕೆಂಬ ಬಗ್ಗೆ ಒಂದು ಸಮಿತಿಯನ್ನು ನೇಮಿಸಲಾಗಿತ್ತು. ಅದು ಸಲ್ಲಿಸಿದ ವರದಿಯ ಪ್ರತಿಗಳನ್ನು ಉಭಯಸದನಗಳ ಸದಸ್ಯರಿಗೆಲ್ಲರಿಗೂ ಕೊಟ್ಟರು. ಆ ವರದಿಯಮೇಲೆ ನಮ್ಮ ಅಭಿಪ್ರಾಯಗಳನ್ನು ತಿಳಿಯಲು ಒಂದು ಅವಕಾಶವನ್ನು ಕಲ್ಪಿಸುತ್ತದೆಂದು ನಾವು ಭಾವಿಸಿದ್ದೆವು. ಹಲವಾರುಸಾರಿ ನಾವು ವೈಯುಕ್ತಿಕವಾಗಿ ವಿದ್ಯಾಸಚಿವರಲ್ಲಿ ಈ ಬಗ್ಗೆ ವಿನಂತಿಕೂಡ ಮಾಡಿದ್ದೆವು. ಆದರೆ ಅದಕ್ಕೆ ಅವಕಾಶ ದೊರೆಯಲಿಲ್ಲ. ಈ ದಿವಸ ಸಂಬಂಧಪಟ್ಟ ವಿಧೇಯಕವನ್ನು ನಮ್ಮ ಮುಂದಿಟ್ಟು ಅದರಬಗ್ಗೆ ನಮ್ಮ ಅಭಿಪ್ರಾಯವನ್ನು ಕೇಳುತ್ತಿದ್ದಾರೆ.

ಈಗ ಬಹಳ ಮುಖ್ಯವಾದಂಥ ಒಂದು ವಿಚಾರದ ಕಡೆಗೆ ಈ ಸಭೆಯ ಮತ್ತು ಸರ್ಕಾರದ ಗಮನವನ್ನು ಸೆಳೆಯಲಿಚ್ಛಿಸುತ್ತೇನೆ. ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ಸೆಂಟ್ರಲ್ ಕಾಲೇಜು ಒಂದು ನ್ಯೂಕ್ಲಿಯಸ್ ಆಗಿರುತ್ತದೆಂದು ಈ ವಿಧೇಯಕದಲ್ಲಿ ಹೇಳಿದ್ದಾಗೆ ಮತ್ತು ಸಂಬಂಧಪಟ್ಟ ಸಮಿತಿಯ ವರದಿಯಲ್ಲೂ ಹೇಳಿದ್ದಾರೆ. ಈ ಬೆಂಗಳೂರು ವಿಶ್ವವಿದ್ಯಾನಿಲಯ ಎಲ್ಲಿರಬೇಕು ಎಂಬ ವಿಚಾರದಲ್ಲಿ ಕೂಡ ಸರ್ಕಾರ ಒಂದು ತೀರ್ಮಾನವನ್ನು ಕೈಕೊಳ್ಳಬೇಕಾಗಿದೆ. ಬಹಳ ನಮ್ರತೆಯಿಂದ ನಾನು ಸೂಚನೆ ಮಾಡುತ್ತೇನೆ. ನಮ್ಮ ಬೆಂಗಳೂರು ಅರಮನೆಯಲ್ಲಿ ಅದನ್ನು ಏಕೆ ನಡೆಸಬಾರದು ಎಂಬ ಆಲೋಚನೆ ಹೊಳೆಯುತ್ತಿದೆ. 1947ನೆಯ ಇಸವಿಯಲ್ಲಿ ಇನ್‌ಸ್ಟ್ರುಮೆಂಟ್ ಆಫ್ ಅಕ್ಸೆಷನ್ ತಯಾರಾದಾಗ ಬೆಂಗಳೂರು ಅರಮನೆಯು ಸೆಮಿ ಗೌರ್ನಮೆಂಟ್ ಆಸ್ತಿ ಎಂದು ಅದರಲ್ಲಿ ಉಲ್ಲೇಖವಿದೆ. ನಮ್ಮ ಮೈಸೂರು ರಾಜಮನೆತನದವರೂ ಕೂಡ ತಾವು ಪ್ರಜೆಗಳ ಸೇವಕರೆಂದು ಆಗಾಗ್ಗೆ ಹೇಳುತ್ತಿದ್ದರು. ಅಲ್ಲದೆ ಇದುವರೆಗೆ ರಾಜ್ಯಪಾಲರಾಗಿದ್ದ ಶ್ರೀ ಜಯಚಾಮರಾಜ ಒಡೆಯರವರೂ ಸಹ ಭಾಷಣಮಾಡುತ್ತಾ ಸಂದೇಶ ಕೊಡುವಾಗ ತಾವು ಮೈಸೂರು ರಾಜ್ಯದ ಸೇವಕರೆಂದು ಹೇಳಿದರೆಂದು ಇದೇ ಸಮಯದಲ್ಲಿ ನಮ್ಮ ಮಾನ್ಯ ಸ್ನೇಹಿತರು ಜ್ಞಾಪಕಕ್ಕೆ ತಂದರು. ಇವತ್ತು ನಾನಾದರೂ ತಮ್ಮ ಮೂಲಕ ಬಹಳ ಕಳಕಳಿಯಿಂದ ಈ ಬಗ್ಗೆ ರಾಜ್ಯಪಾಲರಲ್ಲಿ ಪ್ರಾರ್ಥನೆ ಮಾಡುತ್ತೇನೆ. ನಾವು ಯಾರಾದರೂ ಬೇಕಾದರೆ ಅವರಲ್ಲಿ ಮನವಿ ಕೂಡ ಸಲ್ಲಿಸುವುದಕ್ಕೆ ಸಿದ್ಧವಾಗಿದ್ದೇವೆ. ಮೈಸೂರು ರಾಜಮನೆತನದ ಗೌರವವನ್ನು ಎತ್ತಿ ಹಿಡಿಯಲು ಮತ್ತು ಮೈಸೂರು ರಾಜಮನೆತನದ ಬಗ್ಗೆ ಒಂದು ಸ್ಮಾರಕವನ್ನು ನಿರ್ಮಾಣ ಮಾಡಲು ಯೋಚನೆಮಾಡಿದರೆ ಬೆಂಗಳೂರು ವಿಶ್ವವಿದ್ಯಾನಿಲಯವನ್ನು ಬೆಂಗಳೂರಿನಲ್ಲಿರುವ ರಮ್ಯವಾದ ಅರಮನೆಯಲ್ಲಿ ನಡೆಸಿದ್ದೇ ಆದರೆ ರಾಜಮನೆತನದ ಗೌರವ ಹೆಚ್ಚುತ್ತದೆ, ಅಲ್ಲಿ ಓದುವವರೆಲ್ಲರಿಗೂ ಭಕ್ತಿ ಗೌರವ ಮತ್ತು ಕೃತಜ್ಞತೆ ಜಾಸ್ತಿಯಾಗುತ್ತದೆ, ಆ ದೃಷ್ಟಿಯಿಂದ ಸರ್ಕಾರದ ಗಮನವನ್ನು ಈ ಕಡೆ ಸೆಳೆಯುತ್ತಿದ್ದೇನೆ.

Mr. SPEAKER.—The Hon'ble Member can touch upon the point. But need not develop it.

ಶ್ರೀ ಎಸ್. ಎಂ. ಕೃಷ್ಣ.—ಇದನ್ನು ಸರ್ಕಾರದವರು ಯೋಚನೆ ಮಾಡಬೇಕೆಂದು ನಾನು ಸೂಚಿಸುತ್ತೇನೆ.

ಈ ಬೆಂಗಳೂರು ವಿಶ್ವವಿದ್ಯಾಲಯದ ರೂಪರೇಖೆಗಳು ಬಹಳಮಟ್ಟಿಗೆ ದೆಹಲಿಯ ವಿಶ್ವವಿದ್ಯಾನಿಲಯದ ಮಾದರಿಯಲ್ಲೇ ರಚಿಸಲ್ಪಟ್ಟಿವೆ.

ನಾನು ದೆಹಲಿ ವಿಶ್ವವಿದ್ಯಾನಿಲಯ ಎಷ್ಟುಮಟ್ಟಿಗೆ ಕೆಲಸ ಮಾಡುತ್ತಿದೆ ಎನ್ನುವುದನ್ನು ಕೇಳಿದ್ದೇನೆ. ಕಳೆದ ಹಲವಾರು ವರ್ಷಗಳಲ್ಲಿ ಈ ದೆಹಲಿ ವಿಶ್ವವಿದ್ಯಾನಿಲಯ ನಮ್ಮ ಇಂಡಿಯಾ ದೇಶದಲ್ಲಿರುವ ವಿಶ್ವವಿದ್ಯಾನಿಲಯಗಳ ಪೈಕಿ ಬಹಳ ಒಳ್ಳೆಯ ಕೆಲಸಗಳನ್ನು ಮಾಡಿ ಒಳ್ಳೆಯ ಹೆಸರನ್ನು ಗಳಿಸಿಕೊಂಡಿದೆ ಎನ್ನುವುದನ್ನು ನಾವುಗಳೆಲ್ಲರೂ ಚೆನ್ನಾಗಿ ಬಲ್ಲೆವು. ಹೊರಗಡೆಯಿಂದ ಆಗಿಂದಾಗ್ಗೆ ಇಂಡಿಯಾ ದೇಶಕ್ಕೆ ಬರತಕ್ಕಂತಹ ಪರಿಣತರು ನಮ್ಮ ಇಂಡಿಯಾ ದೇಶದಲ್ಲಿರುವ ವಿಶ್ವವಿದ್ಯಾನಿಲಯಗಳನ್ನು ನೋಡಿಕೊಂಡು ಯಾವ ಯಾವ ವಿಶ್ವವಿದ್ಯಾನಿಲಯಗಳಲ್ಲಿ ಏನೇನು ಒಳ್ಳೆಯ ಅಂಶಗಳಿವೆ ಎಂದು ಕೇಳತಕ್ಕ ಅವಕಾಶ ನಮ್ಮಲ್ಲಿ ಕೆಲವರಿಗೆ ದೊರೆತಿದೆ. ಯಾರನ್ನು ಕೇಳಿದರೂ ಅವರು ಯಾವ ಅಭಿಪ್ರಾಯಕ್ಕೆ ಬಂದರು ಎಂದರೆ ನಮ್ಮ ದೆಹಲಿಯಲ್ಲಿರುವ ವಿಶ್ವವಿದ್ಯಾನಿಲಯಕ್ಕೆ ದೊರತಿರುವ ಗೌರವ ದೊರತಿರತಕ್ಕ ಶ್ರೀಮಾನ್ ದೇಶಮುಖ್‌ರವರ ನಾಯಕತ್ವ ಮತ್ತು ನಿರ್ದೇಶನ ಬಹು ಚೆನ್ನಾಗಿವೆ ಎಂದು ಅವರು ಮುಕ್ತಕಂಠದಿಂದ ಹೊಗಳಿದ್ದಾರೆ. ಮತ್ತು ಈ ವಿಶ್ವವಿದ್ಯಾನಿಲಯವನ್ನು ಪರದೇಶದಲ್ಲಿನ ವಿಶ್ವವಿದ್ಯಾನಿಲಯಗಳಿಗೆ ಹೋಲಿಸಿದ್ದಾರೆ. ಅದುದರಿಂದ ಈ ಸಮಯದಲ್ಲಿ ಒಳ್ಳೆಯ ಕೆಲಸ ಮಾಡಿರತಕ್ಕಂತಹ ದೆಹಲಿ ವಿಶ್ವವಿದ್ಯಾನಿಲಯವನ್ನು ನಾನು ಅಭಿನಂದಿಸಲೇ ಬೇಕಾಗಿದೆ. ಆದರೆ ದೆಹಲಿಗೆ ಏನು ಒಳ್ಳೆಯದಾಗಿದೆಯೋ ಅದರಂತೆ ಬೆಂಗಳೂರಿಗೂ ಒಳ್ಳೆಯದಾಗುತ್ತದೆ ಎಂದು ಶ್ರೀಮಾನ್ ಕಂಠಿಯವರು ನಿನ್ನೆ ಹೇಳುತ್ತ ಇದರಲ್ಲಿಯೂ ಅಕಾಡೆಮಿಕ್ ಕೌನ್ಸಿಲ್ಲು ಸೆನೆಟ್ಟು ಪೋಸ್ಟು ಗ್ರ್ಯಾಜುಯೇಟು ಡಿಗ್ರಿ ಕೋರ್ಸುಗಳಿಗೂ ಅನುಕೂಲವಾಗುತ್ತದೆ ಎನ್ನುವ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ. ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ಪ್ರಜಾಪ್ರಭುತ್ವದ ಕೆಲವು ರೂಪು ರೇಖೆಗಳನ್ನು ಕೊಡುವುದಕ್ಕೆ ಸಾಧ್ಯವೇ ಎನ್ನುವ ಆಲೋಚನೆಯನ್ನೇಕೆ ಮಾಡಲಿಲ್ಲ? ಕರ್ಣಾಟಕ ವಿಶ್ವವಿದ್ಯಾನಿಲಯದಲ್ಲಿ ವೈಸ್-ಚಾನ್ಸಲರನ್ನು ಚುನಾವಣೆ ಮಾಡುತ್ತಾರೆ. ಆದರೆ ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ಚಾನ್ಸಲರು ಮತ್ತು ಸಿಂಡಿಕೇಟಿನವರು ಸೂಚಿಸಿರುವ ಮೂರು ಜನರನ್ನೊಳಗೊಂಡ ಸಮಿತಿಯು ಆಯ್ಕೆ ಮಾಡಿರತಕ್ಕ ಜನರಲ್ಲಿ ಒಬ್ಬರನ್ನು ಚಾನ್ಸಲರು ನೇಮಿಸ ಬೇಕು. ದೆಹಲಿಯಲ್ಲಿ ಈ ರೀತಿ ಇಲ್ಲ. ಇಲ್ಲಿ ಸಿಂಡಿಕೇಟು ಎರಡು ಹೆಸರನ್ನು ಕೊಟ್ಟು ಚಾನ್ಸಲರು ಒಂದು ಹೆಸರನ್ನು ಕೊಟ್ಟಮೇಲೆ ಒಟ್ಟು ಮೂರು ಜನರಲ್ಲಿ ಇದನ್ನು ನಿರ್ಧಾರ ಮಾಡತಕ್ಕವರು ಯಾರು ! ಇದನ್ನು ವಿಧೇಯಕದಲ್ಲಿ ಉಲ್ಲೇಖಿಸಿಲ್ಲ.

ಶ್ರೀ ಎಸ್. ಆರ್. ಕಂಠಿ.—ಚಾನ್ಸಲರವರು ತೀರ್ಮಾನ ಮಾಡುತ್ತಾರೆ.

ಶ್ರೀ ಎಸ್. ಎಂ. ಕೃಷ್ಣ.—ಚಾನ್ಸಲರವರೂ ಒಂದು ಹೆಸರನ್ನು ಕೊಟ್ಟರೆ ಅವರಿಗೆ ನಂಬಿಕೆ ಬಂದಮೇಲೆತಾನೇ ಅವರು ಸಂಪೂರ್ಣವಾದ ತೀರ್ಮಾನ ಕೊಡುವುದು ?

ಶ್ರೀ ಎಸ್. ಆರ್. ಕಂಠಿ.—ಒಂದು ಸಮಿತಿಯನ್ನು ಮಾಡಲಾಗುತ್ತದೆ. ಅದಕ್ಕೆ ಸಿಂಡಿಕೇಟಿನವರು ಇಬ್ಬರನ್ನು ನಾಮನಿರ್ದೇಶ ಮಾಡುತ್ತಾರೆ; ಚಾನ್ಸಲರವರೂ ಒಬ್ಬರನ್ನು ಸೂಚಿಸುತ್ತಾರೆ. ಈ ಸಮಿತಿಯವರು ಕೊಟ್ಟ ಹೆಸರುಗಳಪೈಕಿ ಒಬ್ಬರನ್ನು ಚಾನ್ಸಲರ್ ಅವರು ನೇಮಕ ಮಾಡುತ್ತಾರೆ.

ಶ್ರೀ ಎಸ್. ಎಂ. ಕೃಷ್ಣ.—ಆದುದರಿಂದ ನಾನು ಇದಕ್ಕೆ ಒಂದು ತಿದ್ದುಪಡಿಯನ್ನು ಸೂಚನೆ ಮಾಡಿದ್ದೇನೆ. ಕರ್ಣಾಟಕ ವಿಶ್ವವಿದ್ಯಾನಿಲಯದಲ್ಲಿ ಇರತಕ್ಕ ಪದ್ಧತಿಯನ್ನು ಬೆಂಗಳೂರು ವಿಶ್ವವಿದ್ಯಾನಿಲಯದ ಮಟ್ಟದಲ್ಲಿಯೂ ನಾವೇಕೆ ಪ್ರಾರಂಭಿಸಬಾರದು ? ಅದರಂತೆ ಇಲ್ಲಿ ಏಕೆ ಎಕ್ಸ್‌ಪಿರಿಮೆಂಟು ಮಾಡಬಾರದು ಎಂದು ನಾನು ಅಭಿಪ್ರಾಯಪಡುತ್ತೇನೆ. ದೆಹಲಿಯಲ್ಲಿರುವುದೇ ಬೇರೆ, ಬೆಂಗಳೂರಿನಲ್ಲಿ ಬೇರೆ ಪದ್ಧತಿಯನ್ನನುಸರಿಸಿದರೆ ಉತ್ತಮವಾದ ಫಲಿತಾಂಶಕ್ಕೆ ಧಕ್ಕೆಯುಂಟಾಗುವುದಿಲ್ಲವೇ ? ಈ ಯೂನಿವರ್ಸಿಟಿಯನ್ನು ಸೆಂಟ್ರಲ್ ಯೂನಿವರ್ಸಿಟಿಯಾಗಿ ಮಾಡಲು ಅನುಕೂಲವಾಗುತ್ತದೆ ಎಂದು ಇದನ್ನು ಸ್ಥಾಪನೆ ಮಾಡುತ್ತಿದ್ದಾರೆಂದು ಕೆಲವರು ಹೇಳಿದರು. ಸೆಂಟ್ರಲ್ ಯೂನಿವರ್ಸಿಟಿಯಾಗಬೇಕು ಎನ್ನತಕ್ಕದ್ದು ಸರಕಾರದವರ ದೃಷ್ಟಿಯಲ್ಲಿದೆ ಎಂದು ನಿನ್ನೆ ಮಾನ್ಯ ಮಂತ್ರಿಗಳು ಭಾಷಣದಲ್ಲಿ ಹೇಳಿದ್ದಾರೆ. ಸೆಂಟ್ರಲ್ ಯೂನಿವರ್ಸಿಟಿಯನ್ನಾಗಿ ಮಾಡಿಕೊಳ್ಳಬೇಕು ಎನ್ನುವುದಕ್ಕೆ ಒಂದು ನಿರ್ಣಯವನ್ನು ಇದರ ಜೊತೆಯಲ್ಲಿಯೋ ಅಥವಾ ಮುಂದಾದರೂ ಮಾಡಬೇಕಾಗುತ್ತದೆ ಎಂದು ಹೇಳಿದ್ದಾರೆ. ಈ ರೀತಿ ಸೆಂಟ್ರಲ್ ಯೂನಿವರ್ಸಿಟಿ ಮಾಡುವ ವಿಚಾರದಲ್ಲಿ ನನ್ನ ಒಂದೆರಡು ಅಭಿಪ್ರಾಯಗಳು ತಿಳಿಸಬೇಕೆಂದಿದ್ದೇನೆ. ಇತ್ತೀಚೆಗೆ ಅದರಲ್ಲೂ ನಮಗೆ ಸ್ವಾತಂತ್ರ್ಯ ಬಂದಮೇಲೆ ದಕ್ಷಿಣ ದೇಶದಲ್ಲಿ ಯಾವ ಸೆಂಟ್ರಲ್ ಯೂನಿವರ್ಸಿಟಿಯೂ ಇಲ್ಲ ಎಂದು ಹಲವಾರು ಸಾರಿ ಪಾರ್ಲಿಮೆಂಟಿನಲ್ಲಿ ನಮ್ಮನ್ನು ಪ್ರತಿನಿಧಿಸತಕ್ಕ ಸಂಸತ್ತಿನ ಸದಸ್ಯರುಗಳು ಹೇಳಿದ್ದಾರೆ. ಈ ದಿವಸ ದಕ್ಷಿಣ ದೇಶದಲ್ಲಿರುವ ಜನರಲ್ಲಿ ಒಂದು ಅನುಮಾನ ಬಂದಿದೆ. ಭಾರತದಲ್ಲಿನ ಎಲ್ಲ ಕ್ಷೇತ್ರಕ್ಕಿಂತಲೂ

ಎಜುಕೇಷನ್ನಿನ ವಿಷಯದಲ್ಲಿ ಎಲ್ಲವನ್ನೂ ಉತ್ತರ ದೇಶದವರೇ ವಹಿಸಿಕೊಂಡಿದ್ದಾರೆ. ದಕ್ಷಿಣ ದೇಶಕ್ಕೆ ವಿದ್ಯಾಭ್ಯಾಸದ ಕ್ಷೇತ್ರದಲ್ಲಿ ನಮ್ಮ ಪ್ರತಿನಿಧಿಗಳು ಎಷ್ಟು ಬೇಕೆಂದು ಕೇಳಿದ್ದರೂ ಏನೂ ಮಾಡಲಿಲ್ಲ ಎಂದು ಹೇಳುತ್ತಿದ್ದಾರೆ. ಇದನ್ನು ಮಾನ್ಯ ಮಂತ್ರಿಗಳಾದ ಶ್ರೀಮಾನ್ ಕಂಠಿ ಯವರು ಒಪ್ಪುತ್ತಾರೋ ಇಲ್ಲವೋ ಗೊತ್ತಿಲ್ಲ. ನಾನಂತೂ ಒಪ್ಪುವುದಿಲ್ಲ. ಆದುದರಿಂದ ನಮ್ಮ ಬೆಂಗಳೂರು ಯೂನಿವರ್ಸಿಟಿ ಸೆಂಟ್ರಲ್ ಯೂನಿವರ್ಸಿಟಿಯಾಗುವುದಾದರೆ ನಮಗೂ ಬಹಳ ಸಂತೋಷ ವಾಗುತ್ತದೆ. ಈ ಸಂತೋಷದ ಜೊತೆಗೆ ಹಲವಾರು ಷರತ್ತುಗಳನ್ನು ನಾವು ಹಾಕಬೇಕಾಗುತ್ತದೆ. ಬಹು ಮುಖ್ಯವಾಗಿ ಟೆಕ್ನಿಕಲ್ ಕಾಲೇಜುಗಳ ಬಗ್ಗೆ ನನ್ನ ಗಮನ ಹೋಗುತ್ತದೆ. ಬೆಂಗಳೂರಿ ನಲ್ಲಿರುವ ಇಂಜನೀಯರಿಂಗು ಕಾಲೇಜು, ಮೆಡಿಕಲ್ ಕಾಲೇಜು ಇವುಗಳನ್ನೆಲ್ಲ ಬೆಂಗಳೂರು ಯೂನಿ ವರ್ಸಿಟಿಗೆ ಸೇರಿಸುತ್ತಾರೆ ಎಂದು ಇದೆ. ಬೆಂಗಳೂರಿನಲ್ಲಿರುವ ಟೆಕ್ನಿಕಲ್ ಕಾಲೇಜುಗಳಿಗೆ ಹೆಚ್ಚು ಕಡಿಮೆ ಮೈಸೂರು ರಾಜ್ಯದಲ್ಲಿ ಶೇಕಡಾ ತೊಂಬತ್ತೈದರಷ್ಟು ವಿದ್ಯಾರ್ಥಿ ವಿದ್ಯಾರ್ಥಿನಿಯರು ಬರುತ್ತಾರೆ. ನಾಳೆಯದಿವಸ ಬೆಂಗಳೂರು ವಿಶ್ವವಿದ್ಯಾನಿಲಯ ಸೆಂಟ್ರಲ್ ಯೂನಿವರ್ಸಿಟಿಯಾಗಿ ರೂಪುಗೊಂಡಮೇಲೆ ಮೈಸೂರು ಮಕ್ಕಳ ಭವಿಷ್ಯವೇನು ? ಮೈಸೂರಿನ ಮಕ್ಕಳಿಗೆ ಸರಿಯಾದ ವಿದ್ಯಾಭ್ಯಾಸ ದೊರಕುತ್ತದೆ ಎನ್ನುವ ಗ್ಯಾರಂಟಿಯಾದರೂ ಏನು ಇದೆ ಎನ್ನುವುದನ್ನು ಈ ಸಮಯ ದಲ್ಲಿ ತೀವ್ರವಾಗಿ ಪರಿಶೀಲಿಸಬೇಕಾಗಿದೆ. ಈ ಪ್ರಶ್ನೆ ಈಗ ಬರುವುದಿಲ್ಲ. ನಾಳೆ ಬರುತ್ತದೆ. ಈ ಪ್ರಶ್ನೆಗೆ ನಾವು ಈಗಲೇ ಉತ್ತರವನ್ನು ದೊರಕಿಸಿಕೊಳ್ಳಬೇಕಾಗಿದೆ.

ಶ್ರೀ ಎಸ್. ಆರ್. ಕಂಠಿ.—ಒಂದೇ ಒಂದು ಉದಾಹರಣೆಯನ್ನು ಹೇಳುತ್ತೇನೆ. ಅಂಡರು ಗ್ರಾಜುಯೇಟು ಸ್ಟಡೀಸ್‌ಗಾಗಿ ಯಾರೂ ಬರುವುದಿಲ್ಲ. ಪೋಸ್ಟು-ಗ್ರಾಜುಯೇಟು ಸ್ಟಡೀಸ್‌ಗಾಗಿ ಬರುತ್ತಾರೆ. ಪೋಸ್ಟು-ಗ್ರಾಜುಯೇಟು ಸ್ಟಡೀಸ್‌ಗಾಗಿ ಸೆಂಟ್ರಲ್ ಗವರ್ನಮೆಂಟಿನವರು ಇನ್ನೂ ದೊಡ್ಡದಾಗಿ ಖರ್ಚು ಮಾಡಬೇಕೆಂದಿದ್ದಾರೆ. ನಮ್ಮ ಜನಕ್ಕೆ ಇದರಿಂದೇನೂ ತೊಂದರೆಯಾಗುವು ದಿಲ್ಲ. ಅಷ್ಟೊಂದು ಜನ ಈ ಕಾಲೇಜುಗಳಿಗೆ ಯಾರೂ ಬರುವುದಿಲ್ಲ. ಇದರ ವಿಚಾರದಲ್ಲಿ ತಮಗೆ ಭಯ ಇದ್ದರೆ ಅದು ಸರಿಯಲ್ಲ. ಈಗ ರೀಜನಲ್ ಇಂಜಿನೀಯರಿಂಗ್ ಕಾಲೇಜು ಎಂದು ಮಾಡಿರು ವುದರಿಂದ ತೊಂದರೆಯೇನೂ ಆಗಿಲ್ಲ. ಆದರಿಂದ ಮುಂದೆ ಕೂಡ ಹುಡುಗರಿಗೆ ಓದಲು ತೊಂದರೆ ಏನೂ ಆಗುವುದಿಲ್ಲ ಎಂದು ನನಗನಿಸುತ್ತದೆ.

2-00 P.M.

Sri S. SIVAPPA.—As in the Suratkal College if these Medical and Engineering Colleges go to the Centre, the Centre will make it a condition that a certain percentage of the seats should be reserved for non-Mysorean students.

Sri S. R. KANTHI.—On the contrary, there is a possibility of our stipulating that we must get a certain percentage for Mysore students and that will be carried out. Even now we are giving a certain number of seats to students outside the Mysore State and I do not think it is going to make much change. We can stipulate some such condition in our favour.

Sri S. SIVAPPA.—That can be done while framing ordinances and statutes.

ಶ್ರೀ ಎಸ್. ಎಂ. ಕೃಷ್ಣ.—ಇಲ್ಲಿಯವರೆಗೂ ಆ ಪ್ರಶ್ನೆಯೇ ನನ್ನನ್ನು ಅಷ್ಟು ಬಾಧಿಸುತ್ತಿತ್ತು. ತಾವೇನೂ ಸುಲಲಿತವಾಗಿ ಹೇಳಬಹುದು. ಇಲ್ಲಿ ಒಂದು ಸೆಂಟ್ರಲ್ ಯೂನಿವರ್ಸಿಟಿ ಎಂಬುದನ್ನು ಸ್ಥಾಪನೆಮಾಡತಕ್ಕ ಸಂದರ್ಭದಲ್ಲಿ ಮುಂದೆ ನಮ್ಮ ರಾಜ್ಯದ ಮಕ್ಕಳಿಗೆ ವಿದ್ಯಾಭ್ಯಾಸದ ವಿಚಾರದಲ್ಲಿ ಯಾವ ಕುಂದಕವೂ ಆಗಬಾರದು. ಅದನ್ನೆಲ್ಲಾ ನಾವು ಈಗಲೇ ಆಲೋಚನೆಮಾಡಬೇಕಾಗಿದೆ.

ಇನ್ನು ಈ ಮೊಬಿಲಿಟಿಯ ವಿಚಾರದ ಬಗ್ಗೆ ಮಾನ್ಯ ಮಂತ್ರಿಗಳು ನೆನ್ನೆಯ ದಿವಸ ಬಹಳ ಒತ್ತಿ ಒತ್ತಿ ಮಾತನಾಡಿದ್ದಾರೆ. ಆದರೆ ಇದು One-way Traffic ಆಗಬಾರದು. ಈಗ ಕರ್ಣಾಟಕ ಯೂನಿವರ್ಸಿಟಿಯ ಮಕ್ಕಳು ಇಲ್ಲಿರತಕ್ಕ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಎಷ್ಟು ಜನರಿದ್ದಾರೆ, ಮತ್ತು ಹಳೇ ಮೈಸೂರಿನ ವಿದ್ಯಾರ್ಥಿಗಳು ಅಲ್ಲಿರತಕ್ಕ ಕಾಲೇಜುಗಳಲ್ಲೆಷ್ಟಿ ದ್ದಾರೆಂಬುದನ್ನು ಹುಡುಕಿ ನೋಡಬೇಕಾಗಿದೆ. ಇಲ್ಲಿನ ಹುಡುಗರು ಅಲ್ಲಿಗೂ ಅಲ್ಲಿಯ ಹುಡುಗರು ಇಲ್ಲಿಗೂ ಬರಲು ಸಾಧ್ಯವೇ ? ಈ ವಿಚಾರ ನೆನ್ನೆಯ ದಿನ ಪತ್ರಿಕೆಯಲ್ಲಿ ಬಂದಿದೆ.

Sri S. R. KANTHI.—The point is that admission of students after the P.U.C., continues in both the universities. In addition to that if they want to admit students after the B.Sc. or P.P. Course they can do that.

ಶ್ರೀ ಎಸ್ ಎಂ. ಕೃಷ್ಣ.—ಇಲ್ಲಿ ಪಾಸ್‌ಮಾಡಿದ ಅಂದರೆ ಪಿ.ಯು.ಸಿ. ಪಾಸ್‌ಮಾಡಿದ ವಿದ್ಯಾರ್ಥಿ ಕರ್ಣಾಟಕ ಯೂನಿವರ್ಸಿಟಿಯಲ್ಲಿ ಮೆಡಿಕಲ್ಲಿಗಾಗಲೀ ಅಥವಾ ಇಂಜಿನಿಯರಿಂಗಿಗಾಗಲಿ ಸೇರಲು ಸಾಧ್ಯವಿಲ್ಲ.

Sri S. R. KANTHI.—I have got records with me. I have got the letter of the Vice-Chancellor that admissions to the two universities will continue on the old basis. Students to the engineering and medical colleges after P.U.C. in both the universities. But there is one thing. The trouble in the Karnatak University, according to the Vice-Chancellor, is that he feels that on account of the failure in the P.P. Course many of the seats in the technical and medical colleges are falling vacant. That is why he wants to take those students who pass B.Sc. Part I into technical and medical colleges in addition to those who are being admitted after passing the P.U.C. examination.

Mr. SPEAKER.—So both are eligible.

ಶ್ರೀ ಎಸ್. ಆರ್. ಕಂಠಿ.—ಅಲ್ಲಿ ಪಿ.ಯು.ಸಿ. ಪಾಸಾದಮೇಲೆ ಪಿ.ಪಿ, ಗೆ ಹೋಗುತ್ತಾರೆ. ಅಲ್ಲಿ B.Sc. Part I ಗೆ ಪಬ್ಲಿಕ್ ಎಗ್ಸಾಮಿನೇಷನ್ ಇದೆ. ಅಲ್ಲಿ B. Sc. Part IIಗೆ ಪಬ್ಲಿಕ್ ಎಗ್ಸಾಮಿನೇಷನ್ ಇದೆ. ನೀವು ಇಲ್ಲಿ ಪಿ. ಯು. ಸಿ. ಪಾಸಾದವರನ್ನು ಹೇಗೆ ತೆಗೆದುಕೊಳ್ಳುತ್ತೀರೋ ಅಲ್ಲಿ ಅವರೂ ಹಾಗೆ ತೆಗೆದುಕೊಳ್ಳುತ್ತಾರೆ. ಅಲ್ಲಿ ಪಿ. ಪಿ. ನಲ್ಲೂ 50 ಪರ್ಸೆಂಟು ಫೇಲಾಗುತ್ತಾರೆ.

ಶ್ರೀ ಎಸ್. ಎಂ. ಕೃಷ್ಣ.—ಅಂತೂ ಈ ಮೊಬಿಲಿಟಿಯ ವಿಚಾರವಾಗಿ ಮಾತಾಡುವಾಗ ನಾವು ಹೇಳಿದ ತೊಂದರೆ ಬರುವುದಕ್ಕೆ ಅವಕಾಶವಿದೆ. ಆದುದರಿಂದ ಇದನ್ನು ನಿವಾರಣೆ ಮಾಡಬೇಕಾದ್ದು ನಮ್ಮ ಕರ್ತವ್ಯ. ಈ ವಿಶ್ವವಿದ್ಯಾನಿಲಯಕ್ಕೆ ಗೌರ್ನರನ್ನು ಛಾನ್ಸಲರನ್ನಾಗಿ ಮಾಡಬೇಕೆಂದು ವಿಧೇಯಕದಲ್ಲಿ ಹೇಳಿದ್ದೀರಿ. ಆದರೆ ಈಗಾಗಲೇ ಇಲ್ಲಿರತಕ್ಕ ಒಂದು ವಿಶ್ವವಿದ್ಯಾನಿಲಯಕ್ಕೆ ರಾಜ್ಯಪಾಲರನ್ನು ಛಾನ್ಸಲರನ್ನಾಗಿ ನೇಮಕಮಾಡಲಾಗಿದೆ. ಆದುದರಿಂದ ಈಗ ಈ ಯೂನಿವರ್ಸಿಟಿಗೂ ಗೌರ್ನರನ್ನೇ, ಛಾನ್ಸಲರನ್ನಾಗಿ ಮಾಡಬೇಕೆಂಬ ವಾದಕ್ಕೆ ಸಾಕಷ್ಟು ಸಮಾಧಾನವಿಲ್ಲ. ಇದನ್ನು ನಾನು ವೈಯುಕ್ತಿಕ ಕಾರಣಗಳಿಗಾಗಿ ಹೇಳುತ್ತಿಲ್ಲ. ಇಲ್ಲಿ ನಾವೀಗ ಒಂದು ಹೊಸಬೆಳಕನ್ನು ಚೆಲ್ಲಬೇಕಾಗಿದೆ, ಹೊಸ ಆಲೋಚನೆಗಳನ್ನು ಮಾಡಬೇಕಾಗಿದೆ. ರಾಜ್ಯಪಾಲರು ರಾಜಕಾರಣಿಗಳಾಗಿರಲೀ, ಇಲ್ಲದಿರಲಿ, ವಿಶ್ವವಿದ್ಯಾನಿಲಯದ ವಿಚಾರ ಬಂದಾಗ ಇದನ್ನು ಒಂದು ಉತ್ತಮ ಸ್ಥಿತಿಗತಿಯಲ್ಲಿಡತಕ್ಕ ಬಗ್ಗೆ ಈ ದಿವಸ ಆ ತಿರುಪತಿ ವೆಂಕಟೇಶ್ವರ ಕಾಲೇಜಿನಲ್ಲಿ ಯಾವ ರೀತಿ ಒಬ್ಬ ಶ್ರೇಷ್ಠ ನ್ಯಾಯಾಧೀಶರನ್ನು ಛಾನ್ಸಲರನ್ನಾಗಿ ನೇಮಕಮಾಡಲಾಗಿದೆಯೋ ಅದೇರೀತಿ ಇಲ್ಲಿಯೂ ಮಾಡುವುದರಿಂದ ಯಾರಿಗೂ ಇದರಿಂದ ಯಾವ ತೊಂದರೆಯೂ ಆಗುವುದಿಲ್ಲ. ಈ ವಿಚಾರವನ್ನು ಶ್ರೀಮಾನ್ ಕಂಠಿಯವರು ಆಲೋಚನೆ ಮಾಡಬೇಕೆಂದು ನಾನು ಅವರನ್ನು ಕೇಳಿಕೊಳ್ಳುತ್ತೇನೆ.

ಸ್ವಾಮಿ, ಇನ್ನು ಈ ವಿಶ್ವವಿದ್ಯಾನಿಲಯದ ರೂಪುರೇಖೆಗಳನ್ನು ಆಲೋಚನೆ ಮಾಡತಕ್ಕ ಕಾಲದಲ್ಲಿ ಮೊಟ್ಟಮೊದಲನೆಯದಾಗಿ ಕಂಡುಬರತಕ್ಕದ್ದೇನೆಂದರೆ, ಇಲ್ಲಿಯ ಕುಲಪತಿಗಳಿಗೆ ಬಹಳ ಹೆಚ್ಚಿನ ಅಧಿಕಾರಗಳನ್ನು ಕೊಟ್ಟಿದ್ದಾರೆ. ಇಂಥ ಒಂದು ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವಾಗ ಅಥವಾ ಪ್ರಾರಂಭಮಾಡುವಾಗ ಗೊತ್ತಿರುವ ಅಥವಾ ಗೊತ್ತಿಲ್ಲದ ಅಡಚಣೆಗಳಬಗ್ಗೆ ಅವರಿಗೆ ಒಂದು ಹೆಚ್ಚಿನ ಮಟ್ಟದಲ್ಲಿ ಅಧಿಕಾರವಿರಬೇಕು ಎಂಬುದು ನ್ಯಾಯ ಆದಾಗ್ಯೂ ಇಷ್ಟು ಅಧಿಕಾರ ಹೆಚ್ಚಾಯಿತೆಂದೇ ನನ್ನ ಭಾವನೆ. ಈ ದಿವಸ ಇಲ್ಲಿ ನಾವೇನೂ ಹೊಸದಾಗಿ ಯೂನಿವರ್ಸಿಟಿಯನ್ನು ಸ್ಥಾಪನೆಮಾಡುತ್ತಿಲ್ಲ. ಇರತಕ್ಕ ಯೂನಿವರ್ಸಿಟಿಗೇ ಒಂದು ಹೊಸ ಉಡುಪನ್ನು, ಒಂದು ಹೆಸರನ್ನು ಕೊಡುತ್ತಿದ್ದೇವೆ. ಈಗ ಇರತಕ್ಕ ವ್ಯವಹಾರ ಮುಂದೆಯೂ ಇರುತ್ತದೆ. ಈ ಬಗ್ಗೆ ನಮ್ಮದೇನೂ ಅಭ್ಯಂತರವಿರುವುದಿಲ್ಲ. ಆದರೆ ಇವರು ಹಿಂದೆ ಮಾಡಿರತಕ್ಕ ನೇಮಕಗಳನ್ನು ನೋಡಿದರೆ ನಮಗೆ ಧೈರ್ಯ ಬರುವುದಿಲ್ಲ. ಉಪಕುಲಪತಿಗಳಿಗೆ ಇಷ್ಟು ಅಧಿಕಾರಗಳನ್ನು ಕೊಡುವುದು ನ್ಯಾಯವೆಂದು ನಮಗೆ ಅನ್ನಿಸುವುದಿಲ್ಲ. ಆದ್ದರಿಂದ ಈಗ ಈ ಉಪಕುಲಪತಿಗಳ ನೇಮಕದ ವಿಚಾರದಲ್ಲಿಯೂ ನಾವು ಸರ್ಕಾರಕ್ಕೆ ಎಚ್ಚರಿಕೆಯನ್ನು ಕೊಡಬಯಸುತ್ತೇವೆ. ಉಪಕುಲಪತಿಗಳು ವಿದ್ಯಾಭ್ಯಾಸದ ಕ್ಷೇತ್ರದಲ್ಲಿ ಪರಿಣತರಾಗಿರಬೇಕು. ಕೇವಲ ಸರ್ಕಾರ ಕ್ಷೇತ್ರದಲ್ಲಿ ಪರಿಣತರಾಗಿದ್ದರೆ ಸಾಲದು ಇತ್ತೀಚೆಗೆ ರಾಜಕೀಯಕ್ಕೆ ಬಂದಿದ್ದಾರೆ.

ಆ ಅರ್ಹತೆ ಅವರಿಗೆ ಇರತಕ್ಕದ್ದು. ಮುಂದೆಬರತಕ್ಕ ಉಪಕುಲಪತಿಗಳು ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಅರಿತುನುರಿತಿರತಕ್ಕ ಶ್ರೇಷ್ಠಮಟ್ಟದ ಒಬ್ಬ ದೊಡ್ಡ ಮೇಧಾವಿಯಾಗಿರಬೇಕು. ಅಂತಹವರಿಂದ ಮಾತ್ರ ಈ ವಿಶ್ವವಿದ್ಯಾನಿಲಯಕ್ಕೆ ಕಲ್ಯಾಣವಾಗುತ್ತದೆ. ಇಂತಹ ಒಂದು ಹೊಸ ವಿಶ್ವವಿದ್ಯಾನಿಲಯ ಸರಾಗವಾಗಿ ಮತ್ತು ಸುಸೂತ್ರವಾಗಿ ನಡೆಯುವುದಕ್ಕೆ ಅವಕಾಶವಾಗುತ್ತದೆ ಎನ್ನುವ ಮಾತನ್ನು ಸರ್ಕಾರದ ಕಿವಿಯ ಮೇಲೆ ಹಾಕಿದರೆ ತಪ್ಪಾಗುವುದಿಲ್ಲವೆಂದು ನಾನು ಭಾವನೆ ಮಾಡುತ್ತೇನೆ. ಇನ್ನು ಈ ಮಧ್ಯೆ ಈ ವಿದ್ಯಾಭ್ಯಾಸವನ್ನು ಕಾನ್‌ಕರೆಂಟ್ ಸಬ್ಜೆಕ್ಟಾಗಿ ಸೇರಿಸಬೇಕೇ ಬೇಡವೇ ಎನ್ನುವ ವಿಚಾರದಲ್ಲೂ ಅಲ್ಲಲ್ಲಿ ಕೆಲವು ಮಾತುಗಳು ಕೇಳಿಬರುತ್ತಿವೆ. ಎಲ್ಲಾ ದೇಶಗಳಲ್ಲೂ ಅದರಲ್ಲೂ ಈ ಒಂದು ಫೆಡರಲ್ ಸೆಟಪ್ಪಿನಲ್ಲಿ ಈ ವಿದ್ಯಾಭ್ಯಾಸ ವಿಷಯ ಯಾವಾಗಲೂ ಸಂಸ್ಥಾನದ ಸಬ್ಜೆಕ್ಟಾಗಿ ಇರಬೇಕು ಎನ್ನುವುದನ್ನು ನಾವು ಯೋಚನೆ ಮಾಡಬೇಕು. ನಮ್ಮ ಮಕ್ಕಳಿಗೆ ಎಂತಹ ವಿದ್ಯಾಭ್ಯಾಸಬೇಕು, ಎಂತಹ ತರಪೇತು ಬೇಕು ಎನ್ನುವುದನ್ನೆಲ್ಲಾ ಆಲೋಚನೆ ಮಾಡುವ ಶಕ್ತಿ ನಮಗೆ ಇರಬೇಕು. ಆದರೆ ಈ ಮಧ್ಯೆ ಪೋಸ್ಟ್-ಗ್ರಾಜುಯೆಟ್ ಕೋರ್ಸಿನಬಗ್ಗೆ ಪೂರ್ತಿ ದೇಶಕ್ಕೆ ಸಂಬಂಧಪಟ್ಟಂಥ ಒಂದು ನಿಲುವನ್ನು ಅಥವಾ ಒಂದು ಪದ್ಧತಿಯನ್ನು ನಾವು ಇಲ್ಲಿ ಆಚರಣೆಗೆ ತರುವ ವಿಚಾರವನ್ನು ಗಮನದಲ್ಲಿಟ್ಟುಕೊಳ್ಳಬೇಕು. ಅಮೇರಿಕಾ ದೇಶದಲ್ಲಿ ಅಲ್ಲಿರತಕ್ಕ ವಿಶ್ವವಿದ್ಯಾಲಯಗಳ ಚೌಕಟ್ಟು ಹೇಗಿದೆಯೆಂದರೆ ಒಬ್ಬ ವಿದ್ಯಾರ್ಥಿ ಯಾವುದೇ ಸಂಸ್ಥಾನದಲ್ಲಿರಲಿ, ಯಾವುದೇ ಸಂಸ್ಥಾನದ ಯಾವ ವಿಶ್ವವಿದ್ಯಾನಿಲಯದಲ್ಲಾದರೂ ಯಾವ ವರ್ಷದಲ್ಲಾದರೂ ಹೋಗಿಸೇರಬಹುದು ಎಂಬುದಾಗಿದೆ ಒಂದು ವೇಳೆ ಟೆಕ್ಸ್‌ಟೈಲ್ ವಿದ್ಯಾರ್ಥಿಗೆ ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡಲು ಅನನುಕೂಲವಾದರೆ ಮೊದಲನೆ ವರ್ಷದಲ್ಲಿ ಆ ವಿದ್ಯಾಭ್ಯಾಸ ಮುಗಿಸಿಕೊಂಡು ತನ್ನ ಎರಡನೆಯ ವರ್ಷದ ವಿದ್ಯಾಭ್ಯಾಸಕ್ಕಾಗಿ ನ್ಯೂಯಾರ್ಕ್‌ಕ್ಕೋ ಕ್ಯಾಲಿಪೋರ್ನಿಯಾಕ್ಕೋ ನೇರವಾಗಿ ಹೋಗಿ ಸೇರುವುದಕ್ಕೆ ಅವಕಾಶವಿದೆ. ನಮ್ಮ ಇಂಡಿಯಾ ದೇಶದಲ್ಲಿರತಕ್ಕ ಕರ್ಣಾಟಕ ಯೂನಿವರ್ಸಿಟಿಯಲ್ಲಿ ವ್ಯಾಸಂಗ ಮಾಡತಕ್ಕ ಮೊದಲನೆಯ ವರ್ಷದ ವಿದ್ಯಾರ್ಥಿ ಎರಡನೆಯ ವರ್ಷದ ವ್ಯಾಸಂಗಕ್ಕಾಗಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸೇರಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಇದು ಎಂತಹ ದುರದೃಷ್ಟಕರವಾದ ವಿಚಾರ ! ಇಂಥಾದ್ದನ್ನು ನಿಲ್ಲಿಸುವುದಕ್ಕೆ ಏನಾದರೂ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳದೇ ಹೋದರೆ ಇದರಿಂದ ಒಳ್ಳೆಯದಾಗುವುದಿಲ್ಲ. ಇದನ್ನು ಶ್ರೀಮಾನ್ ಕಂಠಿಯವರು ಬಹಳ ತೀಕ್ಷ್ಣವಾಗಿ ಆಲೋಚನೆ ಮಾಡಬೇಕು. ಮೊಬಿಲಿಟಿ ಎನ್ನುವುದನ್ನು ಮೊದಲು ಕರ್ಣಾಟಕ ಮತ್ತು ಮೈಸೂರು ಯೂನಿವರ್ಸಿಟಿಗಳಲ್ಲಿ ತೋರಿಸಿದರೆ ಆಮೇಲೆ ಡೆಹಲಿ, ಬೊಂಬಾಯಿ ಮುಂತಾದ ಸಂಸ್ಥಾನಗಳಿಗೆ ತೋರಿಸುವುದಕ್ಕೆ ಸಾಧ್ಯವಾಗುತ್ತದೆ. ಏಕೆಂದರೆ ಇಲ್ಲಿ ಫೆಡರಲ್ ಯೂನಿವರ್ಸಿಟಿ ಸೆಟಪ್ ಆಗುವುದರಿಂದ ವಿಶೇಷವಾದ ಅನುಕೂಲತೆಗಳು ಇವೆ.

ಶ್ರೀ ಎಸ್. ಆರ್. ಕಂಠಿ.—ನಾನು ಆ ಬಗ್ಗೆ ಪ್ರಯತ್ನ ಮಾಡಿ ಮಾಡಿ ಬೇಸತ್ತು ಬಿಟ್ಟು ಬಿಟ್ಟೆ.

ಶ್ರೀ ಎಸ್. ಎಂ. ಕೃಷ್ಣ.—ಹಾಗಾದರೆ ನಿಮ್ಮ ಮಂತ್ರಿ ಪದವಿಯನ್ನೂ ಹಾಗೆಯೇ ಬಿಟ್ಟು ಬಿಡಬೇಕಾಗಿತ್ತು. ಶ್ರೀಮಾನ್ ಕಂಠಿಯವರಲ್ಲಿ ನಮಗೆ ನಂಬಿಕೆ ಇಲ್ಲ. ಮರುಳಿ ಯತ್ನವ ಮಾಡು ಎನ್ನುವಂತೆ ಪ್ರಯತ್ನ ಮಾಡುತ್ತಾ ಇರಿ. ಯಾವಾಗಲಾದರೂ ಅದು ಫಲಿಸುತ್ತದೆ.

Sri S. R. KANTHI.—The Hon'ble Member thinks that I tried to have a uniform patern in respect of fees only. It is not so. I tried my level best to have the same curricula of studies in both the Universities and I succeeded to certain extent. At the end it went off again.

ಶ್ರೀ ಎಸ್. ಎಂ. ಕೃಷ್ಣ.—ಇನ್ನು ಈ ಫೆಡರಲ್ ಯೂನಿವರ್ಸಿಟಿಯಿಂದ ಆಗತಕ್ಕ ಅನುಕೂಲಗಳನ್ನು ಕೂಡ ಈ ಸಮಯದಲ್ಲಿ ಆಲೋಚನೆ ಮಾಡಬೇಕು. ಅಮೇರಿಕಾ ಮತ್ತು ಇಂಗ್ಲೆಂಡ್ ದೇಶದಲ್ಲಿನ ಕೆಲವು ವಿಶ್ವವಿದ್ಯಾನಿಲಯಗಳನ್ನು ನಮ್ಮ ಸಮಿತಿಯ ವರದಿಯಲ್ಲಿ ನಿದರ್ಶನವಾಗಿ ಸೂಚಿಸಿದ್ದಾರೆ. ನಾನು ನೋಡಿದಹಾಗೆ ಅಮೇರಿಕಾ ದೇಶದ ಪ್ರತಿಯೊಂದು ವಿಶ್ವವಿದ್ಯಾನಿಲಯವೂ ಹೆಚ್ಚು ಕಡಮೆ ಫೆಡರಲ್ ಯೂನಿವರ್ಸಿಟಿಯಾಗಿದೆ. ಅಲ್ಲಿ ಯಾವ ವಿಶ್ವವಿದ್ಯಾನಿಲಯಕ್ಕೆ ಹೋದರೂ school of humanity, school of science, school of engineering, school of medical, school of business administration—ಈ ರೀತಿ ಯಾವ್ಯಾವ ಕ್ಷೇತ್ರದಲ್ಲಿ ಯಾವ್ಯಾವ ವಿಚಾರಗಳಲ್ಲಿ ವ್ಯಾಸಂಗ ಮಾಡುವುದಕ್ಕೆ ಆವಶ್ಯಕತೆ ಇದೆಯೋ ಅವೆಲ್ಲಕ್ಕೂ ಆ ಫೆಡರಲ್ ಯೂನಿವರ್ಸಿಟಿಯಲ್ಲಿ ಅವಕಾಶ ಸಿಕ್ಕುತ್ತದೆ. ಈ ವಿಧೇಯಕದಲ್ಲಿ ಇರತಕ್ಕ ಇನ್ನೊಂದು ಬಹಳ ಉತ್ತಮವಾದ ಅಂಶವೇನೆಂದರೆ ಇಂಡಸ್ಟ್ರೀಸ್ ವಿಷಯಗಳ ಬಗೆಗೂ ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ಒಂದು ರೀತಿಯಲ್ಲಿ ಸಂಬಂಧವನ್ನು ಕಲ್ಪನೆ ಮಾಡಿಕೊಂಡಿರುವುದು. ಈ ಸಂಬಂಧದಲ್ಲಿ ಏರೋನಾಟಿಕಲ್ಸ್ ವಿಷಯದ ಬಗ್ಗೆ ಚೆನ್ನಾಗಿ ವ್ಯಾಸಂಗ ಮಾಡುವುದಕ್ಕೆ ಮತ್ತು ಶಿಕ್ಷಣಕ್ಕೆ ಸೌಲಭ್ಯವಿಲ್ಲ. ಇಲ್ಲಿರತಕ್ಕ ಹಿಂದೂಸ್ಥಾನ್ ಏರ್‌ಕ್ರಾಫ್ಟ್, ಏರೋ-ಇಂಡಿಯನ್ ಫ್ಯಾಕ್ಟರಿ—ಇವುಗಳನ್ನು ಉಪಯೋಗಿಸಿ

(ಶ್ರೀ ಎಸ್. ಎಂ. ಕೃಷ್ಣ)

ಕೊಂಡು ಅಲ್ಲಿರತಕ್ಕ ಲ್ಯಾಬೊರೇಟರಿ ಎಕ್ವಿಪ್‌ಮೆಂಟ್ಸ್ ಮೂಲಕ ರಿಸರ್ಚ್ ವಿಷಯದಲ್ಲಿ ನಮ್ಮ ವಿದ್ಯಾರ್ಥಿಗಳಿಗೆ ಹಾಗು ವಿದ್ಯಾರ್ಥಿನಿಯರಿಗೆ ಅನುಕೂಲತೆಗಳನ್ನು ಈ ವಿಶ್ವವಿದ್ಯಾನಿಲಯ ಮಾಡಿ ಕೊಟ್ಟರೆ ಅದರಿಂದ ಬಹಳ ಪ್ರಯೋಜನವಾಗುವುದರಲ್ಲಿ ಯಾವ ವಿಧವಾದ ಸಂದೇಹವಿಲ್ಲ. ನಿನ್ನೆ ನನ್ನ ಮಾನ್ಯ ಮಿತ್ರರಾದ ಶ್ರೀಮಾನ್ ವೆಂಕಟೇಗೌಡರು ಈ ಬೆಂಗಳೂರು ವಿಶ್ವವಿದ್ಯಾನಿಲಯದ ಮಸೂದೆಯ ಮೇಲೆ ಮಾತನಾಡುತ್ತಾ ಈ ಡೋನರ್ ಮೆಂಬರ್ಸ್ ಇದರಲ್ಲಿ ಬೇಕಿಲ್ಲವೆಂದು ಹೇಳಿದರು. ನಾವು ಈ ವಿಷಯವನ್ನು ಸ್ವಲ್ಪ ಯೋಚನೆ ಮಾಡಬೇಕು. ಮನುಷ್ಯನು ಕೀರ್ತಿಗೆ ಆಸೆಪಡುವುದು ಸಹಜ. ಜನರು ತಾವು ಸಂಪಾದಿಸಿದ ಹಣವನ್ನು ಇಂತಹ ಒಳ್ಳೆಯ ಕೆಲಸಗಳಿಗೆ ವಿನಿಯೋಗಿಸಲು ಮುಂದೆ ಬಂದರೆ ಅಂತಹವರಿಗೆ ಟೆಂಪ್ಟೇಷನ್, ಇನ್‌ಸೆಂಟಿವ್ ಕೊಡಬೇಕಾಗುತ್ತದೆ. ಅಂತಹವರು 1 ಲಕ್ಷ ಅಥವಾ 50 ಸಾವಿರ ರೂಪಾಯಿಗಳನ್ನು ಕೊಟ್ಟರೆ ಅವರನ್ನು ಗೌರವಾನ್ವಿತ ಸದಸ್ಯರನ್ನಾಗಿ ಇಟ್ಟು ಕೊಳ್ಳಿ. ನನ್ನ ಒಂದ ತಿದ್ದುಪಡಿಯಲ್ಲಿ ಹೇಳಿರುವಂತೆ ಸೆನೆಟ್‌ನಲ್ಲಿ ಅವರಿಗೆ ವೋಟಿಂಗ್ ರೈಟ್ಸ್ ಕೊಡುವುದು ಬೇಡ. ಅಂತಹವರನ್ನು ಸೆನೆಟ್‌ನಲ್ಲಿ ಗೌರವಾನ್ವಿತ ಸದಸ್ಯರನ್ನಾಗಿ ಉಳಿಸಿಕೊಳ್ಳಬೇಕು. ಆಗ ಅಂತಹವರಿಗೆ ಸಮಾಜದಲ್ಲಿ ಗೌರವ ಕೊಟ್ಟ ಹಾಗಾಗುತ್ತದೆ. ಅವರ ಹೆಸರು ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿರುವ ಹಾಗೆ ಆಗುತ್ತದೆ ಎನ್ನುವುದನ್ನು ಈ ಸಮಯದಲ್ಲಿ ಹೇಳಬೇಕಾಗಿದೆ. ಇನ್ನು ಕೆಲವು ವಿಚಾರಗಳಿದ್ದುವು. ತಿದ್ದುಪಡಿಯ ಚರ್ಚೆ ಕಾಲದಲ್ಲಿ ಅವನ್ನು ವಿವರವಾಗಿ ಹೇಳುತ್ತೇನೆ. ಆದರೆ ಶ್ರೀಮಾನ್ ಕಂಠಿಯವರು ವಿದ್ಯಾಭ್ಯಾಸದ ಖಾತೆಯನ್ನು ವಹಿಸಿಕೊಂಡ ಮೇಲೆ ಮಾಡಿರತಕ್ಕ ಒಂದು ಒಳ್ಳೆಯ ಕೆಲಸವೆಂದರೆ ಈ ಬೆಂಗಳೂರು ವಿಶ್ವವಿದ್ಯಾನಿಲಯದ ವಿಧೇಯಕವನ್ನು ತಂದಿರತಕ್ಕದ್ದು ಅಷ್ಟೇ. ಯಾವ ಒಂದು ಒಳ್ಳೆಯ ಉದ್ದೇಶದಿಂದ ಶ್ರೀಮಾನ್ ಕಂಠಿಯವರು ಈ ವಿಧೇಯಕವನ್ನು ಈ ಸಭೆಯಲ್ಲಿ ತಂದಿದ್ದಾರೋ ಆ ಒಂದು ಉದ್ದೇಶವನ್ನು ಮುಂದುವರಿಸಿಕೊಂಡು ಹೋಗುವುದಾದರೆ ನಿಜವಾಗಿ ಈ ಬೆಂಗಳೂರು ವಿಶ್ವವಿದ್ಯಾನಿಲಯವು ಅಭಿವೃದ್ಧಿ ಹೊಂದುತ್ತದೆ ಮತ್ತು ಸರ್ಕಾರಕ್ಕೆ ಈ ಬಗ್ಗೆ ನಮ್ಮ ಪೂರ್ಣ ಬೆಂಬಲವಿರುತ್ತದೆಂದು ಹೇಳಿ ಈ ವಿಧೇಯಕವನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಮಾಡುತ್ತೇನೆ.

Sri R. S. HEGDE (Honnavar).—I congratulate the Hon'ble Minister for Education on having introduced this excellent piece of legislation, which has we.l been thought out, well-laid and well-drafted, and it is a much needed Act of the day. There will be no confusion if the Bill is read in a spirit of compromise and in a spirit of reconciliation. To my mind, the Bill has incorporated salient features of the like Acts of other Universities and it is also a compromise between democracy and autocracy. To my mind, I very strongly feel that education should not be a matter of politics. The principles of democray should not be carried too far. After all, the University is a seat of education, a seat of culture and it is the very foundation of progress of civilization.

Before I bring to the notice of this Hon'ble House the salient features of this Bill, I feel, Sir, that I must reply to some of the apprehensions expressed. The first one is about finance. What I submit is that, no Government will suffer for want of money in the execution of good acts. After all, education is something good, something necessary and something connected with the very life of the citizens of the State. When the Government is spending 20 lakhs of rupees for building the House of the Governor, I feel Government will be able to find ample money to house the University, which is going to produce governors, men of letters, great scientists and so on. There is also a feeling that primary education is in a state of embryo in the State and that when primary education is the prime necessity of the State, why should the Government venture to p ss this Act? To my mind, it appears that there must be all-round development. No doubt, primary education is the

need of the hour and it must be attended to. But, at the same time, other education, education which the proposed university is bound to bestow attention on cannot be neglected. For instance, in India, there are not many comfortable houses for the people to live in. But that does not imply that the Vidhana Soudha should not be built for the Legislature.

Sri G. V. GOWDA (Palya).—It was built long back.

Sri R. S. HEGDE.—Or that Vidhana Soudha which has been built should be destroyed, or that we should postpone building Vidhana Soudha until all the people have comfortable houses. Suppose a father has ten children and if the father is not able to provide enough board for all it does not mean that the eldest member of the family should starve. So it is absolutely necessary, to display an all-round personality that we must give importance to this piece of legislation as we give importance to secondary education, college education and also primary education.

The second apprehension was expressed by Sri Ganamukhi that the Central Government might not take over the University or help us or that there might be competitors in the way of the Central Government taking over this University and that we might not get a chance. This apprehension also is not cordial in the sense that in order to have emotional integration or to have integration in education—well Mysore State will be the pioneer in the southern part of India. When this Government has taken the initiative, this initiative will have been copied by others. Even if there are competitors, well. it will be a healthy competition. It is bound to be good. Therefore, even if two such universities come up, we must persuade the Central Government to take over both the universities, and we will have the honour of becoming the pioneer in starting a big university like this.

The third apprehension which is now expressed is that the students of Mysore State may not find place in these colleges or that some of the students may be hard-pressed for prosecuting their studies. But I fail to understand this aspect of the matter There are certain central colleges managed by the Central Government. How many students of Mysore are admitted there ? We may ask for ten per cent of seats to be reserved there and that ten per cent can have entry. Even if certain students are taken from outside, I feel that it will be a healthy sign, for emotional integration, national integration, unity of India, oneness of India, etc. By exchange of students, by welcoming students from outside the State, we will be promoting integration, and this step will be in the right direction so far as educational integration is concerned. Therefore, these apprehensions need not be entertained if we think loudly and largely.

Then, Sir, the Bill envisages a University wherein there are no affiliated colleges, but only constituent colleges. For instance, in Mysore there are no constituent colleges, but there are only affiliated colleges,

(SRI R. S. HEGDE)

and so also is the case with the Karnatak University. This Bill envisages a university with constituent colleges only. What I mean is the University itself will run post-graduate courses and there will be constituent colleges which will be very intensively controlled by the various branches of the University. In affiliated colleges, there is no proper control by the University. Take for instance so many colleges which are affiliated to the Karnatak University. What is the control of that University ? The University has no voice in the management. The staff is appointed by the governing body of the society which sponsors the college. Then, when the University has no control over such colleges, they only affiliate themselves for certain purposes, for the purpose of unity of studies, etc. But here, this will be a university where affiliated colleges will have no place at all. When once we understand that difference between a college which is affiliated and a constituent college, then, what I submit is, there will be no difficulty at all in appreciating the Bill in its correct perspective

As far as constituent colleges are concerned, clause 2 (1) defines what a constituent college is. Clause 2 (i) also speaks of constituent colleges and clause 2 (10) speaks of a university area wherein these constituent colleges are supposed to be situated. Then, we have section 49 which enumerates the condition precedent for becoming a constituent college. Sri Anna Rao Ganamukhi yesterday expressed that there was nothing in the Act which stated that if the conditions were not satisfied, the constituent colleges would not be a part of the University. But section 51 makes it very clear. After having given permission to become a constituent college, if the constituent college does not satisfy or fails to satisfy the conditions, the permission which was once given can be withdrawn. Regarding the appointment of staff, section 24 (7) makes it very clear. There is a board for appointment. Then there are persons in the University who will be responsible for selecting proper personnel. There was some talk that the governing body or the chairman of the governing body should not be there. But, I fail to understand the reasoning behind it. After all when a private society sponsors a college, the private society invests a huge amount, and it is but quite natural that the per son at the helm of affairs of the college should be given some respect, some honour and some place as far as the administration of the college is concerned. To my mind, appointment of staff is an important part of administration and it is quite befitting that in section 27 (3) in the Board of Management, the chairman of the Governing body has got a big voice. The chairman of the society is the chairman of persons who select that staff. Then, we have section 25 regarding the Board of Studies. Thus as far as the curricula are concerned, as far as the appointment of professors concerned and as far as the service conditions are concerned, conditions are imposed. When there is such rigorous imposition of these conditions, I am quite sure, the constituent college will be a college which is managed by the university

itself. So, with this approach, we have to appreciate that many of the colleges of Bangalore District are going to be taken over by the proposed university and that the proposed university is bound to maintain itself in the most dignified way. Some of the Opposition members stated that the Government is not managing the colleges properly. If that is so, there is greater justification that the Central University must come to Bangalore and take over these colleges.

2-30 P.M.

Then, Sir, the greatest attack was on the Chancellor and the Vice-Chancellor. To my mind, the Governor who is a non-political body is the fittest person to become the Chancellor of the proposed University. Now, there is a difference of opinion as to whether it should be the Governor or the Chief Justice. If at other places the Governor has been responsible for the success of the University, why should we not give a chance to the Governor in respect of this University also ? If the Governor, as the Chancellor of Mysore University, can manage that University properly and successfully, I am quite sure the very same Governor will be able to manage the proposed University as effectively and successfully as he has been managing the Mysore University.

Then, Sir, as far as the Karnatak University is concerned, the Governor is the Chancellor and the Karnatak University is also managed properly, effectively and successfully. When our sister institutions, namely, the Karnatak and Mysore Universities are being managed properly by the Governor as the Chancellor, I fail to understand how he becomes a misfit for the proposed Bangalore University.

Secondly, the consensus of opinion was that the Chancellor should not preside over the meetings of the Senate and that the Vice-Chancellor should preside. That will not be a correct approach. That will amount to a prohibition imposed upon the Chancellor to attend the meetings of the Senate. After all, you know, Sir, that the King of England has got vast powers but by custom and tradition he has none. In the same way, the Governor as the Chancellor will have vast powers but by a healthy precedent it is possible to establish the supremacy of tha Vice-Chancellor. Asking the Vice-Chancellor to preside over a meeting when the Chancellor himself is present will amount to an insult to him. It is just like asking a subordinate to preside over a meeting even when his superior is present. Section 10 has advisedly said, 'he shall, do it when he is present'. So, if he is not present, the Vice-Chancellor will preside. After 1947 the appointment of Governors has been effective and they are all men of letters. They are all persons interested in the promotion of education and can contribute much to the success of a University. In view of this, to ask the Vice-Chancellor to preside would mean preventing the Chancellor from attending the meeting and participating in the deliberations of the Senate. Such a contingency should be avoided.

As far as the selection of the Vice-Chancellor is concerned, I submit that the Bill advisedly says that it must not be left to the Senate. That

(SRI R. S. HEGDE)

will give a touch of immunity to the Vice-Chancellor. In my view, this selection by two persons nominated by the Syndicate and one person nonimated by the Chancellor will give him a sort of immunity from influence and this is very advisedly done.

As far as the vesting of powers with the Vice-Chancellor is concerned, in this period of transition when the University is to be born, I feel the powers are not so great. They are necessary and it is but natural that some amount of trust and confidence must be placed in him and I am quite sure there will be no occasion to misuse the powers.

Then, under section 67 a certain college is taken over by the University, what about the staff ? It is also very advisedly provided that the staff will be taken over on certain conditions. If it is said that the staff should be taken over, with the college then there will be very hasty appointments at the time of the Centre taking over the University. That is what happened after the reorganisation of States. This section 67 (2) is a safeguard against hasty appointment on the eve of University being taken over by the Centre.

There is a cry against Section 70. After all, Government servants cannot be secluded persons. To secure co-ordination in education, the Education Secretary, the Commerce Secretary and other persons are taken. They are taken so that there will be some sort of effective co-ordination as far as the implementation of the various policies and financial aspects is concerned. Therefore, I fully support this Bill because it is advisedly drafted.

MR. SPEAKER.—Before I call upon anybody else I would like to know how many members are desirous of participating in the debate. Notices of amendments have been given and many more are coming in. I have fixed time till 3 o'clock and the time now left is only 20 minutes. I am appealing to the members to keep this aspect in mind and finish the business according to schedule.

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಸಭಾಪತಿಗಳೇ, ಈ ಶಾಸನಸಭೆಯ ಅಧಿವೇಶನ ಪ್ರಾರಂಭವಾದ ಮೊದಲನೆಯ ದಿವಸವೇ ಬೆಂಗಳೂರು ವಿಶ್ವವಿದ್ಯಾನಿಲಯದ ಸ್ಥಾಪನೆಗೆ ಸಂಬಂಧಪಟ್ಟ ಹೊಸ ವಿಧೇಯಕದ ಒಂದು ಕರಡು ಪ್ರತಿ ಸಭೆಯ ಮುಂದೆ ಬಂದು ಅದು ಚರ್ಚೆಯಾಗುತ್ತಿದೆ. ಇದರಲ್ಲಿ ಹೇಳಿರುವುದು, ಒಂದು ವಿಶ್ವವಿದ್ಯಾನಿಲಯ ಹೇಗಿರಬೇಕು, ಅದಕ್ಕೆ ಉಪಕುಲಪತಿ, ಕುಲಪತಿ, ಸೆನೇಟ್ ಇತ್ಯಾದಿ ಇರಬೇಕೇ ಬೇಡವೆ, ಇದ್ದರೆ ಹೇಗಿರಬೇಕು, ಇದಕ್ಕೆ ಸೇರುವ ಕಾಲೇಜುಗಳ ರೂಪರೇಖೆಗಳು ಹೇಗಿರಬೇಕು ಎಂಬ ಬಗ್ಗೆ ವರ್ಣನೆ. ಇದಕ್ಕೆ ನಾವು ಒಪ್ಪಿಗೆ ಕೊಟ್ಟು ಇದನ್ನು ಒಂದು ಕಾನೂನು ಮಾಡಿ, ಒಂದು ವಿಶ್ವವಿದ್ಯಾನಿಲಯವನ್ನು, ಒಂದು ವಿದ್ಯಾಪೀಠವನ್ನು ಸ್ಥಾಪನೆ ಮಾಡಬೇಕಾದರೆ, ಇದಕ್ಕೆ ಅಗತ್ಯವಾದ ಎಲ್ಲ ಸಾಧನಸಲಕರಣೆಗಳು ಇವೆಯೇ ಎನ್ನುವುದನ್ನು ಮೊದಲು ನೋಡಬೇಕು. ನೆನ್ನೆಯಿಂದಲೂ ಕೆಲವು ಸ್ನೇಹಿತರು ಇದೇನೋ ಬಹಳ ಒಳ್ಳೆಯ ಕೆಲಸ, ಆದರೆ ಇದನ್ನು ಕಾರ್ಯಗತ ಮಾಡುವುದಕ್ಕೆ ಏನು ಸಿದ್ಧತೆಗಳನ್ನು ನಡೆಸಿದ್ದೀರಿ ಎಂದು ಅವರು ಕೇಳಿದುದಕ್ಕೆ ಸರಕಾರದಿಂದ ಉತ್ತರವಿಲ್ಲ. ಇದು ಬಹಳ ಚೆನ್ನಾಗಿದೆ ಎಂದು ಹೇಳಿದ ಸ್ನೇಹಿತರು ಈಗತಾನೆ ಉತ್ತರ ಕನ್ನಡ ಜಿಲ್ಲೆಯಿಂದ ಚುನಾಯಿತರಾಗಿ ಬಂದವರು. ಇದು ಬಹಳ ಚೆನ್ನಾಗಿದೆ, ಇದರಲ್ಲಿ ಯಾವ ಸಂದೇಹವೂ ಇಲ್ಲ, ಯಾವ ಅನುಮಾನವೂ ಇಲ್ಲ ಎಂದು ಹೇಳಿದವರು ಇವರೊಬ್ಬರೇ. ಇನ್ನು ನಮ್ಮ ಸ್ನೇಹಿತರು ಗಾಂಜಿ ವೀರಪ್ಪನವರು ಬೆಂಗಳೂರು ವಿಶ್ವವಿದ್ಯಾನಿಲಯದ ಸಮಿತಿಯ ಸದಸ್ಯರು. ಇದರಲ್ಲಿರುವ ಸಂಶಯಗಳೆಲ್ಲವನ್ನೂ ಹೊರಗೆಡವಿದರು ; ವಿದ್ಯಾ ಮಂತ್ರಿಗಳಿಗೂ ಅವರಿಗೂ ವಾದ ವಿವಾದ ನಡೆಯಿತು. ಅಣ್ಣಾರಾಯರಿಗೂ ಅವರಿಗೂ ಸುಮಾರು ಎರಡು ಗಂಟೆ ಕಾಲ ನಡೆದ ವಾದ

ದಲ್ಲಿ, ಇದರಲ್ಲಿರುವ ಪ್ರತಿಯೊಂದು ಅಕ್ಷರವೂ ಜಟಿಲವಾಗಿದೆ, ಸಂಶಯಾಸ್ಪದವಾಗಿದೆ, ಏನೋ ಒಳ ಉದ್ದೇಶದಿಂದ, ಆಲ್ಟೀರಿಯರ್ ಮೋಟಿವ್‌ನಿಂದ ಇದನ್ನು ತರಲಾಗಿದೆ ಎಂದು ಎಲ್ಲ ಸದಸ್ಯರೂ ಅಪ್ಪಣೆ ಕೊಡಿಸಿದರು. ಮಂತ್ರಿಗಳು ಆಕ್ಸ್‌ಫರ್ಡ್‌ನಲ್ಲಿ ಹಾಗಿದೆ, ಕೇಂಬ್ರಿಜ್‌ನಲ್ಲಿ ಹೀಗಿದೆ, ಡೆಲ್ಲಿಯಲ್ಲಿ ಹೀಗಿದೆ, ಜಪಾನಿನಲ್ಲಿ ಹಾಗಿದೆ ಎಂದು ಹೇಳಿದರೆ ಅದನ್ನು ನಾನು ಕೇಳುವುದಿಲ್ಲ. ನವಿಲು ಕುಣಿಯುತ್ತದೆಂದು ಕೆಂಬೂತ ಪುಕ್ಕ ತರೆದುಕೊಂಡಂತೆ ನಮ್ಮ ವಿದ್ಯಾ ಮಂತ್ರಿಗಳು ನನ್ನ ಪುಕ್ಕವೂ ನವಿಲು ಗರಿಯಂತೆ ಬೆಳೆಯುತ್ತದೆಂದು ಹೀಗೆಲ್ಲ ಮಾಡುತ್ತಿದ್ದಾರೆ. ಅವರು ಮೊಂಡುತನ ಮತ್ತು ಪ್ರತಿಷ್ಠೆಗೆ ತಲೆಬಾಗುವನೆ. ಆ ಪ್ರತಿಷ್ಠೆಯ ಪೀಠದಿಂದ ಕೆಳಗಿಳಿದು ಮಾತನಾಡಬೇಕು. ತಲೆಗೆ ಸರಿಯಾಗುವ ಟೋಪಿಯನ್ನು ಹೊಲಿಸುವುದಕ್ಕೆ ಬದಲು ಟೋಪಿಯನ್ನು ಹೊಲಿಸಿ ಅದಕ್ಕೆ ಸರಿಯಾಗಿ ತಲೆಯನ್ನು ಮಾಡುವುದಕ್ಕೆ ಅವರು ಹೊರಟಿದ್ದಾರೆ. ಜಪಾನಿನ ಟೋಕಿಯೊ ನಗರದಲ್ಲಿ ಒಬ್ಬ ಗಂಡನಿಗೂ ಹೆಂಡತಿಗೂ ಜಗಳವಾಯಿತು, ಇದಕ್ಕೆ ಕಾರಣ ಗಂಡನಿಗೆ ಗಡಿಯಾರಗಳ ಮೇಲಿದ್ದ ಪ್ರೀತಿ. ಪ್ರತಿದಿನ ಅವನು ಮಲಗುವಾಗ ತಲೆದಿಂಬಿನ ಹತ್ತಿರ ಮುನ್ನೂರು ಗಡಿಯಾರಗಳನ್ನಿಟ್ಟುಕೊಂಡು ಮಲಗುತ್ತಿದ್ದ. ರಾತ್ರಿಯೆಲ್ಲ ಆ ಗಡಿಯಾರಗಳ ಟಿಕ್ ಟಿಕ್ ಶಬ್ದಗಳಿಂದ ಹೆಂಡತಿಗೆ ನಿದ್ದೆ ಬರುತ್ತಿರಲಿಲ್ಲ. ಹೆಂಡತಿ ಕೋರ್ಟಿಗೆ ಹೋಗಿ ಆ ಗಡಿಯಾರಗಳ ಶಬ್ದದಿಂದ ತನಗೆ ರಾತ್ರಿ ನಿದ್ದೆ ಬರುವುದಿಲ್ಲ; ಆದುದರಿಂದ ಆ ಗಡಿಯಾರಗಳನ್ನು ತೆಗೆದುಹಾಕುವಂತೆ ಆಜ್ಞೆ ಮಾಡಬೇಕೆಂದು ಕೇಳಿಕೊಂಡಳು. ಕೋರ್ಟಿನವರು ವಿಚಾರಣೆ ಮಾಡುವಾಗ ತನ್ನ ಹೆಂಡತಿಗಿಂತಲೂ ತನಗೆ ಗಡಿಯಾರವೇ ಹೆಚ್ಚೆಂದು ಗಂಡ ಹೇಳಿ ಹೆಂಡತಿಯನ್ನು ಡೈವೋರ್ಸ್ ಮಾಡಿದನಂತೆ. ಹಾಗೆ ಜನರು ತಮ್ಮನ್ನು ಏನು ಬೇಕಾದರೂ ತೆಗಳಲಿ, ಯಾರು ಯಾವುದೇ ರೀತಿ ಮಾತನಾಡಿದರೂ ನಾನು ನನಗೆ ತೋರಿದುದನ್ನೇ ಮಾಡುತ್ತೇನೆ, ಜನರು ಹೇಳಿದುದನ್ನು ಒಪ್ಪುವುದಿಲ್ಲ ಎಂಬ ಮನೋಧರ್ಮ ವಿದ್ಯಾ ಮಂತ್ರಿಗಳದು. ಗಡಿಯಾರದ ನೆಂಟರು ಕಂಠಿ ಸಾಹೇಬರು. ದೇಶದ ಜನತೆ ಯಾವುದನ್ನು ಬೇಡ ಎಂದು ಹೇಳುತ್ತಾರೋ ಅದನ್ನೇ ಮಾಡುತ್ತೇನೆ ಎಂದು ಹೊರಟರೆ ಇಂತಹ ಮೊಂಡುತನಕ್ಕೇನು ಹೇಳುವುದು? ಇದು ನನಗೆ ಅರ್ಥವಾಗುವುದಿಲ್ಲ. ಅಣ್ಣಾರಾಯರು "Primary education is the obligation of the State Government under the Constitution which says that the State Government should endeavour to give free primary education". ಎಂದು ಹೇಳಿದರು. ಈ ಹೊತ್ತು ಸ್ಕೂಲು ಕಟ್ಟಡಗಳಲ್ಲಿ, ಮಕ್ಕಳಿಗೆ ಪಾಠ ಹೇಳುವುದಕ್ಕೆ ಉಪಾಧ್ಯಾಯರಿಲ್ಲ. ಇದನ್ನು ಕೇಳಿದರೆ, ಐದು ಸಾವಿರ ಉಪಾಧ್ಯಾಯರಿದ್ದಾರೆ, ಇಪ್ಪತ್ತು ಉಪಾಧ್ಯಾಯರ ಶಿಕ್ಷಣ ಸಂಸ್ಥೆಗಳನ್ನು ಏರ್ಪಾಡು ಮಾಡಿದ್ದೇವೆ ಎಂದು ಉತ್ತರ ಕೊಟ್ಟರು. ಈಗ ಪ್ರೈಮರಿ, ಸೆಕೆಂಡರಿ ಮತ್ತು ಪ್ರೀ-ಯೂನಿವರ್ಸಿಟಿ ಪರೀಕ್ಷೆಗಳನ್ನು ಪಾಸು ಮಾಡಿಕೊಂಡು ಬಂದವರನ್ನು ಸ್ಪೆಷಲಿಸ್ಟ್ ಆಗುವುದಕ್ಕೆ ತಯಾರು ಮಾಡುತ್ತೇವೆ ಎಂದು ಹೇಳುತ್ತಾರೆ. ಇದು ಬರಿಯ ತಿರುಕನ ಕನಸು. ಒಬ್ಬ ತಿರುಕ ತಾನು ತಿರಿದು ತಂದಿದ್ದ ಹಿಟ್ಟನ್ನು ಇಟ್ಟುಕೊಂಡು ಒಂದು ಮುರುಕು ಮಂಟಪದಲ್ಲಿ ಮಲಗಿದ್ದಾಗ ಒಂದು ಹುಣಿಸೇ ಬೀಜವನ್ನು ಕಂಡು ಅದನ್ನು ನೆಟ್ಟು ಮರ ಬೆಳೆಸಿ, ಅದರಿಂದ ಬಂದ ಹಣ್ಣನ್ನು ಮಾರಿ ಹಣಗಳಿಸಿ, ಮದುವೆ ಮಾಡಿಕೊಳ್ಳುತ್ತೇನೆ, ನೆಂಟರು ಇಷ್ಟರನ್ನು ಕರೆಯುತ್ತೇನೆ, ಆಗ ನನ್ನ ಮಗು ಅತ್ತರೆ ಅದನ್ನು ಎತ್ತಿಕೊ ಎಂದು ಹೆಂಡತಿಗೆ ಹೇಳುತ್ತೇನೆ, ಅವಳೇನಾದರೂ ತಕ್ಷಣ ಎತ್ತಿಕೊಳ್ಳದಿದ್ದರೆ ಹೀಗೆ ಅವಳನ್ನು ಒದೆಯುತ್ತೇನೆ ಎಂದು ಹೇಳಿ ಹತ್ತಿರವಿದ್ದ ಹಿಟ್ಟಿನ ಮಡಕೆಗೆ ಒದ್ದಾಗ ಅದು ಒಡೆದು ತಿರಿದು ತಂದಿದ್ದ ಹಿಟ್ಟೆಲ್ಲ ಹೋಯಿತಂತೆ. ಬೆಳಿಗ್ಗೆ ಎದ್ದು ನೋಡಿದರೆ ಹಿಟ್ಟೇ ಇಲ್ಲ. ಹೀಗೆ ಕನಸು ಕಾಣುವ ವಿದ್ಯಾ ಮಂತ್ರಿಗಳು ಮೈಸೂರಿನ ಜನತೆಗೆ ಸಿಕ್ಕಿದ್ದಾರೆ. ಇವರು ನಿಜಲಿಂಗಪ್ಪನವರ ಮಂತ್ರಿಮಂಡಲದಲ್ಲಿ ಎರಡನೆಯ ಸ್ಥಾನ ಪಡೆದು ವಿದ್ಯಾ ಮಂತ್ರಿಗಳಾಗಿ ಈ ಸಭೆಯಲ್ಲಿ ಇದುವರೆಗೆ ಅವರು ನಡೆಸಿರುವ ಗೊಂದಲವೇ ಸಾಕು. ಅವರಲ್ಲಿ ನನಗೆ ವೈಯಕ್ತಿಕ ದ್ವೇಷವಿಲ್ಲದೆಯಿದ್ದರೂ ಅವರು ಮಾಡತಕ್ಕ ಕಾರ್ಯ ಚಟುವಟಿಕೆಯಿಂದ, ಪರಮಾತ್ಮ ಅವರಿಗೆ ಸರಿಯಾದ ಶಿಕ್ಷೆ ಮಾಡುವುದಿಲ್ಲವೇ ಎನಿಸುತ್ತದೆ. ದೇಶದಲ್ಲಿ, ಜಗತ್ತಿನಲ್ಲಿ, ಎಂಥೆಂಥವರನ್ನೋ ಕಳೆದುಕೊಂಡು ಇವರನ್ನು ಇಟ್ಟುಕೊಂಡಿದ್ದೇವಲ್ಲಾ ಎನಿಸುತ್ತದೆ. ಅವರು ಸಾಯಲಿ ಎಂದು ನಾನು ಹೇಳುವುದಿಲ್ಲ.

ಶ್ರೀ ಎಸ್. ಆರ್. ಕಂಠಿ.—ನಾನು ಜಗತ್ತಿನಲ್ಲಿ ಇರಬಾರದೆಂದು ಅವರ ಅಭಿಪ್ರಾಯವೆ? ಜಗತ್ತಿನಿಂದ ಏಕೆ ನನ್ನನ್ನು ಬಿಡಿಸುತ್ತಾರೆ?

ಶ್ರೀ ಸಿ. ಜೆ. ಮುಕಣ್ಣಪ್ಪ.—ಅವರು ಜಗತ್ತನ್ನು ಬಿಡಬೇಕೆಂದು ನಾನು ಹೇಳುವುದಿಲ್ಲ, ಅವರು ವಿದ್ಯಾ ಮಂತ್ರಿಗಳಾಗಿರಬಾರದು. ಮಾಡುವ ಕೆಲಸದಲ್ಲಿ ಯಾವುದೇ ರೀತಿಯ ದುರುದ್ದೇಶವಿರಬಾರದು ಎಂಬುದು ನನ್ನ ಉದ್ದೇಶ. ಆದರೆ ಇದರಲ್ಲೇನಿದೆ ಎಂಬುದನ್ನು ನಾವು ನೋಡಬೇಕು. 1916ನೆಯ ಇಸವಿಯಲ್ಲಿ ನಮ್ಮ ದೇಶವನ್ನು ಕಟ್ಟಿದ ಶಿಲ್ಪಿ ಸರ್. ಎಂ. ವಿಶ್ವೇಶ್ವರಯ್ಯನವರು ಮೈಸೂರು ಸಂಸ್ಥಾನದಲ್ಲಿ ಒಂದು ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಿದರು. ಎಲ್ಲರೊಡನೆಯೂ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಯೋಚನೆ ಮಾಡಿ ಅಲ್ಲಿ ವಿಜ್ಞಾನಿಗಳನ್ನೂ, ಉತ್ತಮ ಇಂಜನಿಯರುಗಳನ್ನೂ ನಿರ್ಮಾಣ ಮಾಡಲು ಏರ್ಪಾಡು ಮಾಡಿದರು. ಅವರು ಸ್ಥಾಪನೆ ಮಾಡಿದ ಸೆಂಟ್ರಲ್ ಕಾಲೇಜು ಅನೇಕ ವಿಜ್ಞಾನಿಗಳನ್ನೂ ವಿದ್ವಾಂಸರನ್ನೂ ನಿರ್ಮಾಣ ಮಾಡಿದೆ. ಶ್ರೀಮಾನ್ ಸಿ. ರಾಜಗೋಪಾಲಾಚಾರಿಯವರು ಆ ಕಾಲೇಜಿನ ಹಳೆಯ ವಿದ್ಯಾರ್ಥಿಗಳು. ಅವರು 80 ವರ್ಷ ವಯಸ್ಸನ್ನು ದಾಟಿದ ಪಿತಾಮಹರು ಮದ್ರಾಸಿನಲ್ಲಿ ಕುಳಿತಿದ್ದಾರೆ. ಇಂಥವರನ್ನು ಸೃಷ್ಟಿ ಮಾಡಿದ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಬಣ್ಣ ಬಳಿಯಬೇಕೆಂದು ಹೊರಟು, ತಾನು ಮಾಡುವುದೇ ಹೆಚ್ಚು, ಅದೇ ಸರಿ ಎಂದು ಹೇಳಿ ಭುಜಕೀರ್ತಿ ಕಟ್ಟುತ್ತೇನೆ ಎಂದು ಹೇಳುವ ಮೊಂಡುತನಕ್ಕೇನು ಹೇಳಬೇಕು ? ಮೊಂಡುತನಕ್ಕೂ ಒಂದು ಮಿತಿ ಇರಬೇಕು. ಶ್ರೀಮಾನ್ ವೆಂಕಟೇಗೌಡರು ಹೇಳಿದಂತೆ ಒಂದು, ಎರಡು ಮತ್ತು ಮೂರನೆಯ ಯೋಜನೆಗಳಲ್ಲಿ ಇಷ್ಟು ಮಾಡುತ್ತೇವೆಂದು ಜನರಿಗೆ ಆಶ್ವಾಸನೆ ಕೊಟ್ಟರಿ. ಅದನ್ನು ಪೂರೈಸದೆ ಒಂದು ಹೊಸ ವಿಶ್ವವಿದ್ಯಾನಿಲಯವನ್ನು ತೆರೆದು, ಕೋಟ್ಯಾಂತರ ರೂಪಾಯಿಗಳನ್ನು ಅದಕ್ಕಾಗಿ ಖರ್ಚು ಮಾಡುತ್ತೇವೆ, ಇಂಡಿಯಾ ಸರಕಾರದವರು ಹಣ ಕೊಡುತ್ತಾರೆ ಎಂದು ಹೇಳಿದರೆ ಹೇಗೆ ? ಸುಳ್ಳು ಆಶ್ವಾಸನೆಗಳನ್ನು ಜನರಿಗೆ ಕೊಡುವುದನ್ನು ಸರಕಾರ ನಿಲ್ಲಿಸಿದರೆ ದೇಶಕ್ಕೆ ಎಷ್ಟೋ ಕ್ಷೇಮ. ಈಗ ಇವರು ಮಾಡುವುದು ಒಳ್ಳೆಯದು ಎಂದು ಒಪ್ಪುವುದಾದರೆ, ಮೈಸೂರು ವಿಶಾಲವಾಗಿದೆ, ಇದರಲ್ಲಿ ಮೈಸೂರು ವಿಶ್ವವಿದ್ಯಾನಿಲಯವಿದೆ, ಕರ್ಣಾಟಕ ವಿಶ್ವವಿದ್ಯಾನಿಲಯವಿದೆ. ಈ ಹೊಸ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡುವುದಕ್ಕೆ ಬದಲು ಈಗ ಕೈಕೊಂಡಿರುವ ಕಾರ್ಯಗಳನ್ನೇ ಸಾಧನೆ ಮಾಡಲಿ. ಈ ಹಣವನ್ನು ದೇಶದ ಪ್ರೈಮರಿ ವಿದ್ಯಾಭ್ಯಾಸಕ್ಕೆ, ಸೆಕೆಂಡರಿ ವಿದ್ಯಾಭ್ಯಾಸಕ್ಕೆ ಖರ್ಚು ಮಾಡಲಿ. ಹಣಕಾಸಿನ ಮಂತ್ರಿಗಳು ಕಪಿಮುಷ್ಟಿ ಹಿಡಿಯುತ್ತಾರೆಂದು ಮುಖ್ಯ ಮಂತ್ರಿಗಳು ಹೇಳಿದರು. ಹಣಕಾಸಿನ ಮಂತ್ರಿಗಳ ಕಪಿಮುಷ್ಟಿ ಹಿಡಿತ ಇದೆ. ಅವರ ಕಪಿಮುಷ್ಟಿ ಹಿಡಿತ ಇದ್ದರೂ ಅವರ ಹಣಕಾಸಿನ ಗೋಣಿ ಚೀಲಕ್ಕೆ ಅನೇಕ ತೂತುಗಳಿವೆ. ಆದುದರಿಂದ ಹಣ ಉಳಿಯುವುದಿಲ್ಲ. ಈ ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ಏಳ ಲಕ್ಷ ರೂಪಾಯಿ ಹಣಕಾಸಿನ ಮಂತ್ರಿಗಳು ಎಲ್ಲಿಂದ ತರುತ್ತಾರೆ ? ಏಳು ಲಕ್ಷ ರೂಪಾಯಿ ಸಾಕಾಗುತ್ತದೆಯೇ ? ಅಲ್ಲಿ ಸ್ಟಾಫ್ ನೇಮಕ ಮಾಡಬೇಕು, ಲೆಕ್ಚರರ್ಸ್ ಬೇಕು, ಪ್ರೊಫೆಸರ್ಸ್ ಬೇಕು, ಯೂನಿವರ್ಸಿಟಿ ಕಟ್ಟಡ ಬೇಕು, ಇದಕ್ಕೆಲ್ಲಾ ಎಷ್ಟು ಹಣ ಬೇಕು ? ಈ ಮೊದಲು ಮಾತನಾಡಿದ ಮಾನ್ಯ ಸದಸ್ಯರು ಬಹಳ ಚೆನ್ನಾಗಿ ಮಾತನಾಡಿದರು. ಸರಕಾರದವರು 20 ಲಕ್ಷ ರೂಪಾಯಿ ವೆಚ್ಚ ಮಾಡಿ ರಾಜಭವನ ಕಟ್ಟಿಸುವರಂತೆ. ಲಕ್ಷಾಂತರ ರೂಪಾಯಿ ಖರ್ಚು ಮಾಡಿ ವಿಧಾನ ಸೌಧ ಕಟ್ಟಡ ಕಟ್ಟಿದ್ದಾರೆ. ಈಗ ಯೂನಿವರ್ಸಿಟಿ ಕಟ್ಟಡ ಕಟ್ಟಲು ಸರಕಾರ ಹಿಂಜರಿಯುವುದಿಲ್ಲ. ಇದನ್ನು ನನ್ನ ಸ್ನೇಹಿತರು ಬಹಳ ಚೆನ್ನಾಗಿ ಹೇಳಿದರು. ಅದನ್ನು ಇನ್ನೂ ಕೇಳಬೇಕು ಎಂದು ಎನಿಸಿತು. ಬಜೆಟ್ಟಿನಲ್ಲಿ ಪ್ರತಿಯೊಂದು ಖಾತೆಗೆ ಒದಗಿಸಬೇಕಾದ ಹಣ ಹಂಚುವುದಕ್ಕೆ ಇವರಿಗೆ ಶಕ್ತಿ ಇದೆಯೇ ! ಇವರ ಕಚ್ಚಾಟ ಹೇಗಿದೆ ಎಂಬುದು ಪಾರ್ಟಿ ಮೀಟಿಂಗಿನಲ್ಲಿ ಗೊತ್ತಾಗುತ್ತದೆ. ಇಂದು ದೇಶದ ಹಣಕಾಸಿನ ಸ್ಥಿತಿ ಅಸ್ತವ್ಯಸ್ತವಾಗಿದೆ. ಸರಕಾರದ ಖಜಾನೆಯಲ್ಲಿ ಹಣವಿಲ್ಲದ ಮೂಲಕ ರಿಜರ್ವ್ ಬ್ಯಾಂಕಿನಿಂದ ಓವರ್‌ಡ್ರಾಫ್ಟ್ ತೆಗೆದುಕೊಳ್ಳಬೇಕಾಗಿದೆ. ಈ ರೀತಿ ಮಾಡುವುದು ಸರಿಯಲ್ಲ. ಯಾವಾಗಲೂ ಹಾಸಿಗೆ ಇದ್ದಷ್ಟು ಕಾಲು ಚಾಚಬೇಕು. ರಾಜಭವನ ಕಟ್ಟಿಸುವುದಕ್ಕೆ 20 ಲಕ್ಷ ರೂಪಾಯಿ ಒದಗಿಸುತ್ತಾರೆ. ಆದರೆ ಒಂದು ಪ್ರೈಮರಿ ಸ್ಕೂಲು ಕಟ್ಟಡ ಕಟ್ಟಿಸುವುದಕ್ಕೆ ಹಣ ಕೇಳಿದರೆ ದುಡ್ಡು ಇಲ್ಲಾ ಎಂಬು ಹೇಳುತ್ತಾರೆ. ಈಗಿನ ಸಂದರ್ಭದಲ್ಲಿ ರಾಜ ಭವನ ಕಟ್ಟಿಸಬೇಕಾದ ಎಮರ್ಜನ್ಸಿ ಇದೆಯೇ ? ಇದು ನ್ಯಾಯವೇ ? 20 ಲಕ್ಷ ರೂಪಾಯಿ ಎಲ್ಲಿಂದ ತರುತ್ತಾರೆ ? ಕೇಂದ್ರ ಸರಕಾರದವರು ಇದಕ್ಕೆ ಹಣ ಕೊಡುತ್ತಾರೆಂದು ಪಿ ಡಬ್ಲ್ಯೂ.ಡಿ. ಮಂತ್ರಿಗಳು ಹೇಳಿದರು. ಇದನ್ನು ಹಣ ಕಾಸಿನ ಮಂತ್ರಿಗಳು ವಿವರವಾಗಿ ಸ್ಪಷ್ಟಪಡಿಸಿ ಕೇಂದ್ರದವರು ಯಾವ ರೀತಿ ಹಣ ಕೊಡುತ್ತಾರೆ ಎಂಬುದನ್ನು ಹೇಳಬೇಕು. ಏಕೆಂದರೆ ಈ ರೀತಿ ಸುಳ್ಳು, ಅಸತ್ಯ ನುಡಿಯುವುದಕ್ಕಾದರೂ ಒಂದು ಲಿಮಿಟ್ ಇರಬೇಕು. ನಮ್ಮ ದೇಶದಲ್ಲಿ ಮುಖ್ಯವಾದಂಥ ಕೆಲಸಗಳಿಗೆ ಹಣವಿಲ್ಲದಿರುವಾಗ್ಗೆ ಹೊಸ ಯೂನಿವರ್ಸಿಟಿಗೆ ಹಣ ಖರ್ಚು ಮಾಡುವುದು ಸರಿಯಲ್ಲ. ಈಗಿನ ವಿದ್ಯಾ ಮಂತ್ರಿಗಳು 1962ರಲ್ಲಿ ಮುಖ್ಯ ಮಂತ್ರಿಗಳಾಗಿದ್ದಾಗ್ಗೆ ಭರತನ ಹೆಸರಿನಲ್ಲಿ ರಾಜ್ಯಭಾರ ಮಾಡಿದಾಗಿನಿಂದ ಗೊಂದಲ ಉಂಟು ಮಾಡುತ್ತಿದ್ದಾರೆ. ತಾವು ಮಂತ್ರಿ ಪದವಿಯನ್ನು ಬಿಟ್ಟು ಹೋದರೂ ಹಿಂದೆ ತಮ್ಮ ಹೆಸರು ದೇಶದಲ್ಲಿ ಕೊನೆಯವರೆಗೆ ಉಳಿಯಲಿ ಎಂದು ಈ ಹೊಸ ವಿಶ್ವವಿದ್ಯಾನಿಲಯ ತೆರೆಯಬೇಕು ಎಂಬುದು ಅವರ ಉದ್ದೇಶವಾಗಿದ್ದರೆ ಅದು ನನಗೆ ಅರ್ಥವಾಗುವುದಿಲ್ಲ. ಈ ಕಾನೂನು ಜಾರಿಗೆ ಬಂದರೆ ಲೆಕ್ಚರರ್ಸ್, ಪ್ರೊಫೆಸರ್ಸ್ ಅವರ ಸ್ಥಿತಿಗತಿ ಏನು, ಅವರಿಗೆ ಯಾವ ರೀತಿ ಸಂಬಳ ಸಾರಿಗೆ ಕೊಡಲಾಗುವುದು, ಕಾಲೇಜ್ ಸ್ಟಾಫ್ ಎಷ್ಟಿರಬೇಕು, ಯಾವುದೂ ಗೊತ್ತಾಗುವುದಿಲ್ಲ. ವಿದ್ಯಾ ಇಲಾಖೆಯಲ್ಲಿ ಈಗಿರತಕ್ಕ ಗೊಂದಲ ಅನ್ಯಾಯ ಸರಿಪಡಿಸುವುದಕ್ಕೆ

ಆಗದೇ ಇರುವಾಗ್ಗೆ ಹೊಸ ವಿಶ್ವವಿದ್ಯಾನಿಲಯವನ್ನು ಪ್ರಾರಂಭಿಸುವುದು ಏತಕ್ಕೆ? ಮೈಸೂರು ಹೈಕೋರ್ಟಿನಲ್ಲಿ ಸರಕಾರದ ವಿರುದ್ಧ ಜಡ್ಜ್‌ಮೆಂಟ್ ಕೊಟ್ಟಿದ್ದಾರೆ. ಮೈಸೂರು ರಾಜ್ಯದ ಪ್ರಜೆಗಳು ಸರಕಾರದಲ್ಲಿ ನಂಬಿಕೆ ಕಳೆದುಕೊಂಡಿದ್ದಾರೆಂದು ಕಟುವಾಗಿ ಟೀಕಿಸಿದ್ದಾರೆ. ಈ ರೀತಿ ಇದ್ದರೂ ಅನ್ಯಾಯವನ್ನು ಸರಿಪಡಿಸದೆ ಈ ಜಡ್ಜ್‌ಮೆಂಟ್ ಮೇಲೆ ಶ್ರೇಷ್ಠ ನ್ಯಾಯಾಲಯಕ್ಕೆ ಅಪೀಲ್ ಹೋಗಬೇಕೆಂದು ಹೇಳುತ್ತಾರೆ. ಆರೆಂಟು ತಿಂಗಳಾದರೂ ಅನ್ಯಾಯ ಸರಿಪಡಿಸುವುದಕ್ಕಾಗಿಲ್ಲ. ಜನತೆಯ ನಂಬಿಕೆಯನ್ನು ಕಳೆದುಕೊಂಡಿದ್ದಾರೆ. ನಮ್ಮ ವಿದ್ಯಾ ಮಂತ್ರಿಗಳು ಹೊಸ ಮೈಸೂರು, ಹಳೇ ಮೈಸೂರು ಎಂಬ ವಿಷಬೀಜವನ್ನು ಬಿತ್ತಿದ್ದಾರೆ. ಈ ವಿಷಬೀಜದ ಮರಕ್ಕೆ ನೀರು ಗೊಬ್ಬರ ಹಾಕುತ್ತಿದ್ದಾರೆ. ಇದು ಏತಕ್ಕೆ ಎಂದರೆ ಇವರ ಮನಸ್ಸಿನಲ್ಲಿ ಯಾರನ್ನೋ ವೈಸ್-ಚಾನ್ಸಲರ್ ಮಾಡಬೇಕು ಎಂದಿದೆ. ವೈಸ್-ಚಾನ್ಸಲರ್ ಮಾಡುತ್ತೇನೆ ಎಂದು ಯಾರಿಗೋ ಮಾತು ಕೊಟ್ಟಿರುವ ಹಾಗೆ ಕಾಣುತ್ತದೆ. ಅವರ ಮನಸ್ಸಿನಲ್ಲಿ ಏನು ಅಭಿಪ್ರಾಯ ಇದೆ ಎಂಬುದು ನನಗೆ ಗೊತ್ತಿದೆ. ನಾನು ಹೇಳುವುದು ಸುಳ್ಳಾದರೆ ನಾನು ರಾಜೀನಾಮೆ ಕೊಟ್ಟು ಹೋಗುತ್ತೇನೆ. ನಿಜಲಿಂಗಪ್ಪನವರನ್ನು ಒಪ್ಪಿಸುತ್ತೇನೆ, ಮಂತ್ರಿಮಂಡಲದಲ್ಲಿ ಅನುಮತಿ ಪಡೆಯುತ್ತೇನೆ, ಈ ಸಭೆಯಲ್ಲಿ ಸಹ ಒಪ್ಪಿಗೆ ಪಡೆಯುತ್ತೇನೆ ಎಂದು ಯಾರಿಗೋ ಹೇಳಿದ ಹಾಗೆ ಇದೆ. ಈ ಕಾನೂನು ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ ಆದರೆ ನಿಜವಾಗಿಯೂ ಇದರಿಂದ ಒಳ್ಳೆಯದಾಗುವುದಿಲ್ಲ. ಈಗಾಗಲೇ ಮೈಸೂರು ವಿಶ್ವವಿದ್ಯಾನಿಲಯ, ಕರ್ನಾಟಕ ವಿಶ್ವವಿದ್ಯಾನಿಲಯಗಳಲ್ಲಿ ಇರುವ ತಾರತಮ್ಯವನ್ನು ನೋಡಿದರೆ ಬೆಂಗಳೂರು ಯೂನಿವರ್ಸಿಟಿ ಅಸ್ತಿತ್ವಕ್ಕೆ ಬರುವುದು ಸರಿಯೇ, ಎಂದು ಕೇಳುತ್ತೇನೆ. ಯಾವ ಆಧಾರದ ಮೇಲೆ ಕೇಂದ್ರದವರು ಗ್ರ್ಯಾಂಟ್ ಏಡ್ ಕೊಡುತ್ತಾರೆ? ಯಾವ ಆಧಾರದ ಮೇಲೆ ಸ್ಥಾಪನೆ ಮಾಡಲಾಗುವುದು? ಜನಸಂಖ್ಯೆಯ ಆಧಾರ ಇಟ್ಟುಕೊಳ್ಳಲಾಗುವುದೇ? ಪ್ರಾದೇಶಿಕ ಆಧಾರ ತೆಗೆದುಕೊಳ್ಳಲಾಗುವುದೇ? ಯಾವ ಆಧಾರದ ಮೇಲೆ ಹಣ ಕೊಡುತ್ತಾರೆ ಎಂಬುದನ್ನು ತಿಳಿಸಬೇಕು.

ಶ್ರೀ ಎಸ್. ಆರ್. ಕಂಠಿ.—ಸುಮ್ಮನೆ ಏನಾದರೂ ಹೇಳುವುದು ಸರಿಯಲ್ಲ. ಎಷ್ಟು ಗ್ರ್ಯಾಂಟ್ ಕೊಡಲಾಗುತ್ತದೆ ಎಂಬುದನ್ನು ತಿಳಿದುಕೊಂಡಿಲ್ಲ. ಎಜ್ಯುಕೇಷನ್ ಡಿಪಾರ್ಟ್‌ಮೆಂಟ್ ಇದನ್ನು ಗೊತ್ತು ಮಾಡಿಲ್ಲ. ಫೈನಾನ್ಸ್ ಡಿಪಾರ್ಟ್‌ಮೆಂಟಿನ ಡೆಪ್ಯುಟಿ ಸೆಕ್ರೆಟರಿಯವರು ಇದನ್ನು ಗೊತ್ತು ಮಾಡಿದ್ದಾರೆ. ಸುಮ್ಮನೆ ವಿಷಯ ತಿಳಿದುಕೊಳ್ಳದೆ ಮಾತನಾಡಬಾರದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಹೌದು. ನಾನು ಸುಮ್ಮನೆ ಮಾತನಾಡಿ ಹೋಗುತ್ತೇನೆ. ನಿಮ್ಮ ಕೈಯಲ್ಲಿ ಲೇಖನಿ ಇದೆ. ಲೇಖನಿಯಿಂದ ಬರೆದುಬಿಟ್ಟು ಅನ್ಯಾಯ ಮಾಡಿ ಹಾಳು ಮಾಡಿ ಬಿಡುತ್ತೀರಿ. ನಾನು ಬರೀ ಮಾತನಾಡುತ್ತೇನೆ.

ಫೀಜ್ ಹೆಚ್ಚು ಮಾಡಿದ್ದನ್ನು ಕಡಿಮೆ ಮಾಡಿಸಲು ವಿದ್ಯಾರ್ಥಿಗಳು ಸತ್ಯಾಗ್ರಹ ಮಾಡಬೇಕಾದ ಸಂದರ್ಭ ಉಂಟಾಯಿತು. ನಮ್ಮ ಮುಖ್ಯಮಂತ್ರಿಗಳು ದೊಡ್ಡ ಮನಸ್ಸು ಮಾಡಿ ಕಾಲೇಜು ಫೀಜ್ ವಿಚಾರದಲ್ಲಿ ಪರಿಶೀಲನೆ ಮಾಡಲು ಒಂದು ಕಮಿಟಿಯನ್ನು ನೇಮಕ ಮಾಡಿದರು. ಆದರೆ ರಿಪೋರ್ಟ್ ಈವರೆಗೆ ಬಂದಿಲ್ಲ. ಈ ಎಲ್ಲ ವಿಚಾರಗಳಲ್ಲಿ ವಿದ್ಯಾ ಮಂತ್ರಿಗಳು ತಮ್ಮ ಕಪಿಮುಷ್ಟಿ ಬಿಗಿಯಾಗಿ ಹಿಡಿದು ಕೆಲಸ ಮಾಡುತ್ತಿದ್ದಾರೆ. ಆ ಸಮಿತಿಯ ಅಧ್ಯಕ್ಷರಾದ ಲಕ್ಷ್ಮಣಸ್ವಾಮಿ ಮೊದಲಿಯಾರ್ ಅವರು ರಾಜೀನಾಮೆ ಕೊಟ್ಟಿದ್ದನ್ನು ಮುಖ್ಯ ಮಂತ್ರಿಗಳು ಒಪ್ಪಿಕೊಂಡರೂ ಇದನ್ನು ಅವರು ಒಪ್ಪಿಕೊಳ್ಳಲಿಲ್ಲ. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಈಗ ಮನೆಯಲ್ಲಿ ಹಣ ಬಿದ್ದು ನಾರುತ್ತಾ ಇದೆ ಇಂಥ ಸಮಯದಲ್ಲಿ ಹೊಸ ಮನೆ ಕಟ್ಟುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಇದು ಸರಿಯಲ್ಲ. ಲೆಕ್ಚರರ್ಸ್ ವಿಚಾರದಲ್ಲಿ ಸರಕಾರ ಮಾಡಿದ್ದು ನ್ಯಾಯವಲ್ಲ ಎಂದು ಹೈಕೋರ್ಟ್ ತೀರ್ಮಾನ ಕೊಟ್ಟಿದ್ದರೂ ವಿದ್ಯಾ ಮಂತ್ರಿಗಳು ಸುಪ್ರೀಂ ಕೋರ್ಟಿಗೆ ಅಪೀಲು ಹೋಗುತ್ತೇವೆ ಎಂದು ಹೇಳುತ್ತಾರೆ. ಈ ವಿಚಾರದಲ್ಲಿ ವಿದ್ಯಾ ಮಂತ್ರಿಗಳು ಮೊಂಡುತನ ಹಿಡಿದು ಕುಳಿತಿದ್ದಾರೆ. ಪ್ರತಿಯೊಂದು ಕೆಲಸದಲ್ಲಿ ಕಲಸಮೇಲೋಗರ ಮಾಡಿ ಎಲ್ಲ ಕಡೆ ಕಹಿ ವಾತಾವರಣವನ್ನು ಉಂಟು ಮಾಡಿದ್ದಾರೆ. ಇವರ ಮನಸ್ಸಿನಲ್ಲಿ ಯಾವುದೋ ಒಂದು ದುರುದ್ದೇಶ ಇದೆ ಎಂದು ಕಾಣುತ್ತದೆ. ಹಳೇ ಮೈಸೂರಿಗೆ ಮಸಿ ಬಳೆಯುವ ಕಾರ್ಯವನ್ನು ಮಾಡುತ್ತಿದ್ದಾರೆ. ಈ ರೀತಿ ಮಾಡುವುದು ಯೋಗ್ಯವಲ್ಲ. ಇವರು ಹಟ ಹಿಡಿದು ಕೆಲಸ ಮಾಡುತ್ತಿರುವುದರಿಂದ ಏನಾದರೂ ಅನಾಹುತವಾಗುತ್ತದೆ ಎಂದು ನನ್ನ ಮನಸ್ಸಿನಲ್ಲಿ ಶಂಕೆ ಬಂದಿದೆ.

ಈಗ ತಾನೆ ಶ್ರೀಮಾನ್ ಕೃಷ್ಣರವರು ಅಲ್ಲಿ ಪಿ. ಪಿ. ಇಲ್ಲಿ ಪಿ. ಯು. ಸಿ. ಅಲ್ಲ ಅಡ್ಮಿಷನ್ ಇಲ್ಲಿ ರಿಡ್ಮಿಷನ್ ಯಾವ ರೀತಿ ಮಾಡುತ್ತಾರೆ ಎಂಬುದನ್ನು ಹೇಳಿದರು. ನಿನ್ನೆ ದಿವದ ಸಂಯುಕ್ತ ಕರ್ನಾಟಕದಲ್ಲಿ ಒಂದು ಅಡ್ವರ್‌ಟೈಸ್‌ಮೆಂಟ್ ಇದೆ. ಯಾರನ್ನು ಅಲ್ಲಿ ಸೇರಿಸಬೇಕೆಂದು ಕಾಗದ ಬರೆದಿದ್ದೇವೆ ಎಂದು ಹೇಳುತ್ತಾ ಇದ್ದಾರೆ. ಹಾಗಾದರೆ ಇವರು ಬರೆದಿರುವುದು ಏನು? ಅಲ್ಲಿ ಅಡ್ವರ್‌ಟೈಸ್‌ಮೆಂಟ್ ಬಂದಿರುವುದು ಏನು?

ಶ್ರೀ ಎಸ್. ಆರ್. ಕಂಠಿ.—ನೀವು ಬೇರೆ ತಿಳಿದುಕೊಂಡಿದ್ದೀರಿ. ಪಿ.ಯು.ಸಿ.ಯು ದಲ್ಲಿ ಪಾಸ್ ಆದವರನ್ನು ಅಲ್ಲಿ ಪಿ.ಪಿ.ಗೆ ತೆಗೆದುಕೊಳ್ಳುತ್ತಾರೆ. I Year B.Sc. is equal to that and they will be taken to M. B. B. S. I Year. ಆದ್ದರಿಂದ ಅದಕ್ಕೂ ಇದಕ್ಕೂ ಯಾವ ಅಡಚಣೆಯೂ ಬರುವುದಿಲ್ಲ.

3-00 P.M.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅವರು ಹೇಳಿದ ತೀರ್ಮಾನವನ್ನೇ ಒಪ್ಪಿಕೊಳ್ಳಬೇಕಾಗಿದೆ. ಏಕೆಂದರೆ ನಾವು ಹೇಳಿದ್ದು ಸರಿಯಿಲ್ಲ ಎಂದು ಹೇಳಬಹುದು, ಅವರ ಹತ್ತಿರ ಕಾಚಾ ಕಟ್ಟಿ ಕುಸ್ತಿ ಮಾಡುವುದಕ್ಕಾಗುವುದಿಲ್ಲ. ಇವತ್ತು ವಿದ್ಯಾಭ್ಯಾಸದ ಪ್ರಗತಿಗೆ ಇನ್ನೊಂದು ಹೊಸ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡತಕ್ಕ ಸ್ಥಿತಿಗತಿಗಳು ನಮ್ಮ ರಾಜ್ಯದಲ್ಲಿ ಇವೆಯೇ ಎಂಬುದು ಯೋಚನೆ ಮಾಡಬೇಕು. ಇವತ್ತು ಪಿ.ಯು.ಸಿ ಅಲ್ಲವೆ 11ನೇ ಸ್ಟ್ಯಾಂಡರ್ಡನ್ನು ಹೈಸ್ಕೂಲುಗಳಿಗೆ ಕೊಟ್ಟಿದ್ದಾರೆ. ಹೈಸ್ಕೂಲಿನಲ್ಲಿ ವಿದ್ಯಾಭ್ಯಾಸ ಮಾಡಿದವನು ಇಲ್ಲಿಗೆ ಬಂದು ಇಲ್ಲಿರತಕ್ಕ ಆರ್ಟ್ಸ್ ಅಂಡ್ ಸೈನ್ಸ್ ಕಾಲೇಜಿಗೆ ಅಡ್ಮಿಟ್ ಆಗುತ್ತಾನೆ. ಹೈಸ್ಕೂಲಿನಲ್ಲಿ ಓದಿದವನು ಯಾವ ರೀತಿ ಅಭ್ಯಾಸ ಮಾಡಿರುತ್ತಾನೆ ಎಂಬುದನ್ನು ನೋಡಿದರೆ ಅಲ್ಲಿ ಅವನಿಗೆ ಲೈಬ್ರರಿ ಇರುವುದಿಲ್ಲ, ಲ್ಯಾಬೋರೇಟರಿ ಇರುವುದಿಲ್ಲ, ಸರಿಯಾದ ಕೋಚಿಂಗ್ ಇರುವುದಿಲ್ಲ, ಸರಿಯಾದ ಶಿಕ್ಷಕರು ಇರುವುದಿಲ್ಲ. ಆ ರೀತಿ ಓದಿದವನು ಫಸ್ಟ್ ಇಯರ್ ಬಿ. ಎಸ್ ಸಿ.ಗೆ ಸೇರುತ್ತಾನೆ, ಅವನು ರಿಸರ್ಚ್ ಸ್ಟಡಿಗೆ ಬರುತ್ತಾನೆ. ಟೆಸ್ಟ್ ಟ್ಯೂಬನ್ನೇ ನೋಡಿಲ್ಲದೇ ಇರುವವನು, ಯಾವ ವಿಷಯಗಳ ಪರಿಚಯವೂ ಇಲ್ಲದೇ ಇರತಕ್ಕವನು, he will be a student of this constituent college. ಇಲ್ಲಿ ಬಂದು, he has to show his merit. He is expected to become a merited student. ಅವನು ಇಲ್ಲಿ ಬಂದು ರಿಸರ್ಚ್ ಸ್ಕಾಲರ್ ಆಗಬೇಕು. ಆಹಾ ಎಂತಹ ಕರ್ಮ ಯೋಗಿ ಅಪ್ಪಾ ಅವನು ಅಯ್ಯೋ ಪರಮಾತ್ಮಾ ! ಈ ವಿದ್ಯಾ ಮಂತ್ರಿಗಳಿಗೆ ಸ್ವಲ್ಪ ಬುದ್ಧಿ ಕೊಡಬಾರದೆ ! ಮಂತ್ರಿಗಳಾಗಿರುವವರಿಗೆ ಕ್ವಾಲಿಫಿಕೇಷನ್ ಬೇಕಿಲ್ಲ. ಮುಖ್ಯ ಮಂತ್ರಿಗಳ ದಯೆ ಒಂದು ಇದ್ದರೆ ಸಾಕು. ಒಬ್ಬ ರಿಸರ್ಚ್ ಸ್ಕಾಲರ್ ಇವತ್ತಿನ ದಿವಸ ಸ್ಪುಟ್ನಿಕ್ ತಯಾರು ಮಾಡಬೇಕು, ಒಂದು ಇಂಜನ್ ತಯಾರು ಮಾಡಬೇಕು, ಆಕಾಶದಲ್ಲಿ ಹಾರಾಡುವ ರಾಕೆಟ್ ತಯಾರು ಮಾಡಬೇಕು. ಅದರಲ್ಲಿ ರಿಸರ್ಚ್ ಮಾಡಬೇಕು. ಟೆಸ್ಟ್ ಟ್ಯೂಬ್ ಎಂದರೆ ಗೊತ್ತಿಲ್ಲ, ಸರಿಯಾದ ಟೀಚಿಂಗ್ ಇಲ್ಲ ಅಂತಹವನನ್ನು ತೆಗೆದುಕೊಂಡು ಇಲ್ಲಿ ರಿಸರ್ಚ್ ಮಾಡು ಎಂದು ಹೇಳುತ್ತೀರಲ್ಲಾ ಅವನಿಂದ ಸಾಧ್ಯವಾಗುತ್ತದೆಯೇ ? ಇದಕ್ಕಿಂತಲೂ ಅಧೋಗತಿಗೆ ಇಳಿದಿರತಕ್ಕ ಈ ವಿದ್ಯಾಭ್ಯಾಸದ ಪದ್ಧತಿ ಇನ್ನಾವ ರಾಜ್ಯದಲ್ಲಾದರೂ ಇದೆಯೇ ಎಂದು ಕೇಳುತ್ತೇನೆ. ಮಾತೆತ್ತಿದರೆ ಡೆಲ್ಲಿ, ಮದರಾಸು, ಬೊಂಬಾಯಿ ಎಂದು ಹೇಳುತ್ತೀರಿ. ಬೊಂಬಾಯಿನಲ್ಲಿ ಅವರ ಸ್ಥಿತಿಗತಿ ಏನಿದೆ, ನಮ್ಮ ದೇಶದಲ್ಲಿ ನಮ್ಮ ಸ್ಥಿತಿಗತಿ ಏನಿದೆ ಎಂಬುದನ್ನು ನಾವು ನೋಡಿಕೊಳ್ಳಬೇಕು. ನಮ್ಮ ಸ್ಥಿತಿಗತಿಗಳನ್ನು ನೋಡಿಕೊಂಡು ನಮ್ಮ ಶಕ್ತಿ ನೋಡಿಕೊಂಡು ನಾವು ವ್ಯವಹಾರ ಮಾಡಬೇಕು. ಇವತ್ತಿನ ದಿವಸ ಇವರು ಕೊಟ್ಟಿರುವ 11ನೇ ಸ್ಟ್ಯಾಂಡರ್ಡ್ it will not be under the control of the University. It will be under the control of the Director of Public Instruction. ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ 11ನೇ ಸ್ಟ್ಯಾಂಡರ್ಡನ್ನು ಮ್ಯಾನೇಜ್ ಮಾಡುತ್ತಾನೆ. 50–51 ಹನ್ನೊಂದನೆಯ ಸ್ಟ್ಯಾಂಡರ್ಡ್ ಹೈಸ್ಕೂಲುಗಳನ್ನು ಕೊಟ್ಟಿದ್ದಾರೆ, ಅದೂ ಎಂತೆಂತಹ ಜಾಗಗಳಲ್ಲಿ ಕೊಟ್ಟಿದ್ದಾರೆ ಎಂದರೆ ಶ್ರೀರಂಗಪಟ್ಟಣ ತಾಲ್ಲೂಕು ಅರಕೆರೆಯಲ್ಲಿ ಕೊಟ್ಟಿದ್ದಾರೆ. ಅಲ್ಲಿ 64 ಜನಕ್ಕೆ ಮೊನ್ನೆ ನಡೆದ ಪರೀಕ್ಷೆಯಲ್ಲಿ ಒಬ್ಬನೇ ಒಬ್ಬ ಪಾಸ್ ಆಗಿದ್ದಾನೆ. ಇದನ್ನು ಏಕೆ ಹೇಳುತ್ತೇನೆ ಎಂದರೆ ಈ ಸರ್ಕಾರದಲ್ಲಿ ಕೆಲಸ ಮಾಡಬೇಕೆಂದು ಹೊರಟಿರತಕ್ಕ ಯಾವ ಮಂತ್ರಿಗಳಿಗೂ ಇದು ಮರ್ಯಾದೆ ತರತಕ್ಕ ವಿಷಯವಲ್ಲ. ಇವತ್ತು ಹೇಳುತ್ತೇನೆ ಹಾಸನದಲ್ಲಿರತಕ್ಕ ಗವರ್ನಮೆಂಟ್ ಕಾಲೇಜಿನಲ್ಲಿ ಎರಡು ವರ್ಷಗಳಿಂದ ಪ್ರಿನ್ಸಿಪಾಲೇ ಇರಲಿಲ್ಲ, ಇವತ್ತೂ ಕೂಡ ಇಲ್ಲ. ವಿದ್ಯಾ ಮಂತ್ರಿಗಳಿಗೆ 22 ಕೋಟಿ ರೂಪಾಯಿಗಳನ್ನು ಇವತ್ತಿನ ದಿವಸ ಕೊಟ್ಟಿದ್ದೇವೆ. ಯಾರು ಏನಾದರೂ ತಿಳಿದುಕೊಳ್ಳಲಿ ಅವರಿಗೆ ಇರುವುದು ಒಂದೇ ಒಂದು ಬಲ. ಅದು ಇಲ್ಲದೇ ಹೋಗಿದ್ದರೆ ಇವತ್ತಿನ ದಿವಸ ಅವರು ಅಲ್ಲಿ ಮಂತ್ರಿಗಳಾಗುವುದಕ್ಕೆ ಸ್ಥಾನ ಇರುತ್ತಾ ಇರಲಿಲ್ಲ. ಯಾವ ಮಠ ಯಾವ ಒಂದು ಕೋಮಿಗೆ ಅವರು ಸೇರಿದ್ದಾರೋ ಅವರು ಇವರು ಇರಬೇಕೆಂದು ಹೇಳುತ್ತಾ ಇದ್ದಾರೆ. ಹಾಗಲ್ಲದೇ ಇದ್ದಿದ್ದರೆ ಇವತ್ತಿನ ದಿವಸ ಈ ಸಭೆಯಲ್ಲಿ ಪ್ರಮಾಣ ಮಾಡಿ ಹೇಳುತ್ತೇನೆ ಅವರು ಅಲ್ಲಿ ಇರುವುದಕ್ಕೆ ಲಾಯಕ್ಕು ಅಲ್ಲ. ಇದರಲ್ಲಿ ಇರತಕ್ಕ ಪ್ರೊವಿಷನ್ಸ್ ಏನಿದೆ ಇದನ್ನೆಲ್ಲಾ ಓದಿ ತಿಳಿದುಕೊಂಡಿದ್ದೇನೆ. ಇದರಲ್ಲಿ ಪ್ರತಿಯೊಂದು ಪೆಟ್ಟಿ ಪಾಲಿಟಿಕ್ಸ್ ರಾಜಕೀಯ. ಸಿಂಡಿಕೇಟ್‌ನಲ್ಲಿ ಯಾರು ಇರಬೇಕು, ಸೆನೇಟ್‌ನಲ್ಲಿ ಯಾರು ಇರಬೇಕು, ಯಾರನ್ನು ಹಾಕಿದರೆ ಸರಿಯಾಗುತ್ತದೆ, ಅವರು ಇರಬೇಕೇ ಬೇಡವೇ ಇವೇ ಹೊರತು ಮತ್ತೇನೂ

ಇಲ್ಲ. ಕ್ಯಾಪ್‌ ಬೈ ಕ್ಲಾಜ್‌ ಹೇಳುವಾಗ ಇದನ್ನೆಲ್ಲಾ ಹೇಳುವುದಕ್ಕೆ ಆಗುವುದಿಲ್ಲ ಅವಕ್ಕೆ ಇದನ್ನೆಲ್ಲಾ ಹೇಳುತ್ತಾ ಇದ್ದೇನೆ. ವಿದ್ಯಾ ಮಂತ್ರಿಗಳಿಗೆ ಇದು ತರವಲ್ಲ. ವಿದ್ಯಾ ಮಂತ್ರಿಗಳಾದ ತಾವು ಈ ಖಾತೆಯನ್ನು ವಹಿಸಿಕೊಂಡ ಮೇಲೆ ಮೈಸೂರು ಶ್ರೇಷ್ಠ ನ್ಯಾಯಾಸ್ಥಾನ 5—6 ಸಾರಿ ಹೇಳಿತು—ಅವರು ಅಲ್ಲಿ ಇರುವುದಕ್ಕೆ ಲಾಯಕ್ಕು ಅಲ್ಲ ಎಂದು ಅರ್ಥ ಬರುವ ರೀತಿಯಲ್ಲಿ. ನಾನಾದರೂ ಹೇಳುತ್ತೇನೆ ಹಿಂದೆ ಒಂದು ಸಾರಿ ರೈಲು ಬಿದ್ದು ಹೋಯಿತು ಎಂದು ಹೇಳಿ ಲಾಲ್‌ ಬಹದ್ದೂರ್‌ ಶಾಸ್ತ್ರಿಗಳು ರಾಜಿನಾಮೆ ಕೊಟ್ಟರು, ಸುಪ್ರೀಂ ಕೋರ್ಟ್ ತಮ್ಮ ತೀರ್ಮಾನಕ್ಕೆ ವಿರುದ್ಧವಾಗಿ ತೀರ್ಮಾನ ಮಾಡಿತು ಎಂದು ಹೇಳಿ ಸಂಜೀವ ರೆಡ್ಡಿಯವರು ಆಂಧ್ರದಲ್ಲಿ ರಾಜೀನಾಮೆ ಕೊಟ್ಟು ಡೆಲ್ಲಿಗೆ ಹೋಗಿ ಮಂತ್ರಿಗಳಾದರು, ಅದೇ ರೀತಿ ನೀವೂ ರಾಜೀನಾಮೆ ಕೊಟ್ಟು ಶ್ರೀಮಾನ್ ಜತ್ತಿಯವರು ಮತ್ತು ನಿಜಲಿಂಗಪ್ಪನವರು ನಿಮಗೆ ಅಲ್ಲಿ ಯಾವುದಾದರೂ ಒಂದು ಸ್ಥಾನ ಕೊಡುವಂತೆ ಶಿಫಾರಸು ಮಾಡಿ ಏಕೆ ಕಳುಹಿಸಬಾರದು ಎಂದು ಅವರಲ್ಲಿ ಬಹಳ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

At the cost of the State Exchequer, I appeal to the Government to pay him Rs. 3,000 and send him. Let him go round the globe. Let him enjoy. Let him do whatever he wants. I request the State Government to see that no further complications are created. That is my sincere feeling.

ಇದನ್ನು ಏಕೆ ಹೇಳುತ್ತೇನೆ ಎಂದರೆ ಇದು ರಾಜ್ಯಕ್ಕೆ ಕುತ್ತು, ಈ ಕುತ್ತನ್ನು ಪರಿಹಾರ ಮಾಡಬೇಕು. ಈ ಬೆಂಗಳೂರು ವಿಶ್ವವಿದ್ಯಾನಿಲಯ ಫೆಡರಲ್ ಯೂನಿವರ್ಸಿಟಿ ಅಲ್ಲ, ಇದು ಪೊಲಿಟಿಕಲ್‌ ಯೂನಿವರ್ಸಿಟಿ. Sri Hegde said that this was a compromise between democracy and autocracy. I request him to write a book on compromise between democracy and autocracy. His speech was simply over flowing with honey. ಏನಾದರೂ ಅವರು ಹೇಳಿದ್ದರಲ್ಲಿ ಅರ್ಥ ಇತ್ತೇ? ಈ ಸೆರ್ಕಲ್ ಬಹಳ ಚೆನ್ನಾಗಿದೆ, ಆ ಸೆಕ್ಷನ್‌ ಬಹಳ ಚೆನ್ನಾಗಿದೆ, ಆ ಕ್ಲಾಜ್ ಬಹಳ ಚೆನ್ನಾಗಿದೆ, ಈ ಕ್ಲಾಜ್ ಬಹಳ ಚೆನ್ನಾಗಿವೆ, ಎಂದು ಹೇಳಿದರು ಯಾರು ಬೇಕಾದರೂ ಹೇಳುತ್ತಾರೆ. ನಮ್ಮಲ್ಲಿ ಒಬ್ಬರು ವಕೀಲರು ಇದ್ದರು. ಎಲ್ಲಾ ಕೇಸುಗಳನ್ನೂ ತೆಗೆದುಕೊಳ್ಳುತ್ತಾ ಇದ್ದರು, ಕಕ್ಷಿಗಾರರ ಮುಂದೆ ಮೇಜು ಗುದ್ದಿ ವಾದ ಮಾಡುತ್ತಾ ಇದ್ದರು. ಮ್ಯಾಜಿಸ್ಟ್ರೇಟರ ಮುಂದೆ ಕೇಸು ಯಾವುದಾದರೂ ರೀತಿಯಲ್ಲಿ ತೀರ್ಮಾನವಾಗಲಿ, ಆ ರೀತಿ ನಮ್ಮ ಸ್ನೇಹಿತರ ವಾದ ಇತ್ತು. ಏನು ಅಪ್ರಾಯಮಾನವಾಗಿ ಮಾತನಾಡಿದರು; ಅವರು ಹೇಳಿದ್ದರಲ್ಲಿ ಏನಾದರೂ ತಿರುಳಿತ್ತೇ ಎಂದು ಕೇಳುತ್ತೇನೆ. ಅಧ್ಯಕ್ಷಸ್ಥಾನದಿಂದ ತಾವು ಡೆಮಾಕ್ರೆಟಿಕ್ ಸಿಸ್ಟಂ ಫಂಕ್ಷನ್‌ ಮಾಡಬೇಕಾದರೆ there must be criticism ಎಂದು ಹೇಳಿದರು. ಅದನ್ನು ಬಿಟ್ಟು ಅವರು ಮಾಡಿದ್ದೇ ಸರಿ, ಎವರು ಎರಡು ಕೊಂಬಲ್ಲ ನಾಲ್ಕು ಕೊಂಬು ಎಂದರೆ ಎರಡು ಕೊಂಬಲ್ಲ ನಾಲ್ಕು ಕೊಂಬು ಎಂದು ಹೇಳಿಕೊಂಡು ಒಂದು ತಲೆ ಅಲ್ಲ ಶತಕಂಠ ರಾವಣ ಎಂದು ಹೇಳಬೇಕೆಂದರೆ ಆ ರೀತಿ ಹೇಳಬೇಕು. University is a temple of education. It is a seat of so many things.

ನಿಜವಾಗಿಯೂ ಸ್ವಾಮಿ, ಈ ಸೀಟ್‌ ಆಫ್‌ ಎಜ್ಯುಕೇಷನ್‌, ಟೆಂಪಲ್‌ ಆಫ್‌ ಎಜ್ಯುಕೇಷನ್‌, ಸೀಟ್‌ ಆಫ್‌ ಕಲ್ಚರ್‌ ಎಂಥವರ ಕೈಯಲ್ಲಿ ಇರಬೇಕು? A man unbiased ಯಾವುದಕ್ಕೂ ಅಂಟದೇ ಇರತಕ್ಕವನು, ತನಗೆ ಎಲ್ಲವೂ ಒಂದೇ ಎನ್ನತಕ್ಕವನು ಅಂತಹವನ ಕೈಯಲ್ಲಿ ಇರಬೇಕು. ಅದನ್ನು ಬಿಟ್ಟು ಇದ ಕರ್ನಾಟಕ ಯೂನಿವರ್ಸಿಟಿ, ಇದು ಮೈಸೂರು ಯೂನಿವರ್ಸಿಟಿ, ಕರ್ನಾಟಕ ಭಾಗದಿಂದ ಬಂದವನು, ಮೈಸೂರು ಭಾಗದಿಂದ ಬಂದವನು, ಈ ಜಾತಿಗೆ ಸೇರಿದವನು, ಆ ಜಾತಿಗೆ ಸೇರಿದವನು ಎಂದು ಹೇಳತಕ್ಕವರ ಕೈಯಲ್ಲಿ ಕೊಟ್ಟರೆ ಏನಾಗುತ್ತದೆ ಎಂಬುದನ್ನು ತಾವೇ ಅರ್ಥ ಮಾಡಿಕೊಳ್ಳಬೇಕು, ಈ ಮಾನ್ಯ ಸಭೆಯ ಸದಸ್ಯರೆಲ್ಲರೂ ಯೋಚನೆ ಮಾಡಬೇಕು. ಈ ಬಿಲ್ಲು ಈಗ ಪಾಸ್‌ ಆಗಿ ಹೊಸ ವಿಶ್ವವಿದ್ಯಾನಿಲಯ ಅಸ್ತಿತ್ವಕ್ಕೆ ಬರುವುದು ಅವಶ್ಯಕವೇ ಎಂಬುದನ್ನು ತಾವೆಲ್ಲರೂ ಯೋಚನೆ ಮಾಡಬೇಕು.

ಸ್ವಾಮಿ, ಇವತ್ತು ಪ್ರಶ್ನೋತ್ತರಗಳ ಕಾಲದಲ್ಲಿ 105ನೆಯ ನಂಬರಿನ ಪ್ರಶ್ನೆಗೆ ಉತ್ತರ ಕೊಡುವಾಗ ಎರಡನೆಯ ಯೋಜನೆಯಲ್ಲಿ ಮಾಡಬೇಕಾಗಿದ್ದ ಕೆಲಸಗಳು ಯಾವುವು ಉಳಿದಿವೆ ಅವು ಮೂರನೆಯ ಯೋಜನೆಗೆ ಸ್ಪಿಲ್‌-ಓವರ್‌ ಆಗಿವೆ ಎಂದು ಮುಖ್ಯ ಮಂತ್ರಿಗಳು ಹೇಳಿದರು. ಪ್ಲಾನಿನಲ್ಲಿರುವ ಕೆಲಸಗಳಿಗೆ ಖರ್ಚು ಮಾಡಲು ಹಣವಿಲ್ಲದಿರುವಾಗ, ಮಾಧ್ಯಮಿಕ ಮತ್ತು ಸೆಕೆಂಡರಿ ಶಾಲೆಗಳ ವಿದ್ಯಾಭ್ಯಾಸವನ್ನು ಸರಿಯಾದ ರೀತಿಯಲ್ಲಿ ನಡೆಸಲು ಶಕ್ತಿಯಿಲ್ಲದಿರುವಾಗ ರಿಸರ್ಚ್ ನಡೆಸುವುದಕ್ಕೆ ಒಂದು ಯೂನಿವರ್ಸಿಟಿ ಮಾಡಬೇಕೆಂದು ಹೇಳುವುದು ಅರ್ಥವಿಲ್ಲದ ಮಾತು.

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಇದನ್ನು ಸರ್ಕಾರ ಯೋಚನೆ ಮಾಡಬೇಕು. ಶಾಲಾ ಕಟ್ಟಡ ಕಟ್ಟುವುದಕ್ಕೆ 3 ಸಾವಿರ ರೂಪಾಯಿಗಳು ಬೇಕೆಂದರೆ ಕೊಡಲು ಶಕ್ತಿಯಿಲ್ಲದಿರುವ ಸರ್ಕಾರ 20 ಲಕ್ಷ ರೂಪಾಯಿಗಳಲ್ಲಿ ರಾಜ್ಯಪಾಲರಿಗಾಗಿ ಭವನವನ್ನು ಕಟ್ಟುವುದಂತೆ. ರಾಜ್ಯ ಬಡತನದ ಬೇಗೆಯಲ್ಲಿ ಬಳಲುತ್ತಿರುವಾಗ ರಾಜ್ಯಪಾಲರ ವಾಸಕ್ಕಾಗಿ 20 ಲಕ್ಷ ರೂಪಾಯಿಗಳನ್ನು ಖರ್ಚುಮಾಡುವುದು ಯೋಗ್ಯವಲ್ಲ. ನೆಹರೂರವರ ಮನೆಗೆ ರೈತರು ಹೋದಾಗ ತಮ್ಮ ಸರಳ ಜೀವನವನ್ನು ತೋರಿಸಲು ರೈತರನ್ನು ಅಡಿಗೆಮನೆ, ಡ್ರಾಯಿಂಗ್ ರೂಂ ಮುಂತಾದ ಕಡೆಗಳಿಗೆ ಕರೆದುಕೊಂಡು ಹೋಗಿ ತೋರಿಸುತ್ತಿದ್ದರಂತೆ ಎಂದು ಕಾಶೀಮಠ್ ರವರು ಹೇಳಿದರು. ಶ್ರೀಮಾನ್ ಜತ್ತಿಯವರು ಮುಖ್ಯಮಂತ್ರಿಗಳಾಗಿದ್ದಾಗ ಮತ್ತು ಈಗ ಹಣಕಾಸಿನ ಸಚಿವರಾಗಿರುವಾಗ ವಾಸಮಾಡುವ ರೀತಿ ನೀತಿಯನ್ನು ನೋಡಬಹುದು. ಇದೆಲ್ಲಾ ನೋಡಿದರೆ ಈ ದಿವಸ 20 ಲಕ್ಷ ಖರ್ಚುಮಾಡಲು ಮನಸ್ಸು ಹೇಗೆ ಬರುತ್ತದೆ? ಯಾವುದಕ್ಕೆ ರಾಜ್ಯದಲ್ಲಿ ಪ್ರಾಶಸ್ತ್ಯ ಕೊಡಬೇಕೆಂಬುದನ್ನು ಆಲೋಚನೆ ಮಾಡಬೇಡವೆ? ಹಾಗೆ ಮಾಡದೆ ಮುಂದುವರೆಯುತ್ತಿರುವುದು ಸಮಾಜಕ್ಕೆ ದ್ರೋಹವೆಸಗಿದಂತೆ. ಈ ದಿವಸ ಹಣಕಾಸಿನ ಸಚಿವರು ವಿದ್ಯಾಮಂತ್ರಿಗಳ ಪರವಾಗಿಲ್ಲದಿದ್ದರೆ, ಹಣ ಕೊಡುವುದಕ್ಕಾಗುವುದಿಲ್ಲ ಎಂದು ಅವರು ಕ್ವೈರಿ ಹಾಕಬಹುದು. ಅಂಥವರೇ ಬುದ್ಧಿಶೂನ್ಯರಾದರೆ ಏನು ಮಾಡಬೇಕು? ಏನು ಹೇಳಿದರೂ ಕೇಳುವುದಿಲ್ಲ. ನಾಯಿ ಬಾಲ ಡೊಂಕೆಂದು ಕಟ್ಟಿ ಮತ್ತೆ ಬಿಚ್ಚಿದರೆ ಯಥಾಪ್ರಕಾರ ಡೊಂಕೇ. ಸರ್ಕಾರ ಇಂಥ ಶಾಸನ ಮಾಡಿದೆ. (The Hon'ble Education Minisetr was entering the House).

Sri C. J. MUCKANNAPPA.—Here comes the devil.

Sri S. R. KANTHI.—The devil is speaking.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇನ್ನೊಂದು ವಿದ್ಯಾರ್ಥಿಗಳ ವಿಚಾರದಲ್ಲಿ ಡಿಸ್‌ಕ್ರಿಮಿನೇಟ್ ಮಾಡುವುದು. 25 ಸಾವಿರ ವಿದ್ಯಾರ್ಥಿಗಳಿದ್ದರೆ ಒಂದು ಸಾವಿರ ಮಂದಿಯನ್ನು ರಿಸರ್ಚ್ ತೆಗೆದುಕೊಳ್ಳಬಹುದು ಎಂದು ಅಣ್ಣಾರಾಯರು ಹೇಳಿದರು. ಉಳಿದವರ ಗತಿಯೇನು? ಫೆಡರಲ್ ಯೂನಿವರ್ಸಿಟಿಯಲ್ಲಿ ಓದಿದವರು ಮಾತ್ರ ಬುದ್ಧಿವಂತರಾದರೆ ಮೈಸೂರು ಮತ್ತು ಕರ್ಣಾಟಕ ವಿಶ್ವವಿದ್ಯಾನಿಲಯಗಳ ವಿದ್ಯಾರ್ಥಿಗಳಿಗೆ ರಿಸರ್ಚಿಗೆ ಅವಕಾಶವಿಲ್ಲದಿದ್ದರೆ ಅವರೆಲ್ಲರೂ ದಡ್ಡರಾಗೇ ಇರಬೇಕೇ? ಬೆಂಗಳೂರಿನಲ್ಲಿರುವವರಿಗೆ ಮಾತ್ರ ಸೌಲತ್ತು ಸಿಕ್ಕಬೇಕು, ಉಳಿದವರಿಗೆ ಸಿಕ್ಕಬಾರದು ಎಂಬುದು ಸರ್ಕಾರದ ಅಭಿಪ್ರಾಯವೇ? ನೀವು ಡಿಸ್‌ಕ್ರಿಮಿನೇಟ್ ಮಾಡುತ್ತಿದ್ದೀರಿ. ವಿದ್ಯಾರ್ಥಿಗಳು, ಕಾಲೇಜುಗಳು ಮತ್ತು ಯೂನಿವರ್ಸಿಟಿ ಮುಂತಾದ ವಿಚಾರಗಳಲ್ಲಿ ತಾರತಮ್ಯ ತೋರಿಸುತ್ತಿದ್ದೀರಿ. ಹೀಗೆಮಾಡುವುದು ನಿಮ್ಮ ಬುದ್ಧಿ ಮೊಟಕಾಗಿದೆಯೆಂಬುದನ್ನು ತೋರಿಸುತ್ತದೆ. ನಿಧಾನವಾಗಿ ಸಂಗಾತಿಗಳೊಡನೆ ಆಲೋಚನೆ ಮಾಡಿ ಕೆಲಸಮಾಡಬೇಕು. ಅಣ್ಣಾರಾಯರೂ ಸಹ ದೇಶಕ್ಕೆ ಅನ್ಯಾಯ ಮಾಡಿದ್ದಾರೆ. ಆದರೆ ಅವರು ಈ ರೀತಿಯಾಗಿ ಆತುರವಾಗಿ ಯಾವ ಕೆಲಸಕ್ಕೂ ಕೈಹಾಕಿಲ್ಲ. ಒತ್ತಾಯ ಶಿಕ್ಷಣವನ್ನು ಜಾರಿಗೆ ತರಬಾರದೆಂದು ಹೇಳಿದಾಗ ಪರವಾಗಿಲ್ಲ, ಮ್ಯಾಜಿಕ್ ವ್ಯಾಂಡಿನಿಂದ ಎಲ್ಲವನ್ನೂ ಸಂಪಾದಿಸುತ್ತೇವೆಂದು ಹೇಳಿದರು. ಆದರೆ ಅವರ ವ್ಯಾಂಡು ತುಂಡಾಯಿತು. ಈಗ ಅವರನ್ನು ಕಾಂಗ್ರೆಸ್ಸಿನಿಂದ ತೆಗೆಯಲು ನೋಟೀಸ್ ಕೊಟ್ಟಿದ್ದಾರೆ ಎಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ಈ ಸಂದರ್ಭದಲ್ಲಿ ಸ್ವಲ್ಪ ತಡೆಯಿರಿ, 1967 ರವರೆಗೂ ಅವಕಾಶವಿದೆ, ಇನ್ನೂ ಅವರಿಗೆ 3 ವರ್ಷಗಳ ಕಾಲಾವಕಾಶವಿದೆ. ಮುಂದೆ ಯಾವಾಗಲಾದರೂ ಮಾಡಿ, ಈಗತಾನೆ ನೆಹರೂರವರು ಅಮರರಾಗಿದ್ದಾರೆ, ಹಣಕಾಸಿನ ಪರಿಸ್ಥಿತಿ ಸರಿಯಾಗಿಲ್ಲ. ಆದುದರಿಂದ ಈ ವಿಧೇಯಕವನ್ನು ಪಾಸುಮಾಡುವುದಕ್ಕೆ ಆತುರಪಡಬಾರದು ಎಂದು ಹೇಳುತ್ತೇನೆ.

ಸ್ವಾಮಿ, ಈ ಯೂನಿವರ್ಸಿಟಿ ಅಟಾನಮಸ್ ಬಾಡಿ, ಇದರ ಮೇಲೆ ನಮ್ಮ ಕೈವಾಡವಿಲ್ಲ ಎಂದು ಹೇಳುತ್ತೀರಿ. 8ನೆಯ ಕ್ಲಾಜನ್ನು ಓದಿ, ಅದರ ಪ್ರಕಾರ ನೀವು ಏನು ಬೇಕಾದರೂ ಮಾಡಬಹುದು. ಸಿಂಡಿಕೇಟ್, ಅಕೆಡಮಿಕ್ ಕೌನ್ಸಿಲ್, ಯೂನಿವರ್ಸಿಟಿ ಮಾಡಿರುವುದನ್ನು ಏನು ಬೇಕಾದರೂ ಮಾಡಿ ತಲೆಕೆಳಕು ಮಾಡಬಹುದು. 20 ಸಾವಿರ ರೂಪಾಯಿಗಳನ್ನು ಕೊಟ್ಟವರನ್ನು ಮೆಂಬರು ಮಾಡಿ ಇನ್‌ಸೆಂಟಿವ್ ಕೊಡುವುದಕ್ಕೋಸ್ಕರ ಅವರನ್ನು ಗೌರವ ಸದಸ್ಯರೆಂದು ಕರೆಯಬೇಕೆಂದು ಶ್ರೀ ಕೃಷ್ಣ ಅವರು ಹೇಳಿದರು. ಬೆಂಗಳೂರು ಯೂನಿವರ್ಸಿಟಿಯ ಸೆನೇಟ್ ಸದಸ್ಯರ ಸಂಖ್ಯೆ ಎಷ್ಟೆಂದು ಎಲ್ಲಾದರೂ ಹೇಳಿದ್ದೀರಾ? ಎಲ್ಲೂ ಇಲ್ಲ. ಡೋನರ್ಸ್‌ಗೆ ಫಸ್ಟ್ ರ್ಯಾಂಕು ಸೆಕೆಂಡ್ ರ್ಯಾಂಕು ಎಂದು ರ್ಯಾಂಕುಗಳನ್ನು ಬೇರೆ ಮಾಡಿದ್ದೀರಿ. ಸೆನೇಟ್ ಸದಸ್ಯರಿಗೆ ರ್ಯಾಂಕ್ ಇದೆ. 50 ಸಾವಿರ ರೂಪಾಯಿ ಕೊಡುವವರಿಗೆ ನಾಲ್ಕನೆಯ ರ್ಯಾಂಕ್. ನೂರು ಜನ ಒಂದು ಲಕ್ಷ ರೂಪಾಯಿಗಳನ್ನು ಕೊಟ್ಟು ಸೆನೇಟ್ ಸದಸ್ಯರಾಗಬಹುದು. ಹಾಗಾದರೆ ಸೆನೇಟ್ ದೊಡ್ಡ ದೊಡ್ಡಿಯಾಗುತ್ತದೆ.

ಸೆನೇಟ್ ರಚನೆ, ವೈಸ್‌ಛಾನ್ಸಲರ ನೇಮಕ ಮತ್ತು ರಾಜ್ಯಪಾಲರು ಛಾನ್ಸಲರಾಗುವುದು ಈ ಮೂರು ವಿಷಯಗಳೂ ಬಹಳ ಅರ್ಥಗರ್ಭಿತವಾಗಿವೆ.

ಶ್ರೀ ವೆಂಕಟೇಶ್ವರ ಯೂನಿವರ್ಸಿಟಿಯಲ್ಲಿ ಆ ರಾಜ್ಯದ ಮುಖ್ಯ ನ್ಯಾಯಾಧೀಶರನ್ನು ಚಾನ್ಸಲರಾಗಿ ನೇಮಕ ಮಾಡಬಹುದು ಮತ್ತು ಅಲ್ಲಿ ಕೆಲಸ ಚೆನ್ನಾಗಿ ನಡೆಯುತ್ತಿದೆ. ಕರ್ನಾಟಕದ ಯೂನಿವರ್ಸಿಟಿಯಲ್ಲಿ ಎಲೆಕ್ಟೆಡ್ ವೈಸ್-ಚಾನ್ಸಲರು ಎಂದಿರಬಹುದು ಮತ್ತು ಅಲ್ಲಿನ ವ್ಯವಹಾರ ನಡೆಸಬಹುದು, ಆದರೆ ಇಲ್ಲಿ ತಾವೇನು ಹೇಳುತ್ತಿದ್ದೀರಿ ಎಂದರೆ ತಮ್ಮ ವಿಶ್ವವಿದ್ಯಾನಿಲಯದಲ್ಲಿ ಎಲ್ಲ ಬರೀ ಅಡಜಿಡಗಿಯಾಗಿವೆ, ಈ ಕಡೆ ಪ್ರಜಾಪ್ರಭುತ್ವವೂ ಇಲ್ಲ, ಅ ಕಡೆ ಡಿಕ್ಟೇಟರುಶಿಪ್ಪೂ ಇಲ್ಲ. ಸಿಂಡಿಕೇಟಿನವರು ಒಂದು ಕಮಿಟಿ ಮಾಡುತ್ತಾರಂತೆ. ಆ ಕಮಿಟಿಗೆ ಚಾನ್ಸಲರು ಒಬ್ಬರನ್ನ ಸೂಚಿಸುತ್ತಾರೆ ಮತ್ತು ಸಿಂಡಿಕೇಟಿನವರು ಎರಡು ಹೆಸರುಗಳನ್ನು ಸೂಚಿಸುತ್ತಾರೆ. ಇಂತಹ ಮೂವರಿಂದ ಕೂಡಿದ ಆ ಸಮಿತಿಯು ಸೂಚಿಸತಕ್ಕ ಹೆಸರುಗಳಲ್ಲಿ ಒಬ್ಬರನ್ನು ಛಾನ್ಸಲರ್ ನೋಡಿ ನಿರ್ಧಾರ ಮಾಡಬೇಕು. ಆದರೆ ಒಬ್ಬರ ಹೆಸರನ್ನು ಸೂಚಿಸಿದ ಮೇಲೆ ಅವರು ಸರಿಯಾಗಿಲ್ಲ ಎಂಬ ನೆಪದ ಮೇಲೆ ಅವರನ್ನು ವಾಪಸು ಕಳುಹಿಸುವುದಿಲ್ಲ ಎನ್ನುವುದಕ್ಕೇನು ಭರವಸೆ ಇದೆ? ಇದರಲ್ಲಿ ಯಾವ ಆಶ್ವಾಸನೆಯನ್ನೂ ಕೊಟ್ಟಿಲ್ಲ. ಶ್ರೀಮಾನ್ ಅಣ್ಣಾರಾಯರು ಹೇಳಿದ ಹಾಗೆ ಯೂನಿವರ್ಸಿಟಿಗೆ ವೈಸ್-ಚಾನ್ಸಲರು ಇಲ್ಲ ಎಂದೋ ಅಥವಾ ಚಾನ್ಸಲರು ಆಯ್ಕೆ ಮಾಡಿ ಕಳುಹಿಸಿದ ವ್ಯಕ್ತಿ ಸರಿಯಾಗಿಲ್ಲ ಎಂದೋ ಗದ್ದಲವುಂಟುಮಾಡಬಹುದು. ಆದುದರಿಂದ ವೈಸ್-ಚಾನ್ಸಲರನ್ನು ಡೆಮಾಕ್ರೆಟಿಕ್ ಪ್ರೋಸೆಸಿನ ಮೇರೆಗೆ ಎಲೆಕ್ಟ್ ಮಾಡುವಂತೆ ಇದರಲ್ಲಿ ವಿಧಾಯಕ ಮಾಡುವುದು ಒಳ್ಳೆಯದು. ನಮ್ಮ ಸರ್ಕಾರದವರೇನೋ ಮೆಜಾರಿಟಿಯಲ್ಲಿದ್ದೇವೆ ಮೈನಾರಿಟಿಯವರು ಏನಾದರೂ ಹೇಳಿದರೂ ಹೇಳಿಕೊಳ್ಳಲಿ, ನಾವು ಹೇಗಿದ್ದರೂ ಈ ಕಾನೂನನ್ನು ಪಾಸುಮಾಡುತ್ತೇವೆ ಎಂದು ನಾಳೆ ದಿನ ಈ ಬಿಲ್ಲನ್ನು ಅಧ್ಯಕ್ಷರ ಮೂಲಕ ವೋಟಿಗೆ ಹಾಕಿಕೊಂಡು ಪಾಸುಮಾಡಿಕೊಳ್ಳಬಹುದು.

Mr. SPEAKER.—The member cannot impose on the Chair that I will put the Bill to vote tomorrow. I may put it even today. The member has no right to presume things on behalf of the Chair.

Sri C. J. MUCKANNAPPA.—Suppose the Chair puts this Bill to vote, it will be carried by a majority.

In an elected Assembly an elected Speaker can function well; why not an elected Vice-Chancellor? ಇದರಲ್ಲಿ ಡೆಮಾಕ್ರಟಿಕ್ ಪ್ರಿನ್ಸಿಪಲ್ ಮೇಲೆ ಇಲ್ಲಿ ಎಲೆಕ್ಟೆಡ್ ಸ್ಪೀಕರ್ ಇರುವಂತೆ, ಏಕೆ ಅಲ್ಲಿಯೂ ಎಲೆಕ್ಟ್ ಮಾಡಬಾರದು? ಇದರಲ್ಲಿ ಸರ್ಕಾರದ ಕೊಕ್ಕೆ ಒಂದನ್ನೇಕೆ ಇಟ್ಟುಕೊಂಡಿದ್ದೀರಿ? ಇದನ್ನು ನಾನು ಒಪ್ಪುವುದಿಲ್ಲ. ರಿಟೈರ್ಡ್ ಮಿನಿಸ್ಟರುಗಳು ಹಿಂದೆ ಆಫೀಸಿನಲ್ಲಿ ಇದ್ದಂತಹವರು ಈಗ ಗವರ್ನರುಗಳಾಗಿದ್ದಾರೆ.

Mr. SPEAKER.—Rules do not permit discussion of the conduct of Governors.

Sri C. J. MUCKANNAPPA.—If Governor becomes the Vice-Chancellor, what is it that I have to say?

Mr. SPEAKER.—The member can say that the Governor need not be the Vice-Chancellor.

Sri C. J. MUCKANNAPPA.—Then the Chair will ask for what reasons?

Mr. SPEAKER.—The member need not analyse the political complexions which may or may not exist as he suggests.

Sri C. J. MUCKANNAPPA.—That is my impression.

Mr. SPEAKER.—Because the member is expressing his impression. I am trying to correct him according to the Rules.

Sri C. J. MUCKANNAPPA.—I am not concerned with the correctness or otherwise of it, but I am concerned with relevancy. There are many Governors who were Ministers of this House and they are today Governors. Is it contended that they are not political minded? I am not referring to any particular Governor. I am saying only about 'Governor' as such because this Bill provides that the Governor shall be the Chancellor.

Mr. SPEAKER.—The member may kindly credit me with that much of commonsense. But we are not discussing political complexions in this Bill.

Sri C. J. MUCKANNAPPA.—Because the Congress is now in Power the Congress Governments appoint only such persons who have got political force behind them. That is my contention.

ಅದಕ್ಕೋಸ್ಕರ ವೈಸ್-ಚಾನ್ಸಲರುಗಿರಿಗಾಗಿ ಗವರ್ನರುಗಳನ್ನು ತರುವುದಕ್ಕೇನಾದರೂ ಉದ್ದೇಶ ಇಟ್ಟುಕೊಂಡಿದ್ದಾರೆಯೋ ಎಂದು ಇಲ್ಲಿ ಹೇಳುತ್ತಿದ್ದೇನೆ. ಈ ಬಿಲ್ಲಿನಲ್ಲಿ ಸೆಕ್ಷನ್ನು 8ರಲ್ಲಿರುವ 5 ನೇ ಸಬ್ ಕ್ಲಾಜನ್ನು ಸ್ವಲ್ಪ ಓದಿ ನೋಡಿ.

> "(5) Where the Syndicate does not, within a reasonable time take action to the satisfaction of the Government, the Government may after considering any explanation furnished or representation made by the syndicate, issue such directions as it may think fit and the Syndicate shall be bound to comply with such directions."

ಹೀಗಾದರೆ ಏನು ಇದರ ಅರ್ಥ? ನನಗೇನೂ ಗೊತ್ತಾಗುತ್ತಿಲ್ಲ. ಇದೇನು ಟೋಕಿಯೋ ಅಲಾರಂ ಗಡಿಯಾರವೇ? ಕ್ಲಾಸು 8ನ್ನು ಯಾವ ಉದ್ದೇಶವನ್ನಿಟ್ಟುಕೊಂಡು ತಂದಿದ್ದೀರಿ? ಇದನ್ನು ಫೆಡರಲ್ ಯೂನಿವರ್ಸಿಟಿ ಎಂದು ಕರೆಯುವುದಕ್ಕೆ ಬದಲಾಗಿ ಇದನ್ನು ಗವರ್ನಮೆಂಟು ಯೂನಿವರ್ಸಿಟಿ ಎಂದು ಮಾಡಿಕೊಂಡು ಮಾನ್ಯ ಮಂತ್ರಿಗಳಾದ ಶ್ರೀಮಾನ್ ಕಂಠಿಯವರನ್ನೇ ಚೇರ್ಮನ್ನರಾಗಿ ಮಾಡುವುದೊಳ್ಳೆಯದು ಎಂದು ನನಗೆ ಕಾಣಿಸುತ್ತದೆ. ಕೆಲವರು ಇಲ್ಲಿ ಹೇಳಿದರು ವೈಸ್ ಚಾನ್ಸಲರಿಗೆ ಕೊಟ್ಟಿರುವ ಅಧಿಕಾರಗಳು ಬಹು ಜಾಸ್ತಿಯಾಗಿವೆ ಎಂದು ಹೇಳುವುದಕ್ಕಾಗುವುದಿಲ್ಲ ಎಂದು. ನಾನು ಅದನ್ನೆಲ್ಲ ಇಲ್ಲಿ ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. ಸಿಂಡಿಕೇಟಿಗೆ 50 ಸಾವಿರ, ಒಂದು ಲಕ್ಷ ಇತ್ಯಾದಿ ಡೊನೇಷನ್ನುಗಳನ್ನು ಕೊಟ್ಟವರನ್ನು ಸಿಂಡಿಕೇಟು ಮೆಂಬರಾಗಿ ಮಾಡುವಾಗ ಅವರು ಸಭೆಗೆ ಬಂದಾಗ ಅವರ ಸ್ವರೂಪವನ್ನು ಹಾಳು ಮಾಡುವುದಕ್ಕೆ ಹೋಗಬಾರದು ಎಂದು ನಾನು ಇಲ್ಲಿ ಹೇಳುತ್ತಿದ್ದೇನೆ. ಅದರ ಅವರ ತೈಲ ಚಿತ್ರಗಳನ್ನು ಮಾಡಿಸಿ ಬೇಕಾದರೆ ಯಾರ ಕೈಯಿಂದಾದರೂ ಅನಾವರಣ ಮಾಡಿಸಿ, ಬೇಡವೆನ್ನುವುದಿಲ್ಲ. ಆದರೆ ಅವರು 50 ಸಾವಿರ ಡೊನೇಷನ್ನು ಕೊಟ್ಟರು, ಲಕ್ಷ ರೂಪಾಯಿ ಕೊಟ್ಟರು ಡೊನೇಷನ್ನು ಎಂದು ಅವರನ್ನೆಲ್ಲಾ ಲೈಫ್-ಮೆಂಬರುಗಳಾಗಿ ಮಾಡುವುದಕ್ಕೆ ಹೋಗಬೇಡಿ.

Mr. SPEAKER.—Is it a clause peculiar to this Bill?

Sri C. J. MUCKANNAPPA.—Yes, certainly. On one side they say that this is an autonomous body and that the Government has not business to interfere. At the same time, they want to provide here that the Government shall have the power to interfere by saying that if the Syndicate does not comply with the direction of the Government, the Government shall issue a direction and that the Syndicate shall be bound to implement it. What is the meaning of this, Sir? Is it not directly in conflict with what the Government says?

Mr. SPEAKER.—Sub-clause (5) is consequential to sub-clauses (3) and (4).

Sri C.J. MUCKANNAPPA.—Instead of calling this a Federal University they may say a Government University or a Political University under the Chiarmanship of the Education Minister Sri Kanthi. ಅದಕ್ಕೋಸ್ಕರ ಈಗ ಹಣಕಾಸಿನ ತೊಂದರೆ ಇರುವಾಗ ಸರ್ಕಾರ ಇಂತಹ ಒಂದು ಯೂನಿವರ್ಸಿಟಿಯನ್ನು ಸ್ಥಾಪನೆ ಮಾಡುವುದಕ್ಕೆ ಹೋಗುವುದು ಸರಿಯಾದುದಲ್ಲ. ಆದುದರಿಂದ ಶ್ರೀ ವಾರ್ಡ್ ವೆಂಕಟೇಗೌಡರು ಆಗಲೇ ಹೇಳಿದ ಹಾಗೆ ಇದನ್ನು ಇನ್ನೂ ಸ್ವಲ್ಪ ಕಾಲ ತಡೆದು ಬೇಕಾದರೆ ತೆಗೆದುಕೊಂಡು ಬನ್ನಿ, ಸದ್ಯಕ್ಕೆ ಇದನ್ನು ಷೆಲ್ವ್ ಮಾಡುವುದೊಳ್ಳೆಯದು. ನವಿಲು ಕುಣಿಯುತ್ತಿದೆ ಎಂದು ಕೆಂಬೂತಿ ಕುಣಿದುಕೊಂಡಿತು ಎನ್ನುವ ಹಾಗೆ ಆಗುತ್ತಿದೆ. ಇದರಲ್ಲಿ ಇನ್ನೂ ಅನೇಕ ಲೋಪ ದೋಷಗಳು ಇವೆ. ಆದುದರಿಂದ ಇದರಲ್ಲಿರುವ ಲೋಪದೋಷಗಳನ್ನೆಲ್ಲಾ ಸರಿಮಾಡಿಕೊಂಡು ಮುಂದೆ 1966 ರಲ್ಲೋ ಅಥವಾ 67 ರಲ್ಲೋ ಈ ಬಿಲ್ಲನು ತರಲು ಪ್ರಯತ್ನ ಮಾಡುತ್ತಾರೆಂದು ನಾನು ಆಶಿಸುತ್ತೇನೆ. ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನು ಸಲ್ಲಿಸಿ ನನ್ನ ಈ ನಾಲ್ಕು ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

3-30 P.M.

†**Sri G. DUGGAPPA** (Holalkere).—Mr. Speaker, Sir, I welcome the Bangalore University Bill, 1964. Most of the speakers who have spoken till now have welcomed the Bill for obvious reasons. As we have understood the idea of Federal University, Banagalore is the proper place for it. There are about 27 colleges including the Central College which was established in 1858 and the other very good private colleges and also the Indian Institute of Science. In addition to these institutions, there are so many Laboratories like the Aeronautical Laboratory, Defence Establishment Laboratory, the Centrally sponsored industrial concerns, etc. All these things are there to be made use of for establishing a Federal University. I must congratulate the Education Minister on having made use of all these materials available in Bangalore to establish a Federal University. I welcome it because the main object of the Federal University is to concentrate upon post-graduate and research studies in colleges. It is the entire responsibility of a Federal University, but at the same time, the research work is also undertaken in various constituent Colleges. But the responsibility lies with the University. As other Hon'ble Members have said the Education Minister of late is becoming a very interesting personality for good and just cause. I wholeheartedly congratulate him and welcome the Bill.

Speaking on some of the points regarding the Bill, I must say, Sir, there are some lacuna in it. For example, I may bring to the notice of the Minister in charge of the Bill that the Head of the Deparrment must be defined properly. When we are in a secular State and in 1964, a provision has been included in this Bill wherein it envisages that religious institution may be given in the manner prescribed by ordinance to those who have consented to receive it. This is something which we cannot swallow and I hope the Education Minister will do well to delete this portion of the Section which enables the University to give instruction in religious matters. This is most unthinkable. I hope the Education Minister will agree with me when I say this.

(SRI G. DUGGAPPA)

Another thing is that important officers of the University have been mentioned in Clause 9. But there is an omission of the name of 'Controller of Examinations' who is a very important officer and who is responsible for the control of all University Examinations. I think that should be included in the list of Officers of the University. Then I come to the selection of Vice-Chancellor. The Chancellor of course is the Governor who is the Head of the State. The Vice-Chancellor is to be selected and the Education Minister has well-thought of a *via media* between direct election of the Vice-Chancellor and nomination directly by the Governor. The Syndicate has a say in the matter of selecting two names and the Chancellor has also something to do in the appointment of Vice-Chancellor, and three persons will constitute the Committee, and those persons are not at all connected with the administration of the University. They will think over and recommend a panel of not less than three names out of which the Chancellor will choose one. This is a well-thought out procedure. I do not find any fault with this. My friend just spoke much on that. There is no need to be dreadful about it. It is a well thought of idea.

Coming to admission of constituent colleges, I have got my own apprehensions. Some doubts have already been expressed by some of the Hon'ble Members here as to what would happen to the interest of Mysore students in the matter of admission to various technical colleges if medical colleges, engineering colleges and so many technical colleges which are in Bangalore are taken over by the Bangalore University. There is also this fear that the Education Minister has come out with an assurance that this University would be taken over by the Centre and that in future this would be a Centrally sponsored University. I am sure that the admissions to various constituent Colleges, especially to the technical colleges would be controlled by the Centre in which case I also doubt and fear that it may go against the interests of Mysore students. But anyhow, the Education Minister has come out with an assurance that this would not be so in the case of under-graduate studies. I wish it should be so. Then we have no objection. At this stage, the Government will do well to keep in mind to see that the interests of students especially of Mysore should not be in any way jeopardised. There are so many important features of the Bill to which my hon'ble friends have referred already. I do not want to speak on them for fear of repetition. I only refer to a panel of experts to be suggested by the Board of studies for appointments of professors, readers and lecturers. This is not so in the case of University colleges, but this is also applicable to constituent colleges. The University has a say in the matter of appointment of professors, readers and lecturers even in Constituent colleges because this is the only sure way of making colleges and University responsible for the conduct of research work. Unlike the duplicate establishment of laboratories in other types of universities, here the University is responsible for the establishment of

laboratories for research work and the students are admitted to these laboratories which may be established directly in the university colleges or in the constituent colleges. I welcome this measure and once again congratulate the Hon'ble Minister who has sponsored this good measure of legislation.

Mr. SPEAKER.—Sri R. Muniswamiah may speak.

ಶ್ರೀ ಆರ್. ಮುನಿಸ್ವಾಮಯ್ಯ (ದೇವನಹಳ್ಳಿ).—ಸ್ವಾಮಿ, ವಿದ್ಯಾಮಂತ್ರಿಗಳು ಈ ಸಭೆಯ ಮುಂದೆ ಮಂಡಿಸಿರತಕ್ಕಂಥ ಬೆಂಗಳೂರು ವಿಶ್ವವಿದ್ಯಾನಿಲಯದ ವಿಧೇಯಕವನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ ಮತ್ತು ಸಂಪೂರ್ಣವಾಗಿ ಅದಕ್ಕೆ ನನ್ನ ಬೆಂಬಲವನ್ನು ಕೊಡುತ್ತೇನೆ. ನಾನು ಏತಕ್ಕೆ ಸ್ವಾಗತ ಮಾಡುತ್ತೇನೆಂದರೆ ನಮ್ಮ ಮೈಸೂರು ರಾಜ್ಯವೂ ಭಾರತದಲ್ಲಿ ಬಹಳ ಕಾಲದಿಂದಲೂ ವಿದ್ಯಾಭ್ಯಾಸ ಮತ್ತು ಸಂಸ್ಕೃತಿಯ ವಿಚಾರಗಳಲ್ಲಿ ಬಹಳ ಮಟ್ಟಿಗೆ ಮುಂದುವರಿದುದಾಗಿದೆ. ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಮೊದಲಿಗಿಂತಲೂ ಈಗ ಬಹಳ ಜಾಸ್ತಿಯಾಗುತ್ತಿದೆ. ಅಲ್ಲದೆ ವಿದ್ಯಾರ್ಥಿಗಳ ಸಂಖ್ಯೆ ಪ್ರಾಥಮಿಕ ಪಾಠಶಾಲೆಗಳಲ್ಲಿಯೂ, ಮಾಧ್ಯಮಿಕ ಪಾಠಶಾಲೆಗಳಲ್ಲಿಯೂ, ಪ್ರೌಢ ಶಾಲೆಗಳಲ್ಲಿಯೂ ಬಹಳವಾಗಿ ಹೆಚ್ಚುತ್ತಿದೆ. ನಮ್ಮ ದೇಶದಲ್ಲಿ ಸ್ಥಾಪಿತವಾಗಿರತಕ್ಕ ಒಂದೇ ಒಂದು ವಿಶ್ವವಿದ್ಯಾನಿಲಯವೆಂದರೆ ಮೈಸೂರು ವಿಶ್ವವಿದ್ಯಾನಿಲಯ. ಅದು ಹಳೆಯ ಮೈಸೂರಿನ ಎಲ್ಲಾ ಭಾಗದ ವಿದ್ಯಾರ್ಥಿಗಳಿಗೆ ವ್ಯಾಸಂಗಕ್ಕೆ ಅನುಕೂಲ ಮಾಡುತ್ತಿತ್ತು. ವಿದ್ಯಾರ್ಥಿಗಳ ಸಂಖ್ಯೆ ಈ ರೀತಿ ವಿಸ್ತಾರವಾಗಿ ಬೆಳೆದು ಬಹಳ ದಕ್ಷತೆಯಿಂದ ವಿದ್ಯಾರ್ಥಿಗಳಿಗೆ ಶಿಕ್ಷಣ ಸಿಕ್ಕದೆ ಹೋದುದರಿಂದ ವಿದ್ಯಾರ್ಥಿಗಳು ಶಿಸ್ತು ಕಾಪಾಡಿಕೊಳ್ಳದಿರತಕ್ಕಂಥ ಪರಿಸ್ಥಿತಿ ಬಂತು. ಅಲ್ಲದೆ, ಉಪಾಧ್ಯಾಯರ ಸ್ಥಿತಿಗತಿಗಳನ್ನೂ ಸರ್ಕಾರ ಹಾಗೂ ವಿಶ್ವವಿದ್ಯಾನಿಲಯ ಸರಿಯಾಗಿ ನೋಡಿಕೊಳ್ಳದೆ ಹೋಗುವ ಪರಿಸ್ಥಿತಿ ಬಂತು. ಒಂದು ರೀತಿ ಕಳವಳ ವ್ಯಕ್ತಪಡಿಸುವ ಸ್ಥಿತಿ ಬಂದೊದಗಿತು. ಅನಂತರ ಉತ್ತರ ಕರ್ಣಾಟಕ ಮತ್ತು ಹಳೆಯ ಮೈಸೂರು ಭಾಗಗಳು ಸೇರಿದ ಮೇಲೆ ಇಲ್ಲಿ ಎರಡು ವಿಶ್ವವಿದ್ಯಾನಿಲಯಗಳಾದುವು. ಆದಾಗ್ಯೂ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುತ್ತಿರುವ ಈಗಿನ ಕಾಲದಲ್ಲಿ ಈ ಮೂರನೆಯ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಬೇಕಾದಿರುವುದು ಎಲ್ಲರಿಗೂ ಸಂತೋಷ ಉಂಟುಮಾಡತಕ್ಕ ಸಂಗತಿಯಾಗಿದೆ. ಕೆಲವು ಸದಸ್ಯರುಗಳು ಇದನ್ನು ಈಗ ತರಲು ತಕ್ಕ ಸಮಯವಲ್ಲವೆಂಬುದಾಗಿ ಹೇಳಿದರು. ವಿದ್ಯಾಭ್ಯಾಸದ ಬಗ್ಗೆ ಹೆಚ್ಚು ಹೆಚ್ಚು ಸೌಲಭ್ಯಗಳನ್ನು ಒದಗಿಸಬೇಕಾಗಿರತಕ್ಕ ಈ ಕಾಲದಲ್ಲಿ ನಿಧಾನಮಾಡುವುದು ಸರಿಯಲ್ಲವೆಂದು ನಾನು ಒತ್ತಾಯದಿಂದ ಹೇಳುತ್ತೇನೆ. ಮೈಸೂರು ವಿಶ್ವವಿದ್ಯಾನಿಲಯದಲ್ಲಿರುವ ಸುಮಾರು 50 ಸಾವಿರ ವಿದ್ಯಾರ್ಥಿಗಳ ಪೈಕಿ ಅರ್ಧ ಭಾಗದಷ್ಟು ಜನ ಬೆಂಗಳೂರು ವಿಶ್ವವಿದ್ಯಾನಿಲಯ ಸ್ಥಾಪಿತವಾದಮೇಲೆ ಅಲ್ಲಿ ಸೇರಿ ಹೋಗುತ್ತಾರೆಂಬುದಾಗಿ ವಿದ್ಯಾಮಂತ್ರಿಗಳೇ ಲೆಕ್ಕ ಕೊಟ್ಟಿದ್ದಾರೆ. ಹೀಗೆ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾದಮೇಲೆ ವಿದ್ಯಾರ್ಥಿಗಳ ಶಿಕ್ಷಣವನ್ನು ದಕ್ಷತೆಯನ್ನು, ಮತ್ತು ಶಿಸ್ತನ್ನು ಬಹಳ ಎಚ್ಚರಿಕೆಯಿಂದ ನೋಡಿಕೊಳ್ಳಲು ಸಾಧ್ಯವಾಗುತ್ತದೆ. ಆಗ ಅದು ಬಹಳ ಕಾಂಪ್ಯಾಕ್ಟಾಗಿರುತ್ತದೆ ಮತ್ತು ಸುವ್ಯವಸ್ಥಿತವಾಗಿರುತ್ತದೆ. ಆದ್ದರಿಂದ ಈಗ ಈ ವಿಶ್ವವಿದ್ಯಾನಿಲಯ ಸ್ಥಾಪಿತವಾಗುವುದು ಒಳ್ಳೆಯದು ಎಂಬುದಾಗಿ ನಾನು ಹೇಳುತ್ತೇನೆ. ಯೂನಿವರ್ಸಿಟಿ ಗ್ರಾಂಟು ಕಮಿಷನ್ನಿನವರು ನೇಮಕ ಮಾಡಿದಂಥ ಒಂದು ಸಮಿತಿಯವರೂ ಹಾಗೂ ರಾಜ್ಯ ಸರ್ಕಾರದ ಮೂಲಕ ನೇಮಿತವಾದಂಥ ಒಂದು ಸಮಿತಿಯವರೂ ಇಂತಹ ವಿಶ್ವವಿದ್ಯಾನಿಲಯವನ್ನು ಎಲ್ಲಿ ಸ್ಥಾಪಿಸಬೇಕೆಂಬ ಬಗ್ಗೆ ಪರಿಶೀಲನೆಮಾಡಿ ಈ ವಿಶ್ವವಿದ್ಯಾನಿಲಯವನ್ನು ಬೆಂಗಳೂರಿನಲ್ಲಿಯೇ ಸ್ಥಾಪಿಸುವುದು ಸೂಕ್ತ ಎಂಬ ಅಭಿಪ್ರಾಯಕ್ಕೆ ಬಂದಿರುವುದು ಯೋಗ್ಯವಾಗಿದೆ. ಇದುವರೆಗೂ ಮಾತನಾಡಿದಂಥ ನನ್ನ ಸ್ನೇಹಿತರೆಲ್ಲರೂ ಬೆಂಗಳೂರು ವಿಶ್ವವಿದ್ಯಾನಿಲಯ ರಚನೆ ಮಾಡುವುದು ಒಳ್ಳೆಯದು, ಸೂಕ್ತವೆಂಬುದಾಗಿ ತಮ್ಮ ಒಪ್ಪಿಗೆಯನ್ನು ಕೊಟ್ಟು ಬಹಳ ಚೆನ್ನಾಗಿ ಹೇಳಿದ್ದಾರೆ. ಹಿಂದೆ ಬೆಂಗಳೂರಿನಲ್ಲಿ ಒಂದಾನೊಂದು ಕಾಲದಲ್ಲಿ ಸುಮಾರು 3 ಲಕ್ಷ ಜನ ಸಂಖ್ಯೆ ಇದ್ದುದು ಈಗ ಬಹಳ ವೇಗವಾಗಿ ಸುಮಾರು 14 ಲಕ್ಷ ಜನ ಸಂಖ್ಯೆಯುಳ್ಳ ಒಂದು ದೊಡ್ಡ ಪಟ್ಟಣವಾಗಿದೆ. ಇಂತಹ ದೊಡ್ಡ ಪಟ್ಟಣದಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಬಹಳ ವಿಸ್ತಾರವಾಗಿ ಬೆಳೆಯುವುದೇನೋ ಸ್ವಾಭಾವಿಕ. ಈಗ ಮೂರನೆಯ ಪಂಚವಾರ್ಷಿಕ ಯೋಜನೆ ಮುಗಿಯುವುದರೊಳಗೆಯೇ ಈ ಬೆಂಗಳೂರು ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿ ಇಲ್ಲಿ ಬರತಕ್ಕ ಎಲ್ಲಾ ವಿದ್ಯಾರ್ಥಿಗಳಿಗೂ ವಿದ್ಯಾಭ್ಯಾಸಕ್ಕಾಗಿ ಅವಕಾಶವನ್ನು ಕಲ್ಪಿಸಿಕೊಡುವುದು ನಮ್ಮೆಲ್ಲರ ಕರ್ತವ್ಯ. ಅದಕ್ಕೋಸ್ಕರವಾಗಿ ನಾವೆಲ್ಲರೂ ಈ ವಿಧೇಯಕವನ್ನು ಸಂಪೂರ್ಣವಾಗಿ ಸ್ವಾಗತಿಸಬೇಕು ಮತ್ತು ಸಂಪೂರ್ಣವಾಗಿ ಬೆಂಬಲವನ್ನು ಕೊಡಬೇಕು ಎಂಬುದಾಗಿ ನಾನು ಮತ್ತೊಂದು ಸಾರಿ ಹೇಳುತ್ತೇನೆ. ಇಲ್ಲಿ ಕಾನ್‌ಸ್ಟಿಟ್ಯೂಯೆಂಟ್ ಕಾಲೇಜುಗಳು ಸುಮಾರು 27 ಇವೆ. ಅಲ್ಲದೆ ಸುಮಾರು 15 ಕೇಂದ್ರದ ಮತ್ತು 6-7 ರಾಜ್ಯದ ಕೈಗಾರಿಕೆಗಳು ಮತ್ತು ಬಹಳ ದೊಡ್ಡ ದೊಡ್ಡ ಕಾರ್ಖಾನೆ

(ಶ್ರೀ ಆರ್. ಮುನಿಸ್ವಾಮಯ್ಯ)

ಗಳು ಸಹ ಇವೆ. ಆದ್ದರಿಂದ ಈ ಕಾಲೇಜಿನಲ್ಲಿ ಪರಿಶೋಧನೆ ಕೆಲಸಗಳು ಮತ್ತು ಸಂಶೋಧನೆಯ
ಕೆಲಸಗಳು ವ್ಯಾಸಂಗಗಳು ಮತ್ತು ಪದವಿಯೋತ್ತರ ವ್ಯಾಸಂಗಗಳು ಚೆನ್ನಾಗಿ ನಡೆಯಬೇಕೆಂದು
ನಾನು ಸಲಹೆ ಮಾಡುತ್ತೇನೆ. ಬೆಂಗಳೂರು ಮತ್ತು ಸುತ್ತಲು ಇರುವ ಕಾರ್ಖಾನೆಗಳು ಈ
ಕಾಲೇಜುಗಳಿಗೆ ಮತ್ತು ವಿಶ್ವವಿದ್ಯಾನಿಲಯಕ್ಕೆ ಸೊಗಸಾದ ಲ್ಯಾಬೊರೇಟರಿಗಳು ಆಗುತ್ತವೆಂಬುದಾಗಿ
ನಾನು ಹೇಳುತ್ತೇನೆ. ಈ ವಿಶ್ವವಿದ್ಯಾನಿಲಯವನ್ನು ಬರೀ ಪುಸ್ತಕ ವ್ಯಾಸಂಗಕ್ಕಾಗಿ ಇಟ್ಟುಕೊಳ್ಳ
ಕೂಡದು. ಏಕೆಂದರೆ ಉಪಾಧ್ಯಾಯರು ಮತ್ತು ಪ್ರಯೋಗ ಶಾಲೆಗಳು ಇಲ್ಲದೆ ಜ್ಞಾನ ಹೆಚ್ಚುವು
ದಿಲ್ಲ. ತಾಂತ್ರಿಕ ವಿಷಯಗಳನ್ನು, ವೈಜ್ಞಾನಿಕ ಮತ್ತು ಮಾನಸಿಕ ಮುಂತಾದ ವಿಷಯಗಳನ್ನು
ವ್ಯಾಸಂಗ ಮಾಡುವುದಕ್ಕೆ ಮತ್ತು ಆ ಬಗ್ಗೆ ಶಿಕ್ಷಣ ಕೊಡುವುದಕ್ಕೆ ಒಳ್ಳೆಯ ಅವಕಾಶವಿದೆ. ಅದಕ್ಕೋ
ಸ್ಕರವೇ ಬೆಂಗಳೂರಿನಲ್ಲಿ ಒಂದು ವಿಶ್ವವಿದ್ಯಾನಿಲಯ ಬರುವುದು ಸರಿಯೆಂದು ನಾನು ಹೇಳುತ್ತೇನೆ.
ಮಾನ್ಯ ವಿದ್ಯಾ ಮಂತ್ರಿಗಳು ಮೊದಲನೆಯ ದಿವಸ ಈ ಬೆಂಗಳೂರು ವಿಶ್ವವಿದ್ಯಾನಿಲಯ ಮಸೂದೆ
ಯನ್ನು ನಮ್ಮ ಮುಂದೆ ಮಂಡಿಸಿದ ಕಾಲದಲ್ಲಿ ಈ ವಿಶ್ವವಿದ್ಯಾನಿಲಯದಲ್ಲಿ ಭಾರತದ ಯಾವ ಭಾಗದ
ಯಾವ ವಿದ್ಯಾರ್ಥಿ ಯಾದರೂ ಬಂದು ವ್ಯಾಸಂಗ ಮಾಡುವುದಕ್ಕೆ ಅವಕಾಶವಿದೆ ಮತ್ತು ಇದು ರಾಷ್ಟ್ರದ
ವಿಶ್ವವಿದ್ಯಾನಿಲಯವಾಗಿದೆಯೆಂದು ಮಂತ್ರಿಗಳು ಹೇಳಿರುವುದರಿಂದ ಇದು ಬಹಳ ಸ್ವಾಗತಾರ್ಹವಾದ
ವಿಷಯ. ಶ್ರೀಮಾನ್ ಕೃಷ್ಣ ಅವರು ಅಮೇರಿಕಾ ದೇಶದಲ್ಲಿ ಒಂದು ವರ್ಷ ಒಂದು ಕಾಲೇಜಿನಲ್ಲಿ
ಓದಿದ ಮೇಲೆ ಇನ್ನೊಂದು ವರ್ಷ ಬೇರೆ ಕಾಲೇಜಿನಲ್ಲಿ ಓದಲು ವಿದ್ಯಾರ್ಥಿಗಳಿಗೆ ಅವಕಾಶವಿದೆ, ಇಲ್ಲಿ
ಅಂತಹ ಅವಕಾಶವಿಲ್ಲವೆಂದು ಹೇಳಿದ್ದಾರೆ. ಆದ್ದರಿಂದ ಆ ತರಹ ಇಲ್ಲಿ ಅವಕಾಶ ಮಾಡಿಕೊಡಬೇ
ಕೆಂದು ನಾನು ಹೇಳುತ್ತೇನೆ. ಅದಕ್ಕಾಗಿ ಮಾನ್ಯ ಮಂತ್ರಿಗಳು ಈ ವಿಚಾರದಲ್ಲಿ ಹೆಚ್ಚಿಗೆ ಗಮನ
ಕೊಡಬೇಕೆಂದು ಸೂಚಿಸುತ್ತೇನೆ. ಇನ್ನು ಪದವಿಯೋತ್ತರ ಶಿಕ್ಷಣ ಶಾಲೆಗಳಲ್ಲಿ ನಾವು ಬಹಳ ದಕ್ಷರಾದ
ಶಿಕ್ಷಕರನ್ನು ನೇಮಿಸುವ ವಿಷಯದಲ್ಲಿ ಬಹಳ ಎಚ್ಚರಿಕೆಯನ್ನು ವಹಿಸಬೇಕು. ಈಗಾಗಲೇ ನಮ್ಮ
ಸ್ನೇಹಿತರಾದ ಶ್ರೀಮಾನ್ ಮುಕ್ಕಣ್ಣಪ್ಪನವರು ಅನೇಕ ಹೈಸ್ಕೂಲುಗಳಲ್ಲಿ ಉಪಾಧ್ಯಾಯರುಗಳಿಲ್ಲ,
ಕೆಲವು ಕಾಲೇಜುಗಳಲ್ಲಿ ಪ್ರಿನ್ಸಿಪಾಲರುಗಳೇ ಇಲ್ಲವೆಂಬುದಾಗಿ ಹೇಳಿದರು. ಅದು ನಿಜ. ಕಾರಣವೇ
ನೆಂದರೆ ನಮ್ಮ ಸರ್ಕಾರದವರು ಇದುವರೆಗೆ ಪದವಿಯೋತ್ತರ ಶಿಕ್ಷಣ ವ್ಯಾಸಂಗಕ್ಕೆ ಸಾಕಷ್ಟು ಲಕ್ಷ್ಯ
ಕೊಟ್ಟಿಲ್ಲವೆಂದು ಕಂಡುಬರುತ್ತದೆ. ಸಾಕಷ್ಟು ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಸಿಕ್ಕದೆ ಹೋಗಿ
ನಮ್ಮ ಸರ್ಕಾರದವರು ಅನೇಕ ತೊಂದರೆಗಳನ್ನು ಅನುಭವಿಸಿರುವರೆಂದು ನನಗೆ ಕಾಣುತ್ತದೆ.
ಅದಕ್ಕೋಸ್ಕರ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಪದವಿಯೋತ್ತರ ಶಿಕ್ಷಣಕ್ಕೆ ಹೆಚ್ಚು ಗಮನವನ್ನು
ಕೊಡಬೇಕೆಂದು ನಾನು ಹೇಳುತ್ತೇನೆ. ಈಗ ಶ್ರೀಮಾನ್ ಮುಕ್ಕಣ್ಣಪ್ಪನವರು ಹೇಳಿದಹಾಗೆ ಈ
ಬಗ್ಗೆ ಏನೇನು ಕೊರತೆಗಳಿವೆಯೋ ಅವನ್ನು ಸರಿಪಡಿಸಿ ಜಾಗ್ರತೆಯಾಗಿ ಅನುಕೂಲಪಡಿಸುವುದ
ಕ್ಕೋಸ್ಕರ ತಡಮಾಡದೆ ಕೂಡಲೇ ಬೆಂಗಳೂರು ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಬೇಕು. ಅದನ್ನು
ನಾವೆಲ್ಲರೂ ನೋಡಿ ಸಂತೋಷ ಪಡುವಂತೆ ಮಾಡಬೇಕು. ಶ್ರೀಮಾನ್ ಕುರಿಯವರು ಈ ವಿಧೇಯಕ
ವನ್ನು ಈ ಸಭೆಯ ಮುಂದೆ ಇಡುವಾಗ ನಮ್ಮ ದೇಶ ಗಣಿತ ಶಾಸ್ತ್ರ, ವಿಜ್ಞಾನ ಶಾಸ್ತ್ರದಲ್ಲಿ
50-70 ವರ್ಷಗಳು ಹಿಂದುಳಿದಿದೆಯೆಂದು ಹೇಳಿದರು. ಸಂಶೋಧನ ಮತ್ತು ಪರಿಶೋಧನೆಯ
ಕೆಲಸ ಕಾರ್ಯಗಳಲ್ಲಿ ಬಹಳ ಪ್ರಭಾವಯುತವಾಗಿ ಮುಂದುವರಿಯದೆ ಕೇವಲ ಕಲೆಗಳ ವಿಷಯದಲ್ಲಿ
ಹೆಚ್ಚು ಗಮನವನ್ನು ಕೊಡುತ್ತಾ ಇದ್ದೇವೆಂಬುದಾಗಿ ಹೇಳಿದರು. ಆದ್ದರಿಂದ ಇಲ್ಲಿ ಕೇವಲ
ಪದವೀಧರರು ಡಬ್ಬಲ್ ಅಥವಾ ಟ್ರಿಬಲ್ ಗ್ರಾಜುಯೇಟ್‌ಗಳಾಗಿ ಬೇರೆ ಬೇರೆ ವಿಷಯಗಳನ್ನು ತೆಗೆದು
ಕೊಂಡಿರುವುದರಿಂದ ಬಹಳ ಬುದ್ಧಿವಂತರು ಎಂಬುದಾಗಿ ಹೇಳಿದರೂ ಗಣಿತ ಮತ್ತು ವಿಜ್ಞಾನ
ವಿಷಯಗಳಲ್ಲಿ ನಾವು ಬಹಳ ಹಿಂದೆ ಬಿದ್ದಿರುವುದಕ್ಕಾಗಿ ಸ್ವಲ್ಪಮಟ್ಟಿಗೆ ನಾವು ಕುಗ್ಗು ಮನಸ್ಸಿನಿಂದ
ನೋಯಬೇಕಾಗಿದೆ.

ಇದನ್ನು ಸರಿಪಡಿಸುವುದಕ್ಕೋಸ್ಕರ, ತಾಂತ್ರಿಕ ವಿಷಯ, ಗಣಿತ ವಿಷಯ ಇತ್ಯಾದಿ ವಿಷಯ
ಗಳಿಗೆ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಟ್ಟು ಅವುಗಳು ಹೆಚ್ಚು
ಬೆಳವಣಿಗೆಗೆ ಬರುವ ಹಾಗೆ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ಹಣಕಾಸಿನ ವಿಷಯದಲ್ಲಿ ಈ ಮಸೂದೆಯಲ್ಲಿ ಹೇಳಿರುವ ಹಾಗೆ ಇನ್ನೂ ಕೆಲವು ವರ್ಷಗಳಲ್ಲಿ
ಕೇಂದ್ರ ಸರ್ಕಾರದವರು ಬೆಂಗಳೂರಿನ ಯೂನಿವರ್ಸಿಟಿಯನ್ನು ತೆಗೆದುಕೊಳ್ಳುವವರಾಗಿದ್ದಾರೆ,
ಆಗ ನಮ್ಮ ದೇಶದ ಹಣಕಾಸಿನ ಮೇಲೆ ಅದರ ಭಾರ ಬೀಳುವುದಿಲ್ಲ ಎನ್ನುವಂತಹ ಒಂದು ಸೂಚನೆ
ಯನ್ನು ಕೊಟ್ಟಿದ್ದಾರೆ. ಅದನ್ನು ನಾನು ನಂಬುತ್ತೇನೆ. ಆದರೆ ಕೆಲವು ಸಂದರ್ಭಗಳಲ್ಲಿ ಕೇಂದ್ರ
ದವರನ್ನು ನಾವು ನಂಬುವುದಕ್ಕೆ ಸಾಧ್ಯವಾಗುವುದಿಲ್ಲ ಏತಕ್ಕೆಂದರೆ ಹಿಂದೆ ಮೆಂಟಲ್ ಇನ್‌ಸ್ಟಿಟ್ಯೂಟ್
ಮತ್ತು ಹರ್ಟ್ ಇನ್‌ಸ್ಟಿಟ್ಯೂಷನ್ ಇತ್ಯಾದಿಗಳನ್ನು ಕೇಂದ್ರ ಸರ್ಕಾರದವರು ತೆಗೆದುಕೊಳ್ಳುತ್ತೇವೆ

ಎಂದು ಹೇಳಿ ಅವುಗಳನ್ನು ನಮ್ಮ ರಾಜ್ಯದಲ್ಲಿ ಸ್ಥಾಪನೆ ಮಾಡಿದರು. ಆದರೆ ಕೆಲವು ಕಾಲ ಕಳೆದ ಮೇಲೆ ಕೇಂದ್ರ ಸರ್ಕಾರದಲ್ಲಿ ಹಣ ಇಲ್ಲ ಎಂದು ಹೇಳಿ ಆ ಇನ್‌ಸ್ಟಿಟ್ಯೂಷನ್‌ಗಳನ್ನು ನಮ್ಮ ರಾಜ್ಯಕ್ಕೆ ಬಿಟ್ಟುಬಿಟ್ಟರು. ಆಗ ಅವುಗಳ ಹಣಕಾಸಿನ ಹೊರೆ ನಮ್ಮ ರಾಜ್ಯದ ಮೇಲೆಯೇ ಬಿದ್ದು ಹೋಯಿತು. ಆ ರೀತಿ ಆಗವೇ ಇರಲಿ ಎಂದು ನನ್ನ ಆಶಯ. ನಮ್ಮ ಮಾನ್ಯ ವಿದ್ಯಾ ಸಚಿವರು ಈ ವಿಷಯದಲ್ಲಿ ಸ್ವಲ್ಪ ಎಚ್ಚರಿಕೆಯನ್ನು ವಹಿಸಿ ಜಾಗ್ರತೆಯಾಗಿ ಈ ವಿಶ್ವವಿದ್ಯಾನಿಲಯವನ್ನು ಕೇಂದ್ರ ಸರ್ಕಾರದವರು ವಹಿಸಿಕೊಳ್ಳುವಂತೆ ಮಾಡಿ ಅನುಕೂಲ ಮಾಡಿಕೊಡಬೇಕೆಂದು ನಾನು ಹೇಳುತ್ತೇನೆ.

ಯಾರಾದರೂ ರಿಜಿಸ್ಟರ್ಡ್ ಗ್ರಾಜುಯೇಟ್ಸ್ ಇದ್ದರೆ ಅವರು ಯಾವ ಯೂನಿವರ್ಸಿಟಿ ಗ್ರಾಜುಯೇಟೇ ಆಗಿರಲಿ, ಅವರು ರಿಜಿಸ್ಟರ್ಡ್ ಗ್ರಾಜುಯೇಟ್ ಆಗಿದ್ದರೆ ಅವರನ್ನು ಈ ವಿಶ್ವ ವಿದ್ಯಾನಿಲಯದ ರಿಜಿಸ್ಟರ್ಡ್ ಗ್ರಾಜುಯೇಟ್ ಆಗಿ ತೆಗೆದುಕೊಳ್ಳಬೇಕೆಂದು ನಾನು ಸಲಹೆ ಮಾಡುತ್ತೇನೆ.

ಇನ್ನು ಎಲ್ಲರಿಗೂ ಅನುಮಾನ ಪಡುತ್ತಿರುವ 6ನೇ ಕಲಮಿನಲ್ಲಿ "University open to all classes" ಎನ್ನತಕ್ಕದ್ದನ್ನು ಮತದ ವಿಷಯವನ್ನು ಇದರಲ್ಲಿ ಪ್ರಸ್ತಾಪ ಮಾಡಿದ್ದಾರೆ. ಜಾತ್ಯಾತೀತವಾದ ನಮ್ಮ ರಾಜ್ಯದಲ್ಲಿ ಮತಗಳ ವಿಷಯವನ್ನು ಹೇಳಬೇಕಾದ್ದಿಲ್ಲ. ನಾವು ಇಲ್ಲಿ ಸೆಕ್ಯುಲರಿಜಂ ವಿಷಯವನ್ನು ಮಾತನಾಡುವುದಕ್ಕೆ ಹೋದರೆ ಎಲ್ಲರೂ ತಮ್ಮ ಮತಗಳನ್ನು ಬಿಟ್ಟುಬಿಡುವ ಅರ್ಥ ವನ್ನು ಮಾಡುತ್ತಿದ್ದಾರೆ. ಇದು ಸೆಕ್ಯುಲರ್ ಸ್ಟೇಟ್ ಎಂದು ಹೇಳಿದ ಮಾತ್ರಕ್ಕೆ ಇಲ್ಲಿ ಮತಗಳಿಲ್ಲ ಎಂದು ಅರ್ಥ ಒರುವಹಾಗಿಲ್ಲ, ಅಮೇರಿಕಾದಲ್ಲಿಯೂ ಕೂಡ ಸೆಕ್ಯುಲರಿಜಂ ಸ್ಟೇಟ್ ಎಂಬುದು ಇದೆ ಎಂದು ನಾವು ಕೇಳಿದ್ದೇವೆ. ಹಾಗೆಯೇ ನಮ್ಮ ದೇಶದಲ್ಲಿಯೂ ಇದೆ. ಇಲ್ಲಿ ಯಾರು ಯಾವ ಮತ ವನ್ನು ಬೇಕಾದರೂ ಅನುಸರಿಸಬಹುದು. ಇನ್ನೊಂದು ಮತದವರ ವಿರೋಧವಿಲ್ಲದೆ ನಮ್ಮ ಮತವನ್ನು ಉಳಿಸಿಕೊಂಡು ನಡೆದುಕೊಳ್ಳತಕ್ಕ ರೀತಿ ಪಿಡಿದೆಯೋ ಅದಕ್ಕೆ ಸೆಕ್ಯುಲರಿಜಂ ಎಂದು ಅಮೇರಿಕಾದಲ್ಲಿ ಹೇಳುತ್ತಾರೆ. ಈಗ ನಮ್ಮ ದೇಶದ ಪಕ್ಕದಲ್ಲಿ ಪಾಕೀಸ್ತಾನವು ಇಸ್ಲಾಮಿಕ್ ರಾಜ್ಯ ಎಂದು ಹೇಳುತ್ತಾರೆ. ಟಿಬೇಟ್ ಬೌದ್ಧ ದೇಶವಾಗಿದೆ. ನಮ್ಮ ರಾಜ್ಯವನ್ನು ಸೆಕ್ಯುಲರ್ ಸ್ಟೇಟ್, ಜಾತ್ಯಾತೀತ ರಾಜ್ಯ ಎಂದು ಏನು ಹೇಳುತ್ತೇವೆಯೋ ಅದನ್ನು ಬಹಳ ವಿಸ್ತಾರವಾದ ಅರ್ಥದಲ್ಲಿ, ಆಳವಾದ ಅರ್ಥದಲ್ಲಿ ಗಮನಿಸಿ, ಕಾಲೇಜುಗಳಲ್ಲಿ, ವಿಶ್ವವಿದ್ಯಾನಿಲಯಗಳಲ್ಲಿ ಮತಗಳಿಗೆ ಸಂಬಂಧ ಪಟ್ಟ ಪಾಠಗಳನ್ನು ಹೇಳಿಕೊಡುವಂತೆ ವ್ಯವಸ್ಥೆಮಾಡಬೇಕು. ಅಂಥಾ ಪಾಠಗಳನ್ನು ಹೇಳಿ ಕೊಡುವುದಕ್ಕೆ ಮತದ ವಿಷಯದಲ್ಲಿ ಪರಿಣತರಾಗಿರತಕ್ಕವರನ್ನು ನೇಮಿಸಬೇಕು. ಈ ರೀತಿಯಾಗಿ ಮತದ ವಿಷಯದಲ್ಲಿ ವ್ಯಾಸಂಗ ಮಾಡತಕ್ಕ ಅವಕಾಶವನ್ನು ಈ ವಿಶ್ವವಿದ್ಯಾನಿಲಯದಲ್ಲಿ ಕಲ್ಪಿಸಬೇಕು. ಆರನೆಯ ಕಲಮನ್ನು ಸಂಪೂರ್ಣವಾಗಿ ಇಡಬೇಕೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಸಿದ್ದಯ್ಯ ಕಾಶೀಮಠ (ಶಿರಹಟ್ಟಿ).—ಮಾನ್ಯ ಅಧ್ಯಕ್ಷರೇ, ಮಾನ್ಯ ವಿದ್ಯಾಸಚಿವರು ಈ ಸಭೆಯ ಮುಂದಿಟ್ಟಿರುವ ಬೆಂಗಳೂರು ವಿಶ್ವವಿದ್ಯಾನಿಲಯದ ವಿಧೇಯಕವನ್ನು ನಾನು ಸ್ವಾಗತ ಮಾಡುತ್ತೇನೆ. ಈ ರಾಜ್ಯದಲ್ಲಿ ಪತ್ರಿ ವರ್ಷವೂ ಹೆಚ್ಚು ಹೆಚ್ಚಾಗಿ ವಿದ್ಯಾರ್ಥಿಗಳು ಹೆಚ್ಚಿನ ವಿದ್ಯಾಭ್ಯಾಸವನ್ನು ಮಾಡಲು ಅವಕಾಶ ದೊರೆಯುತ್ತಿರುವುದನ್ನು ನೋಡಿದರೆ ನಮಗೆ ಬಹಳ ಸಂತೋಷವಾಗುತ್ತದೆ. ಇವೊತ್ತಿನ ಪರಿಸ್ಥಿತಿಯಲ್ಲಿ ನಮ್ಮ ದೇಶದ ಆರ್ಥಿಕ ಪರಿಸ್ಥಿತಿ ಕೆಟ್ಟಿದ್ದರೂ ಮಾನ್ಯ ವಿದ್ಯಾಮಂತ್ರಿಗಳು ಬಹಳ ಸಾಹಸವನ್ನು ಮಾಡಿ ವಿದ್ಯಾರ್ಥಿಗಳಿಗೆ ಹೆಚ್ಚಿನ ವಿದ್ಯಾಭ್ಯಾಸ ಕ್ಕಾಗಿ ಅನುಕೂಲ ಮಾಡಿಕೊಟ್ಟಿರುವುದನ್ನು ನೋಡಿ ನಾವು ಸಂತೋಷ ಪಡಬೇಕಾಗಿದೆ. ಈ ರಾಜ್ಯದಲ್ಲಿ ಈಗಾಗಲೇ ಕರ್ನಾಟಕ ವಿಶ್ವವಿದ್ಯಾನಿಲಯ ಹಾಗೂ ಮೈಸೂರು ವಿಶ್ವವಿದ್ಯಾನಿಲಯಗಳು ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಹಾಗೆ ಅನೇಕ ಸವಲತ್ತುಗಳನ್ನು ಒದಗಿಸಿಕೊಡುತ್ತಾ ಬಂದಿವೆ. ಹೋದವರ್ಷ ಒಂದು ಅಗ್ರಿಕಲ್‌ಚರಲ್ ಸೈನ್ಸ್ ಕಾಲೇಜನ್ನು ಸ್ಥಾಪಿಸಿ ಅದರ ಮುಖಾಂತರ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಅನುಕೂಲವನ್ನು ಮಾಡಿಕೊಡುತ್ತಾ ಬಂದಿದ್ದಾರೆ. ಇವೊತ್ತಿನ ದಿವಸ ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿ ಅಷ್ಟು ಚೆನ್ನಾಗಿಲ್ಲದೆ ಇದ್ದರೂ ಮಾನ್ಯ ವಿದ್ಯಾಮಂತ್ರಿಗಳು ಈ ಬೆಂಗಳೂರು ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡುವುದಕ್ಕೆ ಯೋಚನೆಯನ್ನು ಮಾಡಿದ್ದಾರೆ. ಮಾನ್ಯ ವಿದ್ಯಾಮಂತ್ರಿಗಳು ಈ ವಿಧೇಯಕವನ್ನು ಈ ಸಭೆಯ ಮುಂದೆ ಮಂಡಿಸುವಾಗ ಯಾವ ಯಾವ ಸೋರ್ಸಸ್ ಮುಖಾಂತರ ಈ ಯೂನಿವರ್ಸಿಟಿಗೆ ರೊಕ್ಕವನ್ನು ಒದಗಿಸಿಕೊಳ್ಳುತ್ತಾರೆ ಎನ್ನುವುದನ್ನು ವಿಶದ ಪಡಿಸಿದ್ದಾರೆ ಈ ವಿಷಯದಲ್ಲಿ ಯಾರೂ ಯಾವ ಮಾತುಗಳನ್ನು ಆಡುವುದಕ್ಕೆ ಆಸ್ಪದವಾಗುತ್ತಿರಲಿಲ್ಲ. ಯೂನಿವರ್ಸಿಟಿ ಗ್ರ್ಯಾಂಟ್ ಕಮಿಷನ್‌ನವರು ನೇಮಕಮಾಡಿದ್ದ ಕಮಿಟಿ ಯವರು ಈ ಬೆಂಗಳೂರು ಯೂನಿವರ್ಸಿಟಿಯನ್ನು 1964-65ನೇ ಇಸವಿಯಲ್ಲಿಯೇ ಸ್ಥಾಪನೆಮಾಡ ಬೇಕು, ಅನಂತರ ಅದನ್ನು ಕೇಂದ್ರ ಸರ್ಕಾರದವರು ವಹಿಸಿಕೊಳ್ಳುತ್ತಾರೆಂದು ಹೇಳಿದ್ದಾರೆ. ಈಗ ತಾತ್ಕಾಲಿಕವಾಗಿ ಈ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡುವಾಗ ಅದಕ್ಕೆ ಬೇಕಾಗತಕ್ಕಂಥ

(ಶ್ರೀ ಸಿದ್ದಯ್ಯ ಕಾಶೀಮಠ)

ರೊಕ್ಕವನ್ನು ಎಲ್ಲಿಂದ ತರುತ್ತಾರೆ, ಯಾವ ರೀತಿ ಮಾಡುತ್ತಾರೆ ಎಂಬುದನ್ನು ಹೇಳಿಲ್ಲ. ಈಗ ಸದ್ಯಕ್ಕೆ ಸೆಂಟ್ರಲ್ ಕಾಲೇಜು ಬಿಲ್ಡಿಂಗ್‌ನ್ನು ಉಪಯೋಗ ಮಾಡಿಕೊಂಡು ಅದರ ಮುಖಾಂತರ ಈ ಕಾಲೇಜನ್ನು ನಡೆಸಬೇಕು ಎಂದು ಫೈನಾನ್ಷಿಯಲ್ ಮೆಮೋರಾಂಡಂನಲ್ಲಿ ಹೇಳಿದ್ದಾರೆ. ಮತ್ತು ಪ್ರತಿ ವರ್ಷವೂ ಇದಕ್ಕೆ ಏಳು ಲಕ್ಷ ರೂಪಾಯಿಗಳ ಗ್ರಾಂಟನ್ನು ಕೊಡುತ್ತೇವೆಂದು ಹೇಳಿದ್ದಾರೆ ಆದರೂ ಕೆಲವು ಮಾನ್ಯ ಸದಸ್ಯರು ಯಾವ ರೀತಿಯಾಗಿ ಈ ಯೂನಿವರ್ಸಿಟಿಯನ್ನು ನಡೆಸುತ್ತಾರೆ, ಎಂದು ಒಂದು ಅನುಮಾನವನ್ನು ವ್ಯಕ್ತಪಡಿಸುತ್ತಿದ್ದಾರೆ. ಯೂನಿವರ್ಸಿಟಿ ಗ್ರ್ಯಾಂಟ್ ಕಮಿಷನ್ನಿನವರು ನೇಮಕ ಮಾಡಿದ್ದ ಕಮಿಟಿಯವರು ಈ ವಿಶ್ವವಿದ್ಯಾನಿಲಯವನ್ನು ಬೆಂಗಳೂರಿನಲ್ಲಿಯೇ ಸ್ಥಾಪನೆ ಮಾಡಬೇಕೆಂದು ಏತಕ್ಕೆ ಸೂಚನೆ ಮಾಡಿದರು ಎಂದರೆ ಈಗ ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ಸ್ವಂತವಾದ ರಿಸರ್ಚ್ ಸ್ಟೇಷನ್, ಎಕ್ವಿಪ್‌ಮೆಂಟ್‌ಗಳು ಮತ್ತು ಇತರೇ ಸೌಲಭ್ಯಗಳು ಇಲ್ಲದೇ ಇದ್ದರೂ ಈಗ ಸದ್ಯಕ್ಕೆ ಸೆಂಟ್ರಲ್ ಕಾಲೇಜ್ ಮುಖಾಂತರ ಅದನ್ನು ಉಪಯೋಗಿಸಿಕೊಂಡು ಈ ವಿಶ್ವವಿದ್ಯಾನಿಲಯವನ್ನು ಪ್ರಾರಂಭ ಮಾಡಬಹುದು ಎನ್ನುವ ದೃಷ್ಟಿಯಿಂದ ಇದನ್ನು ಬೆಂಗಳೂರಿನಲ್ಲಿಯೇ ಸ್ಥಾಪನೆ ಮಾಡಬೇಕೆಂದು ಸೂಚನೆ ಮಾಡಿದ್ದಾರೆ.

ಇನ್ನೂ ಈ ಮಸೂದೆಯ ಚಾಪ್ಟರ್ 3ರಲ್ಲಿ "Officers of the University ಎನ್ನುವುದರಲ್ಲಿ Chancellor, Vice-Chancellor ಅನ್ನು ಮಾತ್ರ ಹೇಳಿದ್ದಾರೆ". ಪ್ರೋ-ಛಾನ್ಸಲರ್‌ನ್ನು ಹೇಳಿಲ್ಲ ಇದರಲ್ಲಿ ಸೇರಿಸಿಲ್ಲ ಬೇರೆ ವಿಶ್ವವಿದ್ಯಾನಿಲಯದಲ್ಲಿ Officers of the University ಯಲ್ಲಿ Pro-Chancellor ಕೂಡ ಇದ್ದಾರೆ. ಆದ್ದರಿಂದ ಅವರನ್ನು ಕೂಡ ಇದರಲ್ಲಿ ಸೇರಿಸಬೇಕು.

ಇನ್ನು ಇದೇ Officers of the University ಎನ್ನುವುದರಲ್ಲಿ Registrar, Bursar ಎಂದು ಹಾಕಿದ್ದಾರೆ. ಈ ಶಬ್ದಗಳು ಹಿಂದಿಯೋ, ಉರ್ದೋ, ಇಂಗ್ಲಿಷೋ, ಅಥವಾ ಕನ್ನಡವೋ ಅದು ನಮಗೆ ಅರ್ಥವಾಗುವುದಿಲ್ಲ. Pay of officers ಎನ್ನುವುದರಲ್ಲಿ Accounts Officer ಎಂದು ಹಾಕಿದ್ದಾರೆ. Bursar ಎನ್ನುವುದಕ್ಕೆ Accounts Officer ಎಂದು ಹಾಕಿದ್ದಾರೋ ಏನೋ ಗೊತ್ತಾಗುವುದಿಲ್ಲ. ಬರ್‌ಸಾರ್ ಅಗಿರತಕ್ಕವರು ಯಾವ ರೀತಿ ಅಕೌಂಟ್ಸ್ ಮಾಡಬೇಕು ಎಂಬುದನ್ನು ವಿಶದಪಡಿಸಬೇಕು. ಬೇರೆ ಯೂನಿವರ್ಸಿಟಿಯಲ್ಲಿ ಇಂಗ್ಲೀಷಿನಲ್ಲಿ ಚೀಫ್ ಅಕೌಂಟ್ಸ್ ಆಫೀಸರ್ ಎಂದು ಹೇಳಿದ್ದಾರೆ. ಆದ್ದರಿಂದ ಬರ್‌ಸಾರ್ ಎನ್ನುವುದನ್ನು ಅಕೌಂಟ್ಸ್ ಆಫೀಸರ್ ಎಂದು ಮಾಡುವುದಕ್ಕೆ ಯಾವ ಅಡ್ಡಿಯೂ ಇಲ್ಲ.

ಇನ್ನು ಸೆಕ್ಷನ್ 10ರಲ್ಲಿ ಛಾನ್ಸಲರ್ ವಿಷಯವನ್ನು ಹೇಳಿದ್ದಾರೆ. ಈಗ ಬೆಂಗಳೂರು ನಗರದಲ್ಲಿ ಹೈಕೋರ್ಟು ಇದೆ. ಈ ಹೈಕೋರ್ಟಿನ ಚೀಫ್ ಜಸ್ಟೀಸ್ ಅವರನ್ನು ಈ ವಿಶ್ವವಿದ್ಯಾನಿಲಯಕ್ಕೆ ಛಾನ್ಸಲರ್ ಆಗಿಯೂ ಮತ್ತು ವಿದ್ಯಾ ಮಂತ್ರಿಗಳನ್ನು ಪ್ರೋ-ಛಾನ್ಸಲರ್ ಆಗಿಯೂ ಮಾಡಬೇಕು. ಈ ಎರಡು ವಿಷಯಗಳನ್ನು ಈ ಕಲಮ್‌ನಲ್ಲಿ ಸೇರಿಸಬೇಕು ಎಂದು ನಾನು ಹೇಳುತ್ತೇನೆ.

ವೈಸ್-ಛಾನ್ಸಲರ್ ಆದವರನ್ನು ಮೂರು ಜನರನ್ನು ಒಳಗೊಂಡ ಒಂದು ಸಮಿತಿಯು ಆರಿಸಿ ಕಳಿಸುವಂಥ ಪಟ್ಟಿಯಿಂದ ಆರಿಸಬೇಕು ಎಂದು ಇದೆ. ಈ ಸಮಿತಿಗೆ ಇಬ್ಬರನ್ನು ಸಿಂಡಿಕೇಟ್ ನಾಮಿನೇಟ್ ಮಾಡುತ್ತದೆ. ಒಬ್ಬರನ್ನು ಛಾನ್ಸಲರು ನಾಮಿನೇಟ್ ಮಾಡುತ್ತಾರೆ. ಈ ಮೂವರಲ್ಲಿ ಒಬ್ಬರನ್ನು ಛಾನ್ಸಲರು ಆ ಸಮಿತಿಯ ಛೇರ್‌ಮನ್ ಆಗಿ ನೇಮಿಸುತ್ತಾರೆ ಎಂದು ಇದೆ. ಎರಡು ಸಾರಿ ಛಾನ್ಸಲರ್ ಅವರಿಗೆ ಅವಕಾಶ ಕೊಟ್ಟಹಾಗೆ ಆಗುತ್ತದೆ. ಮೂರು ಜನರನ್ನು ನಾಮಿನೇಟ್ ಮಾಡಿದ ನಂತರ ಅವರಲ್ಲಿ ಒಬ್ಬರು ಚೇರ್‌ಮನ್ ಆಗಿ ವೈಸ್-ಛಾನ್ಸಲರನ್ನು ಆರಿಸುವುದಕ್ಕೆ ಅವಕಾಶ ಮಾಡಬೇಕು.

4-00 P.M.

ಸೆನೆಟ್ ರಚನೆ ಮಾಡುವುದರಲ್ಲಿ ಎಕ್ಸ್ ಆಫಿಷಿಯೋ ಮೆಂಬರ್ಸ್ ಎನ್ನುವುದರಲ್ಲಿ ಡೈರೆಕ್ಟರ್ ಆಫ್ ಮೆಡಿಕಲ್ ಸರ್ವಿಸಸ್ ಎಂದು ಇದೆ. ಮೆಡಿಕಲ್ ಮತ್ತು ಹೆಲ್ತ್ ಇಲಾಖೆಗಳನ್ನು ಒಂದುಗೂಡಿಸುವ ವಿಚಾರವಿರುವಾಗ ಇದನ್ನು ಯಾವ ರೀತಿಯಾಗಿ ಮಾಡಬೇಕೆಂಬುದನ್ನು ನೋಡಬೇಕಾಗುತ್ತದೆ. ಸೆನೆಟ್‌ನಲ್ಲಿ ಡೈರೆಕ್ಟರ್ ಆಫ್ ಕೊಲಿಜಿಯೇಟ್ ಎಜುಕೇಷನ್ ಇದ್ದರೆ ಒಳ್ಳೆಯದು. ಅವರು ಕಾಲೇಜುಗಳಿಗೆ ಸಂಬಂಧಪಟ್ಟಿರುವುದರಿಂದ ಅವರನ್ನು ಸೆನೆಟ್‌ನಲ್ಲಿ ಸೇರಿಸಬೇಕು ಎಂದು ಹೇಳುತ್ತೇನೆ.

ಸೆನೆಟ್‌ನಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರೂ ಸದಸ್ಯರಾಗಿರಬೇಕೆಂದು ಇದೆ. ಇದರಿಂದ ಮುಂದೆ ತೊಂದರೆ ಬರಬಹುದು. ಇದು ಅಂತರರಾಷ್ಟ್ರೀಯ ನಗರವಾಗಿರುವುದರಿಂದ ಅದಕ್ಕೆ ಯಾವರೀತಿ ಮಾಡಬೇಕೋ ಆ ರೀತಿ ಬದಲಾಯಿಸಬೇಕು ಎಂದು ಹೇಳುತ್ತೇನೆ.

ಚುನಾಯಿತ ಸದಸ್ಯರಲ್ಲಿ ಜುಡಿಷಿಯರಿಯಿಂದ ಒಬ್ಬರನ್ನಾದರೂ ಚುನಾಯಿಸುವುದಕ್ಕೆ ಅವಕಾಶವಿರಬೇಕು ಎಂದು ಸಲಹೆ ಮಾಡುತ್ತೇನೆ. ನಾಮಕರಣ ಮಾಡುವ ಐದು ಜನ ಸದಸ್ಯರಲ್ಲಿ ಒಬ್ಬರಾದರೂ ಮಹಿಳಾ ಪ್ರತಿನಿಧಿಗಳಿರಬೇಕು ಎಂದು ಸಲಹೆ ಮಾಡುತ್ತೇನೆ.

ಡೊನಾರ್ ಮೆಂಬರ್ಸ್ ಏಕೆ ಬೇಕೋ ಗೊತ್ತಿಲ್ಲ. ಒಂದು ಲಕ್ಷ ರೂಪಾಯಿಗಳನ್ನು ಕೊಟ್ಟರೆ ಆಜೀವ ಸದಸ್ಯರಾಗಿರಬಹುದು ಎಂದು ಹೇಳಿದ್ದಾರೆ. 50 ಸಾವಿರ ರೂಪಾಯಿ ಕೊಟ್ಟರೆ ನಾಲ್ಕು ಅವಧಿಗೆ ಸದಸ್ಯರಾಗಿರಬಹುದು ಎಂದು ಹೇಳಿದ್ದಾರೆ. ಒಂದು ಲಕ್ಷ ರೂಪಾಯಿ ಕೊಡುವವರನ್ನು ಮಾತ್ರ ತೆಗೆದುಕೊಂಡರೆ ವಿಶ್ವವಿದ್ಯಾನಿಲಯಕ್ಕೆ ಸ್ವಲ್ಪ ಹಣ ಬಂದಹಾಗೆ ಆಗುತ್ತದೆ. ಆದುದರಿಂದ 50 ಸಾವಿರ ರೂಪಾಯಿ ಕೊಡುವವರು ಡೋನರ್ ಆಗಿರುತ್ತಾರೆ ಎನ್ನುವುದನ್ನು ತೆಗೆಯಬೇಕು ಎಂದು ಹೇಳುತ್ತೇನೆ.

ಈ ವಿಶ್ವವಿದ್ಯಾನಿಲಯ ಆದಷ್ಟು ಬೇಗ ಕಾರ್ಯರೂಪಕ್ಕೆ ಬರಲಿ, ಇದನ್ನು ಮಾಡುವುದು ಸ್ವಾಗತಾರ್ಹವಾದುದು ಎಂದು ಹೇಳಿ ನಾನು ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಗಂಗಾಧರ ನಾಮೋಷಿ (ಗುಲ್ಬರ್ಗ).—ಸ್ವಾಮಿ, ಈ ಎರಡೂವರೆ ವರ್ಷಗಳ ಅವಧಿಯಲ್ಲಿ ಈ ಸರ್ಕಾರದವರು ಏನಾದರೂ ಒಂದು ಒಳ್ಳೆಯ ಕೆಲಸ ಮಾಡಿದ್ದಾರೆ ಎಂದರೆ ಅದು ಬೆಂಗಳೂರಿನಲ್ಲಿ ಒಂದು ವಿಶ್ವವಿದ್ಯಾನಿಲಯ ಮಾಡಬೇಕು ಎಂದು ನಿರ್ಣಯ ಮಾಡಿದ್ದು; ಇದು ಸ್ವಾಗತಾರ್ಹವಾದುದು. ಇದರ ವಿಷಯದಲ್ಲಿ ಹೇಳುವುದಾದರೆ, ಬೆಂಗಳೂರಿನಲ್ಲಿ ಫೆಡರಲ್ ವಿಶ್ವವಿದ್ಯಾನಿಲಯ ಆಗಬೇಕು, ಎಂದು ಅಮೆರಿಕ ಮತ್ತು ಇತರ ಪರ ರಾಷ್ಟ್ರಗಳಲ್ಲಿರುವ ವಿಶ್ವವಿದ್ಯಾನಿಲಯಗಳನ್ನು ನೋಡಿಕೊಂಡು ಮಾಡಿರುತ್ತಾರೆ. ಇದಕ್ಕೆ ಒದಗಿಸಿರುವ ಏಳು ಲಕ್ಷ ರೂಪಾಯಿಗಳು ಹೇಗೆ ಸಾಕಾಗುತ್ತದೆಯೋ ಗೊತ್ತಿಲ್ಲ. ಇದನ್ನು ಇಡೀ ಇಂಡಿಯಾ ದೇಶದಲ್ಲಿಯೇ ಒಂದು ಮಾದರಿ ವಿಶ್ವವಿದ್ಯಾನಿಲಯವಾಗಿರುವಂತೆ ಮಾಡಬೇಕಾಗಿರುವಾಗ ಇದಕ್ಕೆ ಕೊಡುವ ಏಳು ಲಕ್ಷ ರೂಪಾಯಿಗಳಿಂದ ಹೇಗೆ ಮಾಡಬಹುದು ಎನ್ನುವುದು ನನಗೆ ಅರ್ಥವಾಗುವುದಿಲ್ಲ. ಇದಕ್ಕೆ ಬೇಕಾದ ಕೇಂದ್ರ ಸರ್ಕಾರದ ನೆರವನ್ನು ಪಡೆಯುವುದು, ಹಣ ಸಹಾಯವನ್ನು ದೊರಕಿಸಿಕೊಳ್ಳುವುದು ಏನು ಮಾಡುತ್ತಿದ್ದಾರೆಂದು ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಹೇಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ

ಛಾನ್ಸಲರ್ ಆದವರು ಹೈಕೋರ್ಟ್ ಜಡ್ಜ್ ಆಗಿರಬೇಕು ಎಂದು ಕೆಲವು ಮಾನ್ಯ ಸದಸ್ಯರು ಹೇಳಿದರು. ನಾನು ಆ ಸಲಹೆಯನ್ನು ವಿರೋಧಿಸುತ್ತೇನೆ. ಹೈಕೋರ್ಟಿನಲ್ಲಿ ಕೂಡ ಸರ್ಕಾರದ ಕೈವಾಡ ಇದೆ, ಅದರ ಕಾರ್ಯ ನಿರ್ವಹಣೆಯಲ್ಲಿ ಮಧ್ಯೇ ಪ್ರವೇಶ ಮಾಡುತ್ತಾರೆ ಎಂದು ಎಷ್ಟೋ ಟೀಕೆಗಳು ಬರುತ್ತಿವೆ. ಅಂಥ ವಾತಾವರಣ ಏರತಕ್ಕ ಸಂಭವ ಇರಬಾರದು. ಛಾನ್ಸಲರಿಗೂ ಸೆನೆಟ್ ಮೆಂಬರುಗಳಿಗೂ ಇತರರಿಗೂ ಸ್ವಲ್ಪ ಸಂಪರ್ಕ ಬಂದು ಇಲ್ಲದ ಟೀಕೆಗಳಿಗೆ ಅವಕಾಶವಾಗಬಹುದು. ಆದುದರಿಂದ ಇದುವರೆಗೂ ಇತರ ವಿಶ್ವವಿದ್ಯಾನಿಲಯಗಳಲ್ಲಿ ಇರುವಂತೆ ರಾಜ್ಯಪಾಲರಾದವರೇ ಈ ವಿಶ್ವವಿದ್ಯಾನಿಲಯದ ಛಾನ್ಸಲರಾಗಿಯೂ ಇರಬೇಕೆಂಬುದು ನನ್ನ ವಿಚಾರ.

ಮೈಸೂರು ರಾಜ್ಯದಲ್ಲಿ ಫೆಡರಲ್ ವಿಶ್ವವಿದ್ಯಾನಿಲಯಗಳು ಇನ್ನೂ ನಾಲ್ಕು ಆದರೂ ಸಾಕಾಗುವುದಿಲ್ಲ ಎಂದು ನನಗನ್ನಿಸುತ್ತದೆ. ಬೆಂಗಳೂರಿನಲ್ಲಿ ಒಂದು ವಿಶ್ವವಿದ್ಯಾನಿಲಯವಾದರೆ ರಾಜ್ಯದ ಬೇರೆ ಕಡೆಗಳಲ್ಲಿ ಇಂಥ 2 3 ವಿಶ್ವವಿದ್ಯಾನಿಲಯಗಳು ಏಕೆ ಆಗಬಾರದು ಎಂದು ಮಾನ್ಯ ಮಂತ್ರಿಗಳನ್ನೂ ಮತ್ತು ಸರ್ಕಾರವನ್ನೂ ಕೇಳುತ್ತೇನೆ. ಬಂಗಾಳದಲ್ಲಿ 9 ವಿಶ್ವವಿದ್ಯಾನಿಲಯಗಳಿವೆ, ಬೊಂಬಾಯಿನಲ್ಲಿ ನಾಲ್ಕು ಇವೆ. ಇತರ ಕಡೆಗಳಲ್ಲಿಯೂ ಎಷ್ಟೋ ಇವೆ. ಮೊದಲು ಬೊಂಬಾಯಿ ಕರ್ಣಾಟಕದ ನಾಲ್ಕು ಜಿಲ್ಲೆಗಳಿಗೆ ಒಂದು ವಿಶ್ವವಿದ್ಯಾನಿಲಯವನ್ನು ಕೊಟ್ಟರು. ಹಳೇ ಮೈಸೂರಿಗೆ ಒಂದು ವಿಶ್ವವಿದ್ಯಾನಿಲಯವಿದೆ. ವಿಲೀನಗೊಂಡಿರುವ ಪ್ರದೇಶಗಳಾದ ಹೈದರಾಬಾದು ಕರ್ಣಾಟಕ, ಕೊಡಗು ಮತ್ತು ಮಂಗಳೂರು ಭಾಗಗಳು ಬಂದು ಸೇರಿದ ನಂತರ ರಾಜ್ಯ ದೊಡ್ಡದಾಗಿರುವುದರಿಂದ ನಾಲ್ಕೈದು ವಿಶ್ವವಿದ್ಯಾನಿಲಯಗಳು ಆಗಬೇಕೆಂಬುದು ನನ್ನ ಆಸೆ. ನಾಲ್ಕೈದು ಜಿಲ್ಲೆಗಳಿಗೆ ಒಂದೊಂದು ವಿಶ್ವವಿದ್ಯಾನಿಲಯ ಆಗಬೇಕು. ಹೈದರಾಬಾದು ಕರ್ಣಾಟಕಕ್ಕೆ ಒಂದು ವಿಶ್ವವಿದ್ಯಾನಿಲಯ ಆಗಬೇಕು. ಮಂಗಳೂರಿನಲ್ಲಿ ವಿದ್ಯಾಭ್ಯಾಸ ಒಳ್ಳೆಯ ಮಟ್ಟದಲ್ಲಿ ನಡೆಯುತ್ತಿದೆ, ಒಳ್ಳೆಯ ರೀತಿಯಲ್ಲಿ ವಿದ್ಯಾಭ್ಯಾಸ ಮುಂದುವರೆದಿದೆ. ಈಗ ಅಲ್ಲಿ ಒಂದು ಸರ್ವ ಋತು ಬಂದರಾದ ನಂತರ ಅದಕ್ಕೆ ಇನ್ನೂ ಹೆಚ್ಚು ಪ್ರಾಮುಖ್ಯತೆ ಬರುತ್ತದೆ. ಆದ್ದರಿಂದ ಮಂಗಳೂರಿಗೂ ಒಂದು ವಿಶ್ವವಿದ್ಯಾನಿಲಯವಾಗಬೇಕು. ಹೀಗೆ ಇನ್ನೂ ಹೆಚ್ಚು ವಿಶ್ವವಿದ್ಯಾನಿಲಯಗಳನ್ನು ಮಾಡತಕ್ಕ ಸಾಹಸವನ್ನು ಈ ಸರ್ಕಾರ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಈ ವಿಷಯದಲ್ಲಿ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ನಾನು ತಮ್ಮನ್ನು ವಂದಿಸುತ್ತೇನೆ.

ಶ್ರೀ ಪಿ. ಎಂ. ದೇವ್ (ಗುಬ್ಬಿ).—ಸ್ವಾಮಿ, ಬೆಂಗಳೂರು ವಿಶ್ವವಿದ್ಯಾನಿಲಯ ಫೆಡರಲ್ ವಿಶ್ವವಿದ್ಯಾನಿಲಯ ಆಗಬೇಕೆಂದು ಈ ಮಸೂದೆಯನ್ನು ತಂದಿರುವುದು ಬಹಳ ಸ್ವಾಗತಾರ್ಹ. ಇದನ್ನು 1964-65ನೇ ವರ್ಷದಿಂದಲೇ ಪ್ರಾರಂಭ ಮಾಡಬೇಕೆಂದು ಹೇಳಿದ್ದಾರೆ. ಇದು ಬಹಳ ಒಳ್ಳೆಯದು.

ವೈಸ್-ಛಾನ್ಸಲರನ್ನು ಆರಿಸುವಾಗ ಸಿಂಡಿಕೇಟ್‌ನಿಂದ ಇಬ್ಬರು ಮತ್ತು ಛಾನ್ಸಲರು ಒಬ್ಬರನ್ನು ನಾಮಕರಣ ಮಾಡಿ ಸಮಿತಿಯನ್ನು ರಚಿಸಬೇಕು ಎಂದು ಇದೆ. ವೈಸ್-ಛಾನ್ಸಲರನ್ನು ಆರಿಸುವಾಗ ಯಾರ ಇಂಟರ್‌ಫರೆನ್ಸ್ ಸಹ ಇರಬಾರದು. ಈ ವಿಚಾರದಲ್ಲಿ ಬೇರೆ ಪ್ರಾಂತಗಳಲ್ಲಿ ಯಾವ ರೀತಿ ಇದೆ, ಯಾವ ರೀತಿ ವೈಸ್-ಛಾನ್ಸಲರನ್ನು ಆರಿಸಬೇಕು ಎಂದು ಬಹಳ ಒತ್ತಾಯ ಪೂರ್ವಕ ಅನೇಕ ಸದಸ್ಯರು ಮಾತನಾಡಿದ್ದಾರೆ. ಆದುದರಿಂದ ಈ ಮಸೂದೆಯನ್ನು ಸೆಲೆಕ್ಟ್ ಕಮಿಟಿಗೆ ಕಳಿಸಿ ಈಗಿನ ಅಧಿವೇಶನ ಆಗುವುದರೊಳಗಾಗಿ ಪಾಸು ಮಾಡಿ ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡುವುದು ಒಳ್ಳೆಯದು ಎಂದು ನನಗನ್ನಿಸುತ್ತದೆ.

ಫೈನಾನ್ಷಿಯಲ್ ಮೆಮೊರಾಂಡಂನಲ್ಲಿ ಈ ವಿಶ್ವವಿದ್ಯಾನಿಲಯದ ನಿರ್ವಹಣೆಗಾಗಿ ಏಳು ಲಕ್ಷ ರೂಪಾಯಿಗಳನ್ನು ಕೊಡಬೇಕಾಗುತ್ತದೆ, ಇದಕ್ಕೆ ಕನ್‌ಸಾಲಿಡೇಟೆಡ್ ಫಂಡಿನಿಂದ ಏನೂ ತೆಗೆದು ಕೊಳ್ಳುವುದಿಲ್ಲ, ಬೆಂಗಳೂರು ಸೆಂಟ್ರಲ್ ಕಾಲೇಜನ್ನು ನ್ಯೂಕ್ಲಿಯಸ್ ಆಗಿ ಇಟ್ಟುಕೊಂಡು ಡೆವಲಪ್ ಮಾಡುತ್ತೇವೆ ಎಂದು ಹೇಳಿದ್ದಾರೆ. ವಾಸ್ತವವಾಗಿ ನೋಡಿದರೆ ಬಹಳ ಅನುಕೂಲತೆಗಳು ಸಿಕ್ಕಬೇಕು, ಹಣ ಸಹಾಯ ಸಿಕ್ಕಬೇಕು, ಕಟ್ಟಡಗಳು ಬೇಕು ಎನ್ನುವುದು ನಿರ್ವಿವಾದವಾದ ವಿಚಾರ. ಇನ್ನೊಂದು ವಿಷಯವೇನೆಂದರೆ, ಮೈಸೂರು ದೇಶದಲ್ಲಿ ವಿಶೇಷ ರೀತಿಯ ಯೋಜನೆಗಳಾಗುತ್ತಿರುವುದರಿಂದ ಪೋಸ್ಟ್ ಗ್ರ್ಯಾಜುಯೇಟ್ ಶಿಕ್ಷಣ ಪಡೆದವರು ಬೇಕಾಗುತ್ತಾರೆ. ಅನೇಕ ಕೈಗಾರಿಕೆಗಳನ್ನು ಪ್ರಾರಂಭ ಮಾಡಬೇಕಾಗುತ್ತದೆ. ಅದಕ್ಕೆ ಜನರು ಸರಿಯಾದವರು ಬೇಕಾಗುತ್ತಾರೆಂದು ಹೇಳುತ್ತಾರೆ. ಆದರೆ ಈ ವಿಶ್ವವಿದ್ಯಾನಿಲಯವನ್ನು ಕೇಂದ್ರ ಸರಕಾರ ತೆಗೆದುಕೊಳ್ಳದೇ ಹೋದರೆ ಇದರ ಪಾಡೇನಾಗುತ್ತದೆಂದು ನಾವು ಯೋಚನೆ ಮಾಡಬೇಕಾಗುತ್ತದೆ. ಒಂದೇಸಾರಿ ಒಂದು ಲಕ್ಷ ರೂಪಾಯಿ, ಐವತ್ತು ಸಾವಿರ ರೂಪಾಯಿ ಡೊನೇಷನ್ ಕೊಡುವವರು ವಿಶ್ವವಿದ್ಯಾನಿಲಯದ ಸದಸ್ಯರಾಗಬಹುದೆಂದು ಈ ಮಸೂದೆಯಲ್ಲಿ ನಮೂದು ಮಾಡಿದ್ದಾರೆ. ಇದರ ಉದ್ದೇಶಗಳಲ್ಲಿ ಕೆಲವು ವಿಚಾರಗಳನ್ನು ಹೇಳಿದ್ದಾರೆ. ಕೈಗಾರಿಕೆಗಳಿಗೆ ವಿದ್ಯಾವಂತರೂ, ತಜ್ಞರೂ ಬೇಕಾಗುತ್ತಾರೆ. ಅವರನ್ನು ತಯಾರು ಮಾಡಲು ಇದನ್ನು ಸ್ಥಾಪಿಸುವುದು ಅಗತ್ಯವೆಂದು ಹೇಳಿದ್ದಾರೆ. ಆದರೆ ಇದನ್ನು ಕೇಂದ್ರ ಸರಕಾರ ತೆಗೆದುಕೊಳ್ಳದಿದ್ದರೆ ಏನಾಗಬಹುದೆಂಬುದನ್ನು ಯೋಚನೆ ಮಾಡಬೇಕು. ಆ ಕಾರಣ ಯಾವ ಕೈಗಾರಿಕೆಗಳಿಗೆ ಅಧಿಕಾರಿಗಳನ್ನು ನೇಮಕ ಮಾಡಿಕೊಳ್ಳುತ್ತಾರೋ ಅಂಥ ಕೈಗಾರಿಕೆಗಳ ವಾರ್ಷಿಕ ಆದಾಯ, ಸಿಬ್ಬಂದಿ ಇವುಗಳನ್ನೆಲ್ಲ ಗಮನಿಸಿ ಅವರು ಖಾಯಂ ಆಗಿ ಇದರ ಖರ್ಚಿನ ಒಂದು ಭಾಗವನ್ನು ಕೊಡಬೇಕೆಂದು ಮಾಡಿದರೆ ಒಳ್ಳೆಯದು. ಕೈಗಾರಿಕೆ ತೀವ್ರವಾಗಿ ಬೆಳವಣಿಗೆಯಾಗುತ್ತಿದೆ, ಕಾರ್ಖಾನೆಗಳಿಗೆ ಸರಿಯಾದ ವಿದ್ಯಾವಂತರು, ಶಿಕ್ಷಣ ಪಡೆದವರು ಬೇಕೆಂದು ಅವರ ಶಿಕ್ಷಣಕ್ಕಾಗಿ ಇಷ್ಟು ಹಣವೆಂದು ಇಡುತ್ತಾರೆ ಅಥವಾ ತಾವೇ ಕಾಲೇಜುಗಳನ್ನು ಪ್ರಾರಂಭ ಮಾಡುತ್ತಾರೆ. ಈ ವಿಶ್ವವಿದ್ಯಾನಿಲಯದ ಸೆನೆಟ್‌ನಲ್ಲಿ ಚೇಂಬರ್ ಆಫ್ ಕಾಮರ್ಸ್‌ಗೆ ಪ್ರಾತಿನಿಧ್ಯ ಕೊಟ್ಟಿದೆ. ಸಮಾಜವಾದದ ಒಂದು ಯೋಚನೆ ಮಾಡಿದರೆ, ಪ್ರತಿ ಕೈಗಾರಿಕಾ ಸಂಸ್ಥೆಗೂ ವಿದ್ಯೆಗೆ ಎಂದು ಒಂದು ಸೆಸ್ ಗೊತ್ತುಮಾಡಿ ಇದರಿಂದ ಒಂದು ನಿಧಿಯನ್ನು ಕೂಡಿಸುವುದಕ್ಕೆ ಪ್ರಯತ್ನ ಮಾಡಬೇಕು. ಕೇಂದ್ರ ಸರಕಾರ ಈ ವಿಶ್ವವಿದ್ಯಾನಿಲಯವನ್ನು ವಹಿಸಿಕೊಳ್ಳದೇ ಹೋದರೆ ಬಹಳ ಕಷ್ಟ ಪರಿಸ್ಥಿತಿ ಬರುತ್ತದೆ. ಅವರು ತೆಗೆದುಕೊಂಡರೂ ಈ ಹಣ ಬಂದರೆ ಮಿಡ್ಲ್‌ಸ್ಕೂಲ್ ಮತ್ತು ಪ್ರೈಮರಿ ಸ್ಕೂಲುಗಳಿಗಾಗಿ ವಿನಿಯೋಗ ಮಾಡಬಹುದು.

ಪೋಸ್ಟ್-ಗ್ರ್ಯಾಜುಯೇಟ್ ಕೋರ್ಸುಗಳನ್ನು ಮತ್ತು ಸಂಶೋಧನೆ ಸಂಸ್ಥೆಗಳನ್ನು ಯಾವಾಗ ಪ್ರಾರಂಭ ಮಾಡುತ್ತಾರೋ ಅದಕ್ಕೆ ಒಂದು ಅರ್ಥವಿರಬೇಕು. ಇದಕ್ಕೆ ಏರ್ಪಾಡು ಮಾಡಬೇಕಾದರೆ ವಿವಿಧ ಕೈಗಾರಿಕೆಗಳ ಮತ್ತು ಇತರ ಸಂಸ್ಥೆಗಳ ಪ್ರತಿನಿಧಿಗಳನ್ನು ಕೇಳಿ, ಯಾವ ಯಾವ ಕೋರ್ಸುಗಳನ್ನು ಪ್ರಾರಂಭ ಮಾಡಬೇಕು, ಹಾಗೆ ಮಾಡುವುದಕ್ಕೆ ಬೇರೆ ಬೇರೆ ಕೈಗಾರಿಕೆಗಳು ಎಷ್ಟು ಮಟ್ಟಿಗೆ ಅಭಿವೃದ್ಧಿಯಾಗುತ್ತಿವೆ ಎಂಬುದನ್ನು ನೋಡಿಕೊಂಡು ಮಾಡಬೇಕು. ಎರಡಕ್ಕೂ ಸಂಬಂಧವಿರಬೇಕು. ನನಗಿಂತ ಮೊದಲು ಮಾತನಾಡಿದ ಮಾನ್ಯ ಮಿತ್ರರಾದ ಶ್ರೀಮಾನ್ ಸಂಟಣಕರ್ ಅವರು ಇದರಲ್ಲಿ ಮಿಲಿಟರಿ ಸೈನ್ಸ್ ಕೂಡ ಇರಬೇಕೆಂದು ಹೇಳಿದರು. ನಾನು ಇದನ್ನು ಸ್ವಾಗತಿಸುತ್ತೇನೆ. ಈಗ ರಾಷ್ಟ್ರದಲ್ಲಿ ತುರ್ತು ಪರಿಸ್ಥಿತಿ ಇರುವಾಗ ಅದನ್ನೂ ಸೇರಿಸುವುದು ಒಳ್ಳೆಯದೆಂದು ನನಗನ್ನಿಸುತ್ತದೆ.

ಇನ್ನೊಂದು ಬಹು ಮುಖ್ಯವಾದ ವಿಷಯವೇನೆಂದರೆ. ಈ ವಿದ್ಯಾಸಂಸ್ಥೆಯ ಸಿಬ್ಬಂದಿಗೆ ಸಂಬಳ ಸಾರಿಗೆ ಕೊಡುವುದರಲ್ಲಿ ನಮ್ಮ ಸರಕಾರದ ಸ್ಕೇಲುಗಳಿಗೆ ಬದಲು ಕೇಂದ್ರ ಸರಕಾರದ

ಸಂಬಳ ಸಾರಿಗೆ ಸ್ಕೇಲುಗಳನ್ನು ಕೊಡಬೇಕು. ಹಾಗಿಲ್ಲದಿದ್ದರೆ ಅವರು ಕೊಡುವ ಶಿಕ್ಷಣ ಸರಿಯಾಗಿರುವುದಿಲ್ಲ. ಅವರು ಚೆನ್ನಾಗಿ ಕೆಲಸ ಮಾಡುವುದು ಕಷ್ಟ. ಈ ದೃಷ್ಟಿಯಿಂದ ನೋಡಿ ನಿಗದಿ ಮಾಡುವುದು ಒಳ್ಳೆಯದು. ನಾನಾಗಲೇ ಹೇಳಿದ ಹಾಗೆ ಛಾನ್ಸಲರೇ ವೈಸ್-ಛಾನ್ಸಲರನ್ನು ಏಕೆ ನಾಮಿನೇಟ್ ಮಾಡಬೇಕು? ಇಂತಹದನ್ನು ಆದಷ್ಟು ಬೇಗ ತೆಗದುಹಾಕಬೇಕು. ಈ ಮಸೂದೆಯ ಉದ್ದೇಶ ಮತ್ತು ಸಾಮಾನ್ಯ ನೀತಿಗಳ ವಿಚಾರದಲ್ಲಿ ಭಿನ್ನಾಭಿಪ್ರಾಯವಿಲ್ಲ, ಆದರೆ ಇದರಲ್ಲಿರುವ ಕೆಲವು ಪ್ರಾವಿಷನ್ಸ್ ವಿಷಯದಲ್ಲಿ ಭಿನ್ನಾಭಿಪ್ರಾಯವಿದೆ. ಆದರೂ ಇದು ಕಾರ್ಯಗತವಾಗಲೇಬೇಕು ಇದನ್ನು ಕೇಂದ್ರ ಸರಕಾರ ತೆಗೆದುಕೊಂಡರೆ ಒಳ್ಳೆಯದು. ನಾನಾಗಲೇ ಹೇಳಿದಂತೆ ದೊಡ್ಡ ದೊಡ್ಡ ಕೈಗಾರಿಕೆಗಳ ಆದಾಯ, ಸಿಬ್ಬಂದಿಯ ಆಧಾರದ ಮೇಲೆ ತೆರಿಗೆ ವಿಧಿಸಬೇಕು. ಅಲ್ಲದೆ ಏಳು ಲಕ್ಷ ರೂಪಾಯನ್ನೊದಗಿಸಿ ಒಂದು ವಿಶ್ವವಿದ್ಯಾನಿಲಯ ನಡೆಸುತ್ತೇವೆಂದರೆ, ನಗೆಪಾಟಲಾಗುತ್ತದೆ. ಇಷ್ಟು ಹೇಳಲು ನನಗೆ ಅವಕಾಶ ಕೊಟ್ಟುದಕ್ಕೆ ಅಧ್ಯಕ್ಷರನ್ನು ವಂದಿಸುತ್ತೇನೆ.

†Sri S. R. KANTHI.—Sir, I am extremely thankful to the Members who have taken part in the debate. I have noticed, Sir, that about 14 Members of the House have taken part of which 11 have wholeheartedly supported the Bill. One of them has not supported the Bill, but two of them have supported it in a halting manner. They would like the University to be postponed if not converted into a Post-graduate Research Institute like the Tata Institute of Post graduate studies and Research. Looking into the entire question, I am glad that the Hon'ble Members are happy that Bangalore University is coming. There have been certain criticisms so far as the content of the *Bill* is concerned. There has also been a fear expressed by some of the Hon'ble Members that if this becomes a Central University, what will happen to the students hailing from our State. Sir, first of all, we have to get the University going, and after the University gets going, we will make attempts with the Central Government to take it up as a Central University.

I am sure that the interests of the Mysore people will not suffer. On the contrary their interests will be much more helped by the university being a Central University. Hon'ble Members will remember that when it becomes a Central University, it will be a very big university in the entire South, if not in the North It is going to be one of the premier universities of which anybody will be proud. I had talks with the Chairman, U. G. C. the Union Minister and others. The Chief Minister has also taken the opportunity to discuss the future of the Bangalore University.

I have already said, Sir, that there is no form of commitment anywhere. But the talks we had with them have really encouraged us. It has so much encouraged us that we have a fond hope that something or the other will be done to take it over as a Central University.

Sir, I do not want to give replies to everything that has been said. Because, some of them are such that Government may accept the views of the Hon'ble Members when they are expressed in the form of amendments. I can only refer to my predecessor, the ex-Education Minister Sri Anna Rao Ganamukhi. I was afraid and I am still afraid that he has not thought about the problem. I thought he was just trying to formulate his views while he was speaking. He first said that it was

(SRI S. R. KANTHI)

not necessary to have another university and then went on to say that it should be a post-graduate university. With due respect to his views both as ex-Education Minister and a member of this House, I have to express my complete disagreement with him. He has also said that there is something common between him and me and that both of us are not experts. But there is one thing which is common and that is we have agreed to disagree. I am sure, had he been the Education Minister as he was, now, he would have supported the Bill as much as I have done. But unfortunately for him and for me......

SRI ANNA RAO GANAMUKHI (Afzalpur).—But not in this form.

SRI S. R. KANTHI.—He is not supporting the Bill. While talking about the democratic nature of the Bill, he says that the present Bill is not so democratic.

SRI C. J. MUCKANNAPPA.—So, his speech was disappointing.

